The Council of Ministers or the Cabinet formulates the policy. Only Cabinet Ministers attend the cabinet meeting. Ministers of States have no right to attend the cabinet meetings. But if they are invited, they attend such meetings. A Deputy Minister has no opportunity of coming into contact with the Cabinet. He assists the Cabinet Minister by doing such functions as he may delegate to him.

Besides the above Ministers at the Centre, Parliamentary Secretaries have also been appointed to assist the Ministers in their Parliamentary duties. A separate Act provides for the salary of Parliamentary Secretaries. The Parliamentary Secretaries are not considered as Ministers.

As far as the work in the Lok Sabha is concerned Rule 2 of the Rules of Procedure of the Lok Sabha provides that Minister means a Member of the Council of Ministers; a Minister of State, Deputy Minister or a Parliamentary Secretary. It follows from this that a Deputy Minister or a Parliamentary Secretary can do what a Cabinet Minister can do, *viz.*, answer questions, move motions, etc.

The Ministers' Salaries and Allowances Act 1956, Mysore Act 5 of 1957 does not contain a definition of the Minister as in the Central Act so as to include a Deputy Minister in the Council of Ministers. The Mysore Parliamentary Secretaries Allowances Act 1965 does not specify the duties to be performed by the Parliamentary Secretaries. The Mysore Acts do not specify the duties to be performed by the Deputy Ministers or the Parliamentary Secretaries. We may therefore rely on the view that has been generally accepted, *viz.*, that a Deputy Minister does such functions as are delegated to him by the Minister and the Parliamentary Secretary assists the Minister in his Parliamentary duties.

According to Rule 2 of the Mysore Assembly Rules, Minister means a Member of the Council of Ministers and includes a Deputy Minister and a Parliamentary Secretary can therefore perform such functions as may be performed by a Minister. A Minister answers questions, moves motions, etc. A Deputy Minister and a Parliamentary Secretary can answer questions and move motions, etc., in the same way as a Minister.

If the point of Sri Muckannappa is that a Deputy Minister or a Parliamentary Secretary is not allowed to do certain other things outside the House. it is not a matter to be dealt with by the Speaker. The only way for Sri Muckannappa is to raise the matter when the Demend relating to the Ministers' Salaries is taken up.

BUDGET ETIMATES FOR 1965—66—DEMAND FOR GRANTS. DEMAND No. 37—PUBLIC WORKS.

MR. SPEAKER.—We will resume the Debate. I call upon Sri M.C. Basappa to speak.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೆ ಈ ಸಭೆಯ ಮುಂದೆ ಮಾನ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಈ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ; ಈ ರೀತಿ ನನ್ನ ಅನುಮೋದನೆ ಕೊಡುವ ವೇಳೆಯಲ್ಲಿ ಈ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಹಾಗೂ ಭಾರಿ, ಮೀಡಿಯಮ್ ಮತ್ತು ಸಣ್ಣ ಪ್ರಮಾಣದ ನೀರಾವರಿ ಕಾಂಗಾರಿಗಳ ಬಗ್ಗೆ, ಕೆಲಸ ಎಷ್ಟರ ಮಟ್ಟಿಗೆ ನಡೆಯುತ್ತಾ ಇದೆ ಅನ್ನತಕ್ಕಂಥ ವಿಚಾರದಲ್ಲಿ ಕೆಲವು ಅಂಶಗಳನ್ನು ಈ ಸಭೆಯ ಮುಂದಿಡಬೇಕೆಂದು ನಾನು ಅಪೇಕ್ಷೆಪಡುತ್ತೇನೆ, ಸ್ವಾಮಿ.

ಅನೇಕ ವೇಳೆಯಲ್ಲಿ ಈ ಸಭೆಯ ಸದಸ್ಯರು ಮಾತನಾಡುವಾಗ ಹಾಗೂ ಸರ್ಕಾರದ ವತಿಯಿಂದ ಮಂತ್ರಿಗಳು ಉತ್ತರ ಕೊಡುವಾಗ ನಮಗೆ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ನಮ್ಮ ಸಂಸ್ಥಾನದ ಮಟ್ಟಿಗೆ ನಾವು ತೆಗೆದುಕೊಳ್ಳುವುದಾದರೆ ಸುಮಾರು 35 ಮಿಲಿಯನ್ ಎಕರೆ ಸಾಗುವಳಿ ಮಾಡಬೇಕಾದ ಜಮೀನು ಇದೆ. ಅದರಲ್ಲಿ ನಮ್ಮ ಗುರಿ, ಎಲ್ಲವನ್ನೂ ಕೂಡ ತರಿ ಯೋಗ್ಯವಾಗಿ ಮಾಡಬೇಕಾಗಿದೆ; 8.3 ಮಿಲಿಯನ್ ಎಕರೆಯಷ್ಟು ತರಿಯಾಗಿ ಪರಿವರ್ತನೆ ಮಾಡಬೇಕು ಅಂತ ಹೇಳಿದೆ; ಅಂದರೆ ಒಟ್ಟು ಜಮೀನಿನ ವಿಸ್ತೀರ್ಣದಲ್ಲಿ ಸುಮಾರು ಶೇಕಡ 23 ವರೆ ಎಕರೆ ಭಾಗವನ್ನು ಮಾತ್ರ ತರಿ ಜಮೀನಾಗಿ ಮಾಡಬೇಕು ಎಂದು ಹೇಳಿದ್ದಾರೆ. ನಮ್ಮ ಸಂಸ್ಥಾನದಲ್ಲಿ ತಯಾರಾದಂತ ಪ್ರದೇಶ ಎಷ್ಟಿದೆ ಎಂಬುದನ್ನು ಗಣನೆಗೆ ತೆಗೆದುಕೊಳ್ಳುವುದಾದರೆ ಶೇಕಡ 7.3 ರಷ್ಟು ಮಾತ್ರ ತರಿಯಾಗಿ ಪರಿವರ್ತನೆ ಮಾಡಿದ್ದೇವೆ. ಆದರೆ ನಮ್ಮ ಅಕ್ಕಪಕ್ಕದ ಸಂಸ್ಥಾನಗಳಾದ ಮದ್ರಾಸು, ಆಂಧ್ರ ಮತ್ತು ಕೇರಳದಲ್ಲಿ ಅಂಕಿಅಂಶಗಳನ್ನು ನೋಡುವುದಾದರೆ,

ಮದ್ರಾಸಿನಲ್ಲಿ	ಶೇಕಡ	43.2	ತರಿಯಾಗಿ ಪರಿವರ್ತನೆಯಾಗಿದೆ ;
ಆಂಧ್ರದಲ್ಲಿ	...	27.2	...
ಕೇರಳದಲ್ಲಿ	...	20.2	...

ಅಂದಮೇಲೆ, ನಮ್ಮ ಮೈಸೂರು ಸಂಸ್ಥಾನದಲ್ಲಿ ನಾವು ಈ ಒಂದು ಕಾರ್ಯದಲ್ಲಿ ಬಹಳ ಹಿಂದೆ ಬಿದ್ದಿದ್ದೇವೆ; ಮಾಡಬೇಕಾದ್ದು ಬಹಳವಿದೆ ಎನ್ನತಕ್ಕಂಥದ್ದನ್ನು ಸರಕಾರ ಮನಗಂಡಿದೆ ಎಂದು ಅನೇಕ ವೇಳೆ ಹೇಳುತ್ತಾ ಇದ್ದಾರೆ. ಆದರೆ ನಿಜವಾಗಿಯೂ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಏನೊಂದು ಸಾಧನೆ ಮಾಡಿದ್ದೇವೆ ಎಂಬುದನ್ನು ಹೇಳುವುದಾದರೆ, ಈ ಸಣ್ಣ ನೀರಾವರಿ ಕಾಂಗಾರಿ ವಿಚಾರದಲ್ಲಿ 3ನೇ ಯೋಜನೆಯಲ್ಲಿ 16 ಕೋಟಿ ರೂಪಾಯಿಗಳನ್ನು ನಾವು ಇಟ್ಟುಕೊಂಡಿದ್ದೆವು; ಅದರಲ್ಲಿ ಏಳೂವರೆ ಕೋಟಿ ರೂಪಾಯಿಗಳನ್ನು ಅಗ್ರಿಕಲ್ಚರ್ ಸೆಕ್ಟರ್ ಮುಖಾಂತರ ಮತ್ತು ಎಂಟೂವರೆ ಕೋಟಿ ರೂಪಾಯಿಗಳನ್ನು ಪಬ್ಲಿಕ್ ವರ್ಕ್ಸ್ ಸೆಕ್ಟರ್ ಮುಖಾಂತರ ಖರ್ಚು ಮಾಡಬೇಕೆಂತ ಹೇಳಿ ಗುರಿ ಇಟ್ಟು ಕೊಂಡಿದ್ದೆವು. ಈಗಾಗಲೇ ಹಣಕಾಸಿನ ಮಂತ್ರಿಗಳು ತಿಳಿಸಿದಹಾಗೆ 20 ಕೋಟಿ ರೂಪಾಯಿವರೆಗೆ ಕೂಡ ಖರ್ಚು ಮಾಡಿದ್ದೇವೆ; ಆ ಬಗ್ಗೆ ನಮಗೆ ವಿವರಣೆ ಕೊಟ್ಟಿದ್ದಾರೆ. ಆದರೂ ಕೂಡ ನಾವು ಎಷ್ಟು ಎಕರೆಗಳನ್ನು ತರಿಯಾಗಿ ಪರಿವರ್ತನೆ ಮಾಡಿದ್ದೇವೆಂದು ನೋಡುವ ಪಕ್ಷದಲ್ಲಿ ಸಣ ನೀರಾವರಿ ಕಾಂಗಾರಿಗಳಿಂದ,

ಮೊದಲನೆ ಪ್ಲಾನಿನಲ್ಲಿ		2,70,000	ಎಕರೆ,
ಎರಡನೆ	...	1,53,000	,,
ಮೂರನೆ	...	2,69,000	ಎಕರೆಯಷ್ಟನ್ನು

ಪರಿವರ್ತನೆ ಮಾಡಿದ್ದೇವೆ. ಬಹುಶಃ ನಾವು ಖರ್ಚು ಮಾಡುತ್ತಾ ಇರತಕ್ಕಂಥ ವೇಗ, ಮುಟ್ಟಬೇಕಾದಂಥ ಗುರಿಯ ವೇಗವನ್ನು ನೋಡುವ ಪಕ್ಷದಲ್ಲಿ, ನಿಜವಾಗಿಯೂ ಏನೇನು ಸಾಧನೆ ಮಾಡಬೇಕೆಂದು ಹೇಳಿದ್ದೇವೆಯೋ ಅದನ್ನು ಸಾಧನೆ ಮಾಡುವುದಕ್ಕೆ ಸಾಧ್ಯವೇ ಎಂದು ಎಲ್ಲರಿಗೂ ಸಂಶಯ ಬರುತ್ತದೆ.

ಇನ್ನು ಭಾರಿ ನೀರಾವರಿ ಯೋಜನೆ ಕಾಮಗಾರಿಗಳ ಬಗ್ಗೆ ಎಷ್ಟುಮಟ್ಟಿಗೆ ಹೋಗುತ್ತಿದೆ ಎನ್ನುವುದನ್ನು ಪರಿಶೀಲನೆ ಮಾಡುವುದಾದರೆ, ಮೂರನೇ ಪಾಚವಾರ್ಷಿಕ ಯೋಜನೆಯಲ್ಲಿ 40 ಕೋಟಿ 66 ಲಕ್ಷ ರೂಪಾಯಿಗಳಷ್ಟು ಭಾರಿ ನೀರಾವರಿ ಕಾಮಗಾರಿಗಳಿಗಾಗಿ ಖರ್ಚು ಮಾಡಬೇಕೆನ್ನುವ ಗುರಿಯನ್ನು ಇಟ್ಟುಕೊಂಡಿದ್ದಾರೆ. ಆದರೆ ಇವೊತ್ತು ಇಲ್ಲಿಯ ತನಕ ಮಾಡಿರತಕ್ಕದ್ದು ಮತ್ತು ಮುಂದಿನ ವರ್ಷಕ್ಕಾಗಿ ಹಾಕಿಕೊಂಡಿರುವ ಕಾರ್ಯ ಕ್ರಮಗಳಂತೆ ನಾವು ಎಷ್ಟು ಖರ್ಚ ಮಾಡಬೇಕೆಂದಿದ್ದೇವೆ ಎಂದು ನಮ್ಮ ಅಂಕೆ ಸಂಖ್ಯೆಗಳ ಪ್ರಕಾರ ನೋಡಿದರೆ, ಸುಮಾರು 30 ಕೋಟಿ 61 ಲಕ್ಷ ರೂಪಾಯಿಗಳಷ್ಟು ಖರ್ಚಾಗುತ್ತದೆ ಎಂದು ಗೊತ್ತಾಗುತ್ತದೆ. ಎಂದರೆ ಭಾರಿ ನೀರಾವರಿ ಯೋಜನೆಗಳಿಗಾಗಿ ಸುಮಾರು ಹತ್ತು ಕೋಟಿಯಷ್ಟು ಹಣವನ್ನೂ ವೆಚ್ಚ ಮಾಡುವುದಕ್ಕೆ ಆಗಲಿಲ್ಲ.

† Indicates that the remarks or speeches have not been revised by the member concernde

ಬೆಂಗಳೂರು.

ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೊಟ್ಟಿರುವ ಅಂಕೆ ಅಂಶಗಳನ್ನು ದಿಸ್ಪ್ಲೇ ನೋಡುವುದಾದರೆ ಸುಮಾರು 33 ಕೋಟಿ ರೂಪಾಯಿಗಳಷ್ಟು ಭಾರಿ ನೀರಾವರಿ ಕಾಮಗಾರಿಗಳಿಗಾಗಿ ಖರ್ಚು ಮಾಡಬೇಕೆಂದು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದರು, ಎಂದರೆ ಸುಮಾರು 28 ಕೋಟಿ ರೂಪಾಯಿಗಳಷ್ಟು ಹಣವನ್ನು ಎರಡನೆಯ ಯೋಜನೆಯ ಅಂತ್ಯದಲ್ಲಿ ಖರ್ಚು ಮಾಡಬೇಕೆಂದು ಇತ್ತು. ಆದರೆ ಇದರ ಫಲಿತಾಂಶವನ್ನು ನೋಡಿದ ಸಂದರ್ಭದಲ್ಲಿ ನಮ್ಮ ಗುರಿ ಏನು ಇಟ್ಟುಕೊಂಡಿದ್ದೆವೋ ಅದಕ್ಕೆ ಹೋಲಿಸಿದರೆ 15 ಕೋಟಿಗಳಿಗಿಂತ ಹೆಚ್ಚು ಹಣವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವುದಕ್ಕೂ ಆಗಲಿಲ್ಲ. ಮತ್ತು ಏನು ಗುರಿ ಇಟ್ಟುಕೊಂಡಿದ್ದೆವೋ ಅದನ್ನು ಮಾಡುವುದಕ್ಕೂ ಆಗಲಿಲ್ಲ. ಇಲ್ಲಿರುವ ಅಂಕೆ ಸಂಖ್ಯೆಗಳಿಂದ ಬಹುಶಃ ಒಂದು ಸಂಶಯ ಬರುತ್ತದೆ. ಈ ನೀರಾವರಿ ಕೆಲಸಗಳು ಅಗತ್ಯವಲ್ಲ ಎಂದು ನಮ್ಮ ಸರಕಾರಕ್ಕೆ ಮನವರಿಕೆಯಾಗಿ ಒಂದು ಪಕ್ಷ ಇದನ್ನು ಬಿಟ್ಟು ಬೇರೆ ಯಾವುದೋ ಒಂದು ಕೆಲಸಕ್ಕೆ ಆದ್ಯತೆ ಕೊಡಬೇಕು ಎಂದು ಅಲ್ಲಿ ಕೆಲಸ ಮಾಡುವ ಪಕ್ಷದಲ್ಲಿ ಎರಡು ಮತ್ತು ಮೂರನೇ ಯೋಜನೆಗಳಲ್ಲಿ ಭಾರಿ ನೀರಾವರಿ ಯೋಜನೆಗಳಿಗಾಗಿ ಏತಕ್ಕೋಸ್ಕರವಾಗಿ ಖರ್ಚು ಮಾಡಲಿಲ್ಲ ಎನ್ನುವ ಸಂಶಯ ಬರುತ್ತದೆ. ಬಹುಶಃ ನಮ್ಮ ಹಣಕಾಸಿನ ಮಂತ್ರಿಗಳು ಬಡ್ಜೆಟ್ಟಿನ ಮೇಲೆ ಮಾತನಾಡುತ್ತ ಒಂದು ವಿಚಾರ ಹೇಳಿದರು. ಪ್ಲಾನುಗಳಲ್ಲಿ ಸೀಲಿಂಗ್ ಎಂದು ಇಟ್ಟುಕೊಂಡು ಮೂರನೆಯ ಪಂಚ ವಾರ್ಷಿಕ ಯೋಜನೆಯ ಬಡ್ಜೆಟ್ಟನ್ನು ತಯಾರು ಮಾಡುತ್ತಿದ್ದೇವೆ. ಪ್ಲಾನಿಂಗಿನಲ್ಲಿ ಹಾಕಿರುವ ಸೀಲಿಂಗ್‌ನ್ನು ಮಿತಿಮೀರಿ ಹೋಗುವುದಕ್ಕೆ ಆಗುವುದಿಲ್ಲ ಮತ್ತು ಸೀಲಿಂಗ್‌ನ್ನೂ ಹೆಚ್ಚು ಮಾಡುವುದಕ್ಕೆ ಆಗುವುದಿಲ್ಲ. ಖರ್ಚು ಮಾಡುವುದಕ್ಕೆ ಆಗುವುದಿಲ್ಲ, ಎಂದರೆ, ಅಲ್ಲೇನೂ ಪ್ರಗತಿಯಾಗುವುದಕ್ಕೆ ಸಾಧ್ಯವಾಗಲಿಲ್ಲ. ತತ್ಪಲವಾಗಿ ಭಾರಿ ನೀರಾವರಿ ಯೋಜನೆಯ ಕಾಮಗಾರಿಗಳಿಗಾಗಿ ಎಷ್ಟು ಹಣವನ್ನು ಖರ್ಚು ಮಾಡಬೇಕಾಗಿತ್ತೋ ಅದು ಈ ವರ್ಷ ಆಗಲಿಲ್ಲ ಮುಂದಿನ ವರ್ಷಕ್ಕಾಗಿ ಪ್ರಾವಿಷನ್ನು ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ. ಬಹುಶಃ ಯೋಜನೆಯನ್ನೇ ಸ್ವಲ್ಪ ಬದಲಾವಣೆ ಮಾಡತಕ್ಕದ್ದು ಸರಿಯಲ್ಲ ಎಂದು ನಾನು ಇಲ್ಲಿ ಸೂಚನೆ ಕೊಡಬಯಸುತ್ತೇನೆ. ದೊಡ್ಡ ಪ್ರಮಾಣದ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕಾದ ಪಕ್ಷದಲ್ಲಿ ನಿನ್ನೆ ಇಲ್ಲಿ ಮಾತನಾಡಿದ ಒಬ್ಬ ಸದಸ್ಯರು ಹೇಳಿದ ಹಾಗೆ ಕಾವೇರಿ ಬೇಸಿನ್‌ನಲ್ಲಿ ಯಾವ ಯಾವ ಯೋಜನೆಗಳನ್ನು ಮಾಡಬಹುದು ಎನ್ನುವುದನ್ನು ಪರಿಶೀಲನೆ ಮಾಡಬೇಕು. ಎರಡನೇದು ಕಾವೇರಿ ಬೇಸಿನ್‌ನಲ್ಲಿ ನೀರನ್ನುಪಯೋಗಿಸಿಕೊಳ್ಳಲು ನಮಗೂ ಮದರಾಸು ಸರಕಾರಕ್ಕೂ ಆಗಿರುವ ಅಗ್ರೀಮೆಂಟು ಪ್ರಕಾರ 1974ನೇ ಇಸವಿಯೊಳಗೆ ಏನೇನು ಕೆಲಸಗಳನ್ನು ಮಾಡಿ ಎಷ್ಟು ನೀರನ್ನು ಪಯೋಗಿಸಿಕೊಳ್ಳಬೇಕೊ ಆ ಪ್ರಕಾರ ಅನೇಕ ದೊಡ್ಡ ಪ್ರಮಾಣದ ಕಾಮಗಾರಿಗಳನ್ನು ಮಾಡಲು ಪ್ರಯತ್ನ ಮಾಡಬೇಕಾಗಿದೆ. ನಮ್ಮೆಲ್ಲರಿಗೂ ಗೊತ್ತಿರುವಹಾಗೆ ಕಬಿನಿ ಪ್ರಾಜೆಕ್ಟನ್ನು ಪ್ರಾರಂಭ ಮಾಡಿದ್ದಾರೆ. ಆದರೆ ಅದು ನಡೆಯುವ ವೇಗವನ್ನು ನೋಡಿದರೆ ಸಂದೇಹ ಬರುತ್ತದೆ. ಇದು 15 ಕೋಟಿಯಷ್ಟು ಹಣ ಖರ್ಚು ಮಾಡಿ ನಿರ್ಮಾಣವಾಗಬೇಕಾದ ಯೋಜನೆ ಎಂದು ನಿನ್ನೆ ಮಾನ್ಯ ಹಣಕಾಸಿನ ಸಚಿವರು ಉತ್ತರ ಕೊಡತ್ತಾ ಹೇಳಿದ್ದಾರೆ. ಇದರಲ್ಲಿ ಏನಾಗಿದೆ ಎಂದರೆ, 1959ರಲ್ಲಿ ಪ್ರಾರಂಭವಾದ ಈ ಅಣೆಕಟ್ಟು ಎಷ್ಟುಮಟ್ಟಿಗೆ ಹೋಗುತ್ತಿದೆ ಎನ್ನುವುದನ್ನು ನೋಡುವಾಗ ಆರು ವರ್ಷಗಳಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ಕೂಡ ಖರ್ಚು ಮಾಡಿಲ್ಲ. ಇನ್ನೂ ಫೌಂಡೇಷನ್ನನ್ನು ತೋಡಿ ಅದು ಕೂಡ ಭೂಮಟ್ಟಕ್ಕೆ ಬಂದಿಲ್ಲ. ಬಹುಶಃ 15 ಕೋಟಿ ರೂಪಾಯಿಗಳ ಈ ಪ್ರಾಜೆಕ್ಟಿಗಾಗಿ ಕೊನೆಯ ಪಕ್ಷ ಈವರೆಗೆ ನಾಲ್ಕೈದು ಕೋಟಿಯಷ್ಟು ಹಣವನ್ನು ಉಪಯೋಗಿಸಿಕೊಂಡು ಇಲ್ಲಿಯ ಕೆಲಸಗಳು ಆಗಬೇಕಾಗಿತ್ತು. ಹೀಗೆ ಆದರೆ ಇವರ ಪೂರೈಕೆಗಾಗಿ ಏನು ಒಂದು ಗುರಿಯನ್ನು ಇಟ್ಟುಕೊಂಡಿದ್ದೇವೋ ಆ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಇಲ್ಲಿ ವಿನಂತಿ ಮಾಡಿಕೊಳ್ಳಬೇಕಾಗಿದೆ. ಇವೊತ್ತು ಒಂದು ದೊಡ್ಡ ಸಮಸ್ಯೆ ಏನು ಕಾಣುತ್ತಿದೆಯೆಂದರೆ ಹಣ ಇಲ್ಲ ಎಂದು ಹೇಳುವ ಒಂದು ಸಮಸ್ಯೆ. ಅಲ್ಲದೆ ನಮ್ಮ ಇತರ ಪ್ರಾಂತಗಳಲ್ಲಿ ಕೂಡ ನೀರಿನ ಒಂದು ಹಂಚಿಕೆಯ ಬಗ್ಗೆ ಸಂಸ್ಥಾನದಲ್ಲಿ ಒಂದು ವಿವಾದ ಇರತಕ್ಕ ಈ ಸಂದರ್ಭದಲ್ಲಿ ಹಣವಿಲ್ಲ ಎಂದು ನಾವು ಸುಮ್ಮನೆ ಕುಳಿತುಕೊಳ್ಳುಬಾರದು, ನಮ್ಮ ಜನಗಳಿಗೆ ನೀರನ್ನು ಒದಗಿಸಿ ಕೊಡುವುದು ಬಹಳ ಮುಖ್ಯ. ನಮ್ಮ ಸಂಸ್ಥಾನದ ಜನಕ್ಕೆ ನೀರನ್ನು ಅಗತ್ಯವಾಗಿ ಕೊಡಬೇಕು ಎನ್ನುವಾಗ ಹಣ ವಿಲ್ಲ ಎಂದು ಕಾಲವಿಳಂಬ ಮಾಡಿದ ಪಕ್ಷದಲ್ಲಿ ಬಹುಶಃ ಖಾಯಂ ಆಗಿ ನೀರನ್ನುಪಯೋಗಿಸಿಕೊಳ್ಳದೇ ಹೋಗುವ ಸೌಲಭ್ಯ ನಮ್ಮ ಜನಗಳಿಗೆ ಬರುತ್ತದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಆದುದರಿಂದ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಭಾರಿ ಕಾಮಗಾರಿಗಳಿಗಾಗಿ ಒಂದು ಗುರಿಯನ್ನಿಟ್ಟುಕೊಂಡು ಕೆಲಸ ಮಾಡಬೇಕು. ಇಲ್ಲದಿದ್ದರೆ ಅವನ್ನು ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಮುಂದಿನ ಯೋಜನೆಯಲ್ಲಿ ಇದಕ್ಕಾಗಿ ಹಣವನ್ನು ಒದಗಿಸದೇ ಇದ್ದರೂ ಇಂತಹ ಅಗತ್ಯವಾದ ಪರಿಸ್ಥಿತಿಗೆ ಹಣವನ್ನು ಒದಗಿಸಲೇಬೇಕೆಂದು ಈ ಸಂದರ್ಭದಲ್ಲಿ ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

(ಶ್ರೀ ಎಂ. ಸಿ. ಬಸಪ್ಪ)

ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ಈಗ ಸರಕಾರದವರು ಒಂದು ಆಜ್ಞೆಯನ್ನು ಮಾಡಿದ್ದಾರೆ. ಇದರಂತೆ ಕೆಲವು ಕಡೆ ಆಗಬೇಕಾದ ಕೆಲಸಗಳಿಗೆ ಸರಕಾರದವರು ಇನ್ನೂ ಮಂಜೂರಾತಿಯನ್ನು ಕೊಟ್ಟಿಲ್ಲ. ಇದಕ್ಕಾಗಿ ಸುಮಾರು ಹನ್ನೆರಡು ಕೋಟಿಯಷ್ಟು ಹಣವನ್ನು ಇಟ್ಟಿದ್ದರು. ಎಂದರೆ ವರ್ಷಕ್ಕೆ ನಾಲ್ಕು ಕೋಟಿ ರೂಪಾಯಿಗಳಷ್ಟಾದರೂ ಒದಗಿಸಬೇಕಾಗಿತ್ತು. ಇನ್ನೂ ಎರಡು ಮೂರು ವರ್ಷಗಳ ಕಾಲ ಸಣ್ಣ ನೀರಾವರಿ ಯೋಜನೆಗಳ ಕೆಲಸವನ್ನು ಮಾಡಕೂಡದು ಹಾಗೂ ಕೆಲಸಗಳನ್ನು ಪ್ರಾರಂಭ ಮಾಡಿರುವುದನ್ನು ನಿಲ್ಲಿಸಬೇಕು ಎಂದು ಸರಕಾರದ ಆಜ್ಞೆಯಿಂದ ಈಗ ತಿಳಿದು ಬರುತ್ತದೆ. ಬಹುಶಃ ಈ ಯೋಜನೆಗಳು ಈ ಮೊದಲೇ ಪ್ರಾರಂಭವಾಗಿದ್ದ ಪಕ್ಷದಲ್ಲಿ ಈಗ ಅದನ್ನು ನಿಲ್ಲಿಸಬೇಕೆಂದು ಹೇಳಿದರೆ ಅನೇಕ ಪ್ರದೇಶಗಳಲ್ಲಿ ನಡೆಯುತ್ತಿರುವ ಸಣ್ಣ ನೀರಾವರಿ ಯೋಜನೆಗಳು ಕುಂಠಿತವಾಗುತ್ತವೆ ಮತ್ತು ಹೆಚ್ಚಿನ ಪ್ರಗತಿ ಸಾಧನೆ ಮಾಡುವುದಕ್ಕೆ ಆಗುವುದಿಲ್ಲ ಎಂದು ನಾನು ಹೇಳಲು ಅಪೇಕ್ಷೆ ಮಾಡುತ್ತೇನೆ. ಅನೇಕ ಪ್ರದೇಶಗಳಲ್ಲಿ ಹೆಚ್ಚಿನ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡಿರಬಹುದು. ನಮ್ಮ ತಾಲ್ಲೂಕಿನ ಪರಿಸ್ಥಿತಿಯನ್ನೇ ತೆಗೆದುಕೊಳ್ಳೋಣ. ಇಲ್ಲಿ ಒಂದು ಭಾರಿ ನೀರಾವರಿ ಯೋಜನೆ ಮತ್ತು ಎರಡು ಮಧ್ಯಮ ತರಗತಿಯ ನೀರಾವರಿ ಯೋಜನೆಗಳನ್ನು ಕೈಗೊಂಡಿದ್ದಾರೆ. ಆದರೆ ಇಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ಮಾಡಲು ಹೆಚ್ಚು ಅವಕಾಶವಿವೆ. ನಾನಾ ಕಾರಣಗಳಿಂದಾಗಿ ಈಗ್ಗೆ ಎರಡು ಮೂರು ವರ್ಷಗಳಿಂದ ಇಲ್ಲೇನೂ ಕೆಲಸಗಳು ಆಗಲಿಲ್ಲ. ಈಗ ಸರಕಾರ ಒಂದು ಆಜ್ಞೆ ಹೊರಡಿಸಿ ಯಾವ ಸಣ್ಣ ನೀರಾವರಿ ಯೋಜನೆಗಳಿಗೂ ಮಂಜೂರಾತಿ ಕೊಡಬಾರದು, ಎಂದು ಮಾಡಿದ್ದಾರೆ. ಇದರಿಂದೇನಾಗಿದೆ ಎಂದರೆ ಜನಗಳು ಇಂತಹ ಕೆಲಸಗಳಾಗುತ್ತವೆ ಎಂದು ಇಲ್ಲಿಯವರೆಗೆ ಕಾದು ಕುಳಿತಿರತಕ್ಕಂಥವರಿಗೆ ಬಹಳ ನಿರಾಶೆಯುಂಟಾಗಿದೆ. ಇದರಿಂದಾಗಿ ವ್ಯವಸಾಯದ ಬಗ್ಗೆ ಯಾವ ಒಂದು ತರಹದ ಪ್ರಗತಿಯನ್ನು ಪಡೆಯುವುದಕ್ಕೂ ಸಾಧ್ಯವಾಗುವುದಿಲ್ಲ. ಎಂದು ನಾನು ಸರಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸಣ್ಣ ನೀರಾವರಿ ಯೋಜನೆಯ ಬಗ್ಗೆ ತಾವು ಕೆಲವು ಕಾರ್ಯಕ್ರಮವನ್ನು ನಿಷ್ಪಕ್ಷಪಾತವಾಗಿ ಕೈಗೊಳ್ಳುವುದು ಮುಖ್ಯ ಎಂದು ನನಗೆ ಕಾಣುತ್ತದೆ. ಸಣ್ಣ ನೀರಾವರಿ ಯೋಜನೆಯನ್ನು ಪ್ರಾರಂಭ ಮಾಡಿದ ಕೂಡಲೇ ಅವರಿಂದ ರಿಟರ್ನ್ ಎಷ್ಟು ಬರುತ್ತದೆ ಅದನ್ನು ನೋಡತಕ್ಕದ್ದು ಅಗತ್ಯ. ಮತ್ತು ಒಂದು ಎಕರೆ ಪ್ರದೇಶದಲ್ಲಿ ಸರಿಯಾಗಿ ವ್ಯವಸಾಯ ಮಾಡಿ ಪರಿವರ್ತನೆ ಮಾಡಬೇಕಾದರೆ ಎಷ್ಟು ಖರ್ಚು ಬೇಕಾಗುತ್ತದೆ ಅದರಲ್ಲಿ ಬರುವ ನಾನಾ ಅಂಕೆ ಸಂಖ್ಯೆಗಳನ್ನು ಗಮನಕ್ಕೆ ತೆಗೆದುಕೊಂಡು ಇವನ್ನು ಮಾಡಬೇಕು. ಬಹುಶಃ ಅಣೆಕಟ್ಟು ಏನು ಮಾಡುತ್ತಾರೆ ಅದರಲ್ಲಿ ಹೆಚ್ಚು ವರಮಾನ ಬರುವಂತೆ ಮಾಡಿದರೆ ಸರಕಾರಕ್ಕೆ ಹೆಚ್ಚಿನ ಆದಾಯ ಬರುತ್ತದೆ. ಹೆಚ್ಚು ವರಮಾನ ಬರತಕ್ಕ ನೀರಾವರಿ ಯೋಜನೆಗಳಲ್ಲಿ ಶೇಕಡಾ 5 ರಷ್ಟು ಅಥವಾ ಆರರಷ್ಟು ವರಮಾನ ಬರುತ್ತದೆ ಎಂದು ನಿಗದಿಯಾಗಿದ್ದರೂ ಅದಕ್ಕಿಂತ ಶೇಕಡಾ ಹತ್ತರಷ್ಟು ವರಮಾನ ಬರುವಂತಹ ಕಾಮಗಾರಿ ಕೆಲಸಗಳನ್ನು ವರ್ಕ್ ಔಟು ಮಾಡಿ ತೆಗೆದುಕೊಂಡಿಲ್ಲ. ಎಲ್ಲಿ ಹೆಚ್ಚು ಪ್ರತಿಫಲ ದೊರಕುತ್ತದೆಯೋ ಅಲ್ಲಿ ಹೆಚ್ಚು ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡಿಲ್ಲ. ಇಂತಹ ಕಡೆಗಳಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಬಹುದು ಎಂದು ಆಜ್ಞೆ ಕೊಡುವುದು ಸೂಕ್ತವೆಂದು ನಾನು ಇಲ್ಲಿ ಹೇಳಬಯಸುತ್ತೇನೆ. ಮತ್ತು ಅಭಿವೃದ್ಧಿ ಕೆಲಸಗಳನ್ನು ಮಾಡಿ ಬಡ್ಜೆಟ್ಟಿನಲ್ಲಿ ಸೇರಿಸಬೇಕೆಂದು ಲಿಫ್ಟ್ ಇರಿಗೇಷನ್ ಸ್ಕೀಮು ಎಂದು ಪ್ರತಿ ವರ್ಷವೂ ಸೇರಿಸುತ್ತಾರೆ. ಅದರಂತೆ ಈ ವರ್ಷವೂ ಸೇರಿಸಿದ್ದಾರೆ. ಅನೇಕ ಕಡೆಗಳಲ್ಲಿ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಮಾಡಿ ಅದಕ್ಕೆ ಕೇಂದ್ರ ಸರಕಾರದ ಮಂಜೂರಾತಿ ಕಳುಹಿಸಿಕೊಡುತ್ತಾರೆ ಎಂದು ಹೇಳುತ್ತಾರೆ. ಈಗಾಗಲೇ ಲಿಫ್ಟ್ ಇರಿಗೇಷನ್ನು ಸ್ಕೀಮು ಎಂದು ಏನಿದೆ ಅದು ನಮ್ಮ ಬಡ್ಜೆಟ್ಟಿನಲ್ಲಿ ಎರಡು ಮೂರು ವರ್ಷಗಳಿಂದಲೂ ಬರುತ್ತಿದೆ, ಆದರೆ ಕೆಲವು ಕೆಲಸಗಳನ್ನು ಬಡ್ಜೆಟ್ಟಿನಲ್ಲಿ ಸೇರಿಸಿದ್ದರೂ ಅದನ್ನು ಪ್ರಾರಂಭ ಮಾಡಿಲ್ಲ. ಅನೇಕ ಸಂದರ್ಭಗಳಲ್ಲಿ ಅವನ್ನೇಕೆ ಪ್ರಾರಂಭ ಮಾಡಿಲ್ಲ ಎಂದರೆ ಅದರ ಬಗ್ಗೆ ನಿರ್ದಿಷ್ಟವಾದ ತೀರ್ಮಾನವನ್ನು ಮಾಡಿಲ್ಲ ಎಂದು ಹೇಳುತ್ತಾರೆ. ಅಲ್ಲದೆ ಇದನ್ನು ಯಾರು ಮೊಂಚೇನು ಮಾಡಬೇಕು ಎನ್ನುವುದರಲ್ಲಿ ಅನುಮಾನಗಳು ಬಂದಿವೆ. ಇದನ್ನು ಕೋ ಆಪರೇಟೀವ್ ಸಂಸ್ಥೆಗಳು ನೋಡಿಕೊಳ್ಳಬೇಕೇ ಅಥವಾ ಸರಕಾರದವರೇ ನೋಡಿಕೊಳ್ಳಬೇಕೇ ಎನ್ನುವುದರ ಬಗ್ಗೆ ಇನ್ನು ತೀರ್ಮಾನಗಳು ಮುಂದುವರಿಯುತ್ತ ಹೇಳಿಕೆಗಳು ಬರುತ್ತಿವೆ. ಈ ವರ್ಷ ಹೇಳುತ್ತಿದ್ದಾರೆ, ಈ ಯೋಜನೆಯನ್ನೆಲ್ಲಾ ಪೂರ್ತಿಯಾಗಿ ಇಂಡಸ್ಟ್ರಿ ಇಲಾಖೆಯವರೇ ನೋಡಿ ಮಂಜೂರಾತಿ ಕಳುಹಿಸಿಕೊಟ್ಟು ಕೆಲವು ಕಡೆ ಕೆಲಸಗಳನ್ನು ಪ್ರಾರಂಭ ಮಾಡುತ್ತಾರೆ ಎಂದು ಹೇಳುತ್ತಾರೆ, ಹೀಗೆ ನಾನಾ ವಿಧವಾದ ಅಭಿಪ್ರಾಯಗಳು ಬರುತ್ತಿವೆ. ಈ ಲಿಫ್ಟ್ ಇರಿಗೇಷನ್ನು ಯೋಜನೆಯನ್ನು ಮಾಡಬೇಕೆಂದು ಕೆಲವು ಖಾಸಗೀ ಜನರು ಮೈಸೂರಿನಲ್ಲಿ ಸೇರಿಕೊಂಡು ಮಾಡುತ್ತಿದ್ದಾರೆ. ಮತ್ತು ಅಲ್ಲಿ ಒಳ್ಳೆಯ ಪ್ರತಿಫಲ ದೊರಕು

ತ್ತಿದೆ. ಇದರ ಬಗ್ಗೆ ಯಾವುದಾದರೂ ನಿರ್ದಿಷ್ಟವಾದ ತೀರ್ಮಾನವನ್ನು ಕೈಗೊಳ್ಳಬೇಕು ಮತ್ತು ಇದಕ್ಕೆ ಅಷ್ಟು ಹೆಚ್ಚು ಕಾಲ ಹಿಡಿಯುವುದಿಲ್ಲ. ಅಲ್ಲದೆ ಈ ಯೋಜನೆಗಾಗಿ ಹೆಚ್ಚು ಹಣವನ್ನೂ ಇಡಬೇಕಾಗಿಲ್ಲ. ಕಡಿಮೆ ಖರ್ಚಿನಲ್ಲಿ ಈ ಲಿಫ್ಟ್ ಇರಿಗೇಷನ್ನು ಪಂಪುಗಳನ್ನು ಹಾಕಿ ವ್ಯವಸಾಯ ಮಾಡುವವರಿಗೆ ಅನುಕೂಲ ಮಾಡಿಕೊಟ್ಟರೆ ಉತ್ತಮವಾದ ಫಲ ದೊರಕುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ವರ್ಷ ಇದನ್ನು ಬಜೆಟ್ಟಿನಲ್ಲಿ ಸೇರಿಸಿರತಕ್ಕಂಥ ವಿಚಾರ ಸಂತೋಷಕರ. ಆದಷ್ಟು ಬೇಗನೆ ಇದಕ್ಕೆ ಮಂಜೂರಾತಿ ಪಡೆದು ಮಾಡತಕ್ಕದ್ದು ಅವಶ್ಯಕ ಎಂಬುದನ್ನು ಸರಕಾರದ ಗಮನಕ್ಕೆ ತಂದು ತಿಳಿಸಲು ಅಪೇಕ್ಷೆ ಪಡುತ್ತೇನೆ. ಮಾತನಾಡಲು ಇನ್ನು ಹೆಚ್ಚು ಕಾಲ ತೆಗೆದುಕೊಳ್ಳಲು ಅಪೇಕ್ಷೆಮಾಡುವುದಿಲ್ಲ.

ಇನ್ನು ಭಾರಿ ನೀರಾವರಿ ಬಗ್ಗೆ ಹೇಳಬೇಕೆಂದಿದ್ದೇನೆ. ಭಾರಿ ನೀರಾವರಿ ಯೋಜನೆಗೆ ಸಾಕಷ್ಟು ಹಣವಿಲ್ಲ ಎಂದು ಹೇಳಿದರು. ಭಾರಿ ನೀರಾವರಿ ಯೋಜನೆಗೆ ಕೈಕೊಳ್ಳದಿದ್ದರೆ ನಮ್ಮ ಪ್ರಗತಿ ಸಾಧನೆಯಾಗುವುದಿಲ್ಲ. ಸರಕಾರದವರು ಇತರ ಯೋಜನೆಗಳ ಖರ್ಚು ಕಡಿಮೆ ಮಾಡಿ ಭಾರಿ ನೀರಾವರಿ ಯೋಜನೆಗೆ ಹಣ ಒದಗಿಸುವುದು ಅಗತ್ಯ. ನಮಗೆ ದೊರೆಯುವ ನೀರನ್ನು ಉಪಯೋಗಿಸತಕ್ಕದ್ದು ಅಗತ್ಯ. ಆಂಧ್ರ ಮತ್ತು ಮದ್ರಾಸು ರಾಜ್ಯಗಳಲ್ಲಿ ಮಾಡುತ್ತಿರುವುದನ್ನು ನಾವು ಉದಾಹರಣೆಯಾಗಿ ನೋಡಬಹುದು. ಅವರು ಬಾಕಿ ಎಲ್ಲಾ ಕೆಲಸ ನಿಲ್ಲಿಸಿ ಭಾರಿ ನೀರಾವರಿ ಯೋಜನೆ ಮಾಡುತ್ತಿದ್ದಾರೆ. ಆದುದರಿಂದ ನಾವಾದರೂ ಕೂಡ ಇತರ ಯೋಜನೆಗಳ ಹಣ ಖರ್ಚು ಮಾಡದೆ ಆ ಹಣವನ್ನು ಇದಕ್ಕೆ ಉಪಯೋಗಿಸಬೇಕು. ಭಾರಿ ನೀರಾವರಿ ಯೋಜನೆಗಳನ್ನು ಖಂಡಿತವಾಗಿ ಕಡೆಗಣಿಸಬಾರದು. ಸಪ್ಲಿಮೆಂಟರಿ ಬಜೆಟ್ಟಿನಲ್ಲಿ ಅಥವಾ ಇನ್ನೊಂದು ಬೇರೆ ಸಂದರ್ಭದಲ್ಲಿ ಹೆಚ್ಚಿನ ಹಣ ಒದಗಿಸಲು ಈ ಸಭೆಯಲ್ಲಿ ಒಪ್ಪಿಗೆ ಪಡೆದು ಭಾರಿ ಕಾಮಗಾರಿಗಳನ್ನು ಮಾಡಬೇಕೆಂದು ಹೇಳಿ ನನ್ನ ಈ ನಾಲ್ಕು ಮಾತು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಮಂಡಿಸಿರತಕ್ಕಂಥ ಡಿಮ್ಯಾಂಡುಗಳ ಬಗ್ಗೆ ಮಾತನಾಡುತ್ತಾ ಕೆಲವು ಸಲಹೆಗಳನ್ನು ಕೊಡಲು ನಾನು ಅಪೇಕ್ಷೆಪಡುತ್ತೇನೆ. ಸಾಮಾನ್ಯ ಆಡಳಿತ ಇಲಾಖೆ ಬಗ್ಗೆ ಹೇಳುವುದಾದರೆ ಸ್ವಾತಂತ್ರ್ಯ ಬರುವ ಮೊದಲು ನಮ್ಮ ದೇಶದಲ್ಲಿ ಬಂದೋಬಸ್ತಾದ ಆಡಳಿತ ಇತ್ತು. ಅಧಿಕಾರವು ನಮ್ಮ ಜನತೆಯ ಕೈಗೆ ಬಂದ ಮೇಲೆ ನಮ್ಮ ದೇಶ ಇನ್ನೂ ಪ್ರಗತಿಪರವಾಗುತ್ತದೆ. ಆಡಳಿತ ಚೆನ್ನಾಗಿ ನಡೆಯುತ್ತದ ಎಂದು ನಾನು ತಿಳಿದುಕೊಂಡಿದ್ದೆ. ಇಂದು ನಮ್ಮ ದೇಶ ಯಾವ ದಿಕ್ಕಿನಲ್ಲಿ ಯಾವ ದೆಶೆಯಲ್ಲಿ ಹೋಗುತ್ತಿದೆ ಎಂದರೆ ಈಗ ಇರತಕ್ಕಂಥ ಆಂಟಿ-ಕರಪ್ಷನ್, C. B. D. report ಮತ್ತು Vigilance Commisionಗಳು ಇವುಗಳನ್ನು ನೋಡಿದರೆ ಯಾವ ದಿಕ್ಕಿನಲ್ಲಿ ಹೋಗುತ್ತಿರುವುದು ಎಂದು ನಮಗೆ ಅರ್ಥವಾಗುತ್ತದೆ. ಘಟಾನುಘಟಿಗಳಾದ ತಮ್ಮಂಥ ದೊಡ್ಡವರು ಇರುವಂಥ ಕಾಲದಲ್ಲಿ ಈ ರೀತಿ ಆಡಳಿತ ಹೋಗುತ್ತಾ ಇದ್ದರೆ ಚಿಕ್ಕ ಪುಟ್ಟ ಮಕ್ಕಳು ಬರುವ ಮುಂದಿನ ಕಾಲದಲ್ಲಿ ಏನಾಗುತ್ತದೆ ಯಾವ ಮಾರ್ಗದಲ್ಲಿ ಹೋಗುತ್ತದೆ ಎನ್ನುವುದನ್ನು ಸ್ವಲ್ಪ ಯೋಚನೆ ಮಾಡಿದರೆ ಬಹಳ ಹೆದರಿಕೆಯಾಗುತ್ತದೆ. ಇದನ್ನು ಇರುವ ದೊಡ್ಡವರು ಸರಿಮಾಡಬೇಕು ಮಾಡುತ್ತಾರೆ ಎಂದು ನನಗೆ ನಂಬಿಕೆ ಇದೆ.

ನಮ್ಮ ರಾಜ್ಯದಲ್ಲಿ ಈಗ ಇರತಕ್ಕಂಥ ಚೀಫ್ ಸೆಕ್ರೆಟರಿಯವರ ನೇಮಕವಾದ ಮೇಲೆ ಆಡಳಿತ ಸುಧಾರಣೆಯ ಬಗ್ಗೆ ನಾನು ಅವರಿಂದ ಬಹಳ ಎಕ್ಸಪೆಕ್ಟ್ ಮಾಡಿದ್ದೆ. ಅವರು ಬಂದ ಮೇಲೆ ಜಾತೀಯ ಭಾವನೆ ಸಣ್ಣ ಪುಟ್ಟ ಭಾವನೆ ಹೋಗಿ ಎಲ್ಲ ಸರಕಾರಿ ಅಧಿಕಾರಿಗಳಿಗೆ ನ್ಯಾಯ ದೊರೆಯುತ್ತದೆ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಈಗ ಏನಾಗಿದೆ ಅಂದರೆ ಅವರು ಹಳಗಿದ ಹಳೇ ಹುಲಿಯ ಕೈಗೆ ಸಿಕ್ಕು ಬಿಟ್ಟು ಹೋಗಿರುವುದರಿಂದ ಅಧಿಕಾರಿಗಳಿಗೆ ನ್ಯಾಯ ಸುತಾರಾಂ ದೊರೆಯುತ್ತಾ ಇಲ್ಲ. ಸಂಬಂಧಪಟ್ಟ ದೊಡ್ಡವರಿಗೆ ತಿಳಿಸಿದರೆ, ಅವರಿಗೆ ತಿಳಿದು ಬಂದರೆ ಇವರು ಅಂದರೆ ಇನ್‌ಫ್ಲ್ಯುಯೆನ್ಸ್ ಮಾಡುತ್ತಾರೆ ಎಂದು ತಿಳಿದುಕೊಂಡು ಬಿಟ್ಟು ಅನ್ಯಾಯವಾಗಿ ಖಾರವಾಗಿ subordinateಗಳಿಗೆ ಶಿಕ್ಷೆ ಮಾಡಿ ಅಧಿಕಾರಿಗಳ ಮನಸ್ಸು ನೋಯಿಸುತಿದ್ದಾರೆ. ಆದುದರಿಂದ ಈ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳು ಅವರಿಗೆ ಸರಿಯಾಗಿ ತಿಳಿಸಿಕೊಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಒಂದೆರಡು ವರ್ಷವಾದರೂ ಯಾವದೇ ಜವಾಬ್ದಾರಿಯುತ ಉತ್ತರ ಅವರಿಂದ ಬರುವುದಿಲ್ಲ ಇದರಿಂದಲೂ ನ್ಯಾಯ ಸಿಕ್ಕುವುದಿಲ್ಲ. ಅಧಿಕಾರಿಗಳಿಗೆ ಅನ್ಯಾಯವಾಗುತ್ತದೆ. ಏನೋ ಕಷ್ಟಕ್ಕೆ ಅಧಿಕಾರಿಗಳು ಸರಕಾರದ ಚಾಕರಿಗೆ ಸೇರಿ ಕಷ್ಟಪಟ್ಟು ಕೆಲಸ ಮಾಡುತ್ತಿರುವಾಗ್ಗೆ ನ್ಯಾಯ ಕೂಡ ದೊರೆಯದೆ ಹೋದರೆ ಅವರು ಇದ್ದರೂ ಇಲ್ಲದ ಹಾಗೆ ಬದುಕಬೇಕಾಗುತ್ತದೆ. ಸತ್ತ ಹಾಗೇ ಆಗುತ್ತದೆ. ಅವರ ಕಷ್ಟ ಸುಖ ನನಗೆ ಚೆನ್ನಾಗಿ ಗೊತ್ತಿದೆ. ಯಾಕೆಂದರೆ ನಾನೂ ಕೂಡ ಒಬ್ಬ ನೌಕರನ ಮಗಳು. ಸರಕಾರಿ ನೌಕರಿಯಲ್ಲಿದ್ದು ಅನ್ಯಾಯದಿಂದ ಕಷ್ಟ ಅನುಭವಿಸುವವರಿಗೆ ಹಾರ್ಟ್ ಫೇಲ್ಯೂರ್ ಆಗುವ ಸ್ಥಿತಿ ಬರುತ್ತದೆ. ತಂದೆಯು ಮಕ್ಕಳನ್ನು

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ನೋಡಿಕೊಳ್ಳುವ ಹಾಗೆ ಇಂಥ ಅನ್ಯಾಯ ಆಗಬಾರದ ಹಾಗೆ ನೋಡಿಕೊಳ್ಳುವುದು ತಂದೆಯ ಸಮಾನವಾಗಿ ಇರತಕ್ಕ ಮುಖ್ಯ ಮಂತ್ರಿಗಳು ಸಾಕಷ್ಟು ಎಚ್ಚರಿಕೆ ತೆಗೆದುಕೊಳ್ಳುತ್ತಾರೆ ಎಂದು ನಂಬಿ ಈ ವಿಷಯ ಇಲ್ಲಿಗೆ ನಿಲ್ಲಿಸುತ್ತೇನೆ.

ಇನ್ನು ಮೈಸೂರು ಡಿಸ್ಟ್ರಿಕ್ಟ್ ಆಫೀಸ್ ವಿಚಾರದಲ್ಲಿ ಒಂದು ಕತೆ ಹೇಳಬೇಕಾಗುತ್ತದೆ. ಈ ಆಫೀಸು ಕುಲಗೆಟ್ಟು ಹಾಳಾಗಿ ಹೋಗಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಬೇರೆ ಯಾವ ಆಫೀಸು ಇಷ್ಟು ಕೆಟ್ಟು ಹೋಗಿರಲಿಕ್ಕಿಲ್ಲ. ಯಾವ ಕಾಗದ ಬರೆದರೂ ಕೂಡ ಉತ್ತರ ದೊರೆಯುವುದಿಲ್ಲ. ಮೂರು ನಾಲ್ಕು ತಿಂಗಳಾದರೂ ಕೂಡ ಆಫೀಸಿನಿಂದ ಅದು ಈಚೆಗೆ ಬರುವುದಿಲ್ಲ. ಜವಾಬು ಸಿಕ್ಕುವುದಿಲ್ಲ. ಅಲ್ಲಿಗೆ ಬರತಕ್ಕಂಥ ಡೆಪ್ಯೂಟಿ ಕಮಿಷನರ್ ಎಲ್ಲ ಅಣಿ ಮುತ್ತುಗಳಾಗಿದ್ದಾರೆ. ಇದು ಯಾವಾಗ ಸರಿಯಾಗುತ್ತದೊ ಏನೋ ? ನಾವು ಕಾಗದ ಬರೆದ ಮೇಲೆ ಅದರ ಹತ್ತಿರ ಹೋಗಿ ಕೇಳಿದರೆ ನನ್ನ ಹತ್ತಿರ ಕಾಗದಬರಲಿಲ್ಲ, ನನ್ನ ಗಮನಕ್ಕೆ ಬರಲಿಲ್ಲ ಎಂದು ಹೇಳುತ್ತಾರೆ. ಅವರ ಹತ್ತಿರ ಒಂದು ಕಾಗದ ಹೋಗಬೇಕಾದರೆ ಅವರ ಸುತ್ತಮುತ್ತ ಇರತಕ್ಕಂಥ ದೇವತೆಗಳಿಗೆ ಸಮಾಧಾನ ಮಾಡಿಸಿ ಕಾಗದ ಹೊರಗೆ ಹಾಕಲು ಸಾಕಷ್ಟು ದುಡ್ಡು ಕೊಡಬೇಕಾಗುತ್ತದೆ. ಡೆಪ್ಯೂಟಿ ಕಮಿಷನರ್ ಆಫೀಸಿನಲ್ಲಿ ನಮಗೇ ಇಷ್ಟು ಕಷ್ಟ ಆಗಬಹುದಾದರೆ ಸಾಮಾನ್ಯ ಜನರಿಗೆ ರೈತರಿಗೆ ಎಷ್ಟು ಅನುಕೂಲವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಆದುದರಿಂದ ಜನರಲ್ ಅಡ್ಮಿನಿಸ್ಟ್ರೇಶನ್ ಹೆಡ್ ಇದನ್ನು ಸರಿಮಾಡಬೇಕು ಎಂದು ಬಿನ್ನವಿಸಿಕೊಳ್ಳುತ್ತೇನೆ.

ಇನ್ನು ಪಬ್ಲಿಕ್ ಸರ್ವಿಸ್ ಕಮಿಷನ್ ವಿಚಾರ ಹೇಳುವುದಾದರೆ ಅವರಿಗೆ ಸಾಕಷ್ಟು ಕೆಲಸ ಇಲ್ಲ ಎಂದು ಫೈನಾನ್ಸ ಮಿನಿಸ್ಟರ್ ಅವರೇ ಒಪ್ಪಿಕೊಂಡಿದ್ದಾರೆ. ಈ ಬಾಬಿಗೆ ವರ್ಷೇ ವರ್ಷೇ ಎಷ್ಟೋ ಹಣ ಖರ್ಚಾಗುತ್ತಿದೆ ಎನುವುದನ್ನು ಅವರೇ ಹೇಳಿದ್ದಾರೆ. ಇದಲ್ಲದೆ ಸರಕಾರಿ ನೌಕರರ ನೇಮಕ ಮಾಡಿಕೊಳ್ಳಲು ಸ್ಟೇಟ್ ಲೇಬರ್‌ರಿಕ್ರೂಟಿಂಗ್ ಆಫೀಸ್ ಎಂದು ಬೇರೆ ವ್ಯವಸ್ಥೆ ಕೂಡ ಇದೆ. ಇದನ್ನು Development Commissioner ರಿಂದ ತಪ್ಪಿಸಿ P.S.Cಗೇ ವಹಿಸಿದರೆ ಕೆಲಸ ಪಿ.ಎಸ್.ಸಿಗೆ ಜಾಸ್ತಿ ಸಿಕ್ಕುತ್ತದೆ ಹಾಗು Development Commissionerಗಳಿಗೆ ಬೇರೆ ಕೆಲಸದ ಕಡೆ ನಿಗ ಕೊಡಲು ಅನುಕೂಲವಾಗುತ್ತದೆ ಎಂದು ಹೇಳಲು ಬಯಸುತ್ತೇನೆ.

ಇನ್ನು ಫ್ಯಾಮಿಲಿ ಪೆನಷನ್ ಕೊಡುವ ವಿಚಾರದಲ್ಲಿ ಒಂದು ಸೂಚನೆ ಮಾಡಲು ಇಷ್ಟಪಡುತ್ತೇನೆ. ಕಷ್ಟಕ್ಕೆ ಅಂದರೆ ವಿಧವೆಯರಾಗಿ, ಕೆಲಸದಲ್ಲಿದ್ದು officerಗಳು ಅಕಸ್ಮಾತ್ ಸತ್ತವರ ಹೆಂಡರಿಗೆ ಫ್ಯಾಮಿಲಿ ಪೆನಷನ್ ಕೊಡುತ್ತಾರೆ. ಆದರೆ ಈಗ ಕೊಡತಕ್ಕಂಥ ಫ್ಯಾಮಿಲಿ ಪೆನ್‌ಷನಿಂದ ಯಾವ ಅನುಕೂಲವಾಗುತ್ತಿಲ್ಲ. ಕಷ್ಟದಲ್ಲಿರತಕ್ಕಂಥವರು ಮಕ್ಕಳಿಗೆ ಶಿಕ್ಷಣ ಕೊಡಲು ತೊಂದರೆಯಾಗುತ್ತದೆ. ಫೀಸ್ ಕೊಡಲು ಹಣವಿರುವುದಿಲ್ಲ. ಊಟಕ್ಕೂ ಸಾಲುವುದಿಲ್ಲ. ಆದುದರಿಂದ ಈಗ ಕೊಡತಕ್ಕ ಫ್ಯಾಮಿಲಿ ಪೆನಷನ್ ಅನು ಜಾಸ್ತಿ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಪಿ. ಡಬ್ಲ್ಯು. ಡಿ. ಇಲಾಖೆಯ ಬಾಬುಗಳಿಗೆ ಒದಗಿಸಿದ ಹಣ ನೋಡಿದರೆ– ನಮ್ಮ ತಾಲ್ಲೂಕಿನಲ್ಲಿ ಯಾವ ಒಂದು ಹೊಸ ಕೆಲಸವನ್ನೂ ಈ ವರ್ಷ ಬಜೆಟ್ಟಿನಲ್ಲಿ ಸೇರಿಸಿಲ್ಲ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಯಾವಾಗಲೂ ಹೇಳುತ್ತಾರೆ, ನಾಗರತ್ನಮ್ಮನವರ ತಾಲ್ಲೂಕಿನಲ್ಲಿ ಎಷ್ಟು ಕೆಲಸ ಮಾಡಿ ಕೊಟ್ಟರೂ ಸಹ ಅವರಿಗೆ ತೃಪ್ತಿ ಇಲ್ಲ ಎಂದು.

ಶ್ರೀ ಎಸ್ ನಿಜಲಿಂಗಪ್ಪ.—ಅದು ನಿಜ. ಅದರಲ್ಲಿ ಅನುಮಾನ ಇಲ್ಲ.

ಶ್ರೀಮತಿ ಕೆ ಎಸ್ ನಾಗರತ್ನಮ್ಮ.—ನಮ್ಮ ತಾಲ್ಲೂಕು ಹುಟ್ಟಿದ ಕಾಲದಿಂದ ಒಂದು project ಮಾಡಿಲ್ಲ. ನಮ್ಮ ತಾಲ್ಲೂಕಿನಲ್ಲಿ ಒಂದು ಪ್ರಾಜೆಕ್ಟು ಆಗಿರಲಿಲ್ಲ. ನಮ್ಮ ತಾಲ್ಲೂಕಿನ ಜನ ಬಹಳ ಒಳ್ಳೆಯ ಜನ. ಪ್ರತಿ ವರ್ಷ ಕಂದಾಯ ತಪ್ಪದೇ ಸರಿಯಾಗಿ ಎಲ್ಲವನ್ನೂ ಕೊಟ್ಟುಬಿಡುತ್ತಾರೆ. ಕಂದಾಯ ಕೊಡುವುದರಲ್ಲಿ ಕಡಿಮೆ ಮಾಡುವುದಿಲ್ಲ. ಯಾವ ಸೆಸ್ಸ್ ಕೇಳಿದರೂ, ಏನು ಬೇಕಾದ್ದು ಕೇಳಿದರೂ ಕೂಡ ಭಯಪಟ್ಟು ಕೊಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರು ಇವರಿಗೇ ಓಟು ಸಹ ಕೊಡುತ್ತಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹೌದು ಓಟು ಸಹ ಕೊಡುತ್ತಾರೆ. ಆದರೆ ಇಂಥ ಒಳ್ಳೇ ಜನರಿಗೆ ಇಷ್ಟು ಅನ್ಯಾಯ ಮಾಡುವದು ಸರಿಯಲ್ಲ. ನಮ್ಮ ತಾಲ್ಲೂಕಿಗೆ ಒಂದೆರಡು ಹೊಸ ಕೆಲಸಗಳನ್ನಾದರೂ ಮಾಡಬೇಕಾಗಿತ್ತು. 50 ಲಕ್ಷ ರೂಪಾಯಿಯನ್ನಾದರೂ ಮಂಜೂರುಮಾಡಬೇಕಾಗಿತ್ತು. ನಮ್ಮದು ಒಂದು ದೊಡ್ಡ ತಾಲ್ಲೂಕು ಆಗಿದೆ. ಬೇರೆ ಸಣ್ಣ ತಾಲ್ಲೂಕುಗಳಿಗೆ ಕೋಟ್ಯಾಂತರ ರೂಪಾಯಿ ಮಂಜೂರು ಮಾಡಿದ್ದೀರಿ. ನಮ್ಮ ತಾಲ್ಲೂಕಿನಲ್ಲಿ 15-20 ಕೆರೆಗಳ ಮೇಲಿಲ್ಲ. ನಮ್ಮ ತಾಲ್ಲೂಕಿನಲ್ಲಿ ಆಗತಕಂಥ ಕೆಲಸವೇನೂ ಜಾಸ್ತಿಯಿಲ್ಲ. ನಮ್ಮ ತಾಲ್ಲೂಕಿನಲ್ಲಿ ಹೆಬ್ಬಳ್ಳ ಪ್ರಾಜೆಕ್ಟ ಒಂದು ಆಗಬೇಕಾಗಿದೆ.

ಈ ಹೆಬ್ಬಳ್ಳ ಪ್ರೊಜೆಕ್ಟಿಗೆ ಒಂದು-ಒಂದೂವರೆ ಕೋಟಿ ರೂಪಾಯಿ ಖರ್ಚಾಗಬಹುದು. ಈ ವರ್ಷದ ಬಜೆಟ್ಟಿನಲ್ಲಿ ಈ ಪ್ರೊಜೆಕ್ಟ್ ಸೇರಿಸಬೇಕು ಎಂದು ಹೇಳುತ್ತೇನೆ. ಇದರಿಂದ ನಮ್ಮ ತಾಲ್ಲೂಕಿನ ಜನರಿಗೆ ಅನುಕೂಲವಾಗುತ್ತದೆ. ಈ ಯೋಜನೆಯ ಬಗ್ಗೆ ಏನಾಯಿತು ಎಂದು ಗುಂಡ್ಲುಪೇಟೆ ಜನ ಕೇಳುತ್ತಾರೆ. ಈ ಯೋಜನೆಯಿಂದ ನೀರಾವರಿ ಅನುಕೂಲ ದೊರೆಯುತ್ತದೆ. ಈಗ ಇರಿಗೇಟೆಡ್ ಲ್ಯಾಂಡ್ಸ್ ಎರಡು-ಮೂರು ಸಾವಿರ ಎಕರೆ ಸಹ ಈ ಭಾಗದಲ್ಲಿಲ್ಲ. ಬಂಡೀಪುರದಲ್ಲಿ ಒಂದು ಕೆರೆ ಪ್ರಾಣಿಗಳಿಗಾಗಿ ಕಟ್ಟಬೇಕಾಗಿದೆ, ಆದರೆ ಈ ಹೆಬ್ಬಳ್ಳ project ನಿಂದ ಆ ಕೆರೆ ಕಟ್ಟಬೇಕಾಗುವುದಿಲ್ಲ. ತನ್ನಪಾಡಿಗೆ ತಾನೇ ಅನುಕೂಲವಾಗುತ್ತದೆ. ಇನ್ನೊಂದು ಕಡೆ ಛಾನೆಲ್ ತೆಗೆದು ಅನುಕೂಲ ಮಾಡಿಕೊಟ್ಟರೆ 15-20 ಸಾವಿರ ಎಕರೆ ಜಮೀನು ನೀರಾವರಿಯಾಗುತ್ತದೆ. ಆದುದರಿಂದ ಅವಶ್ಯವಾಗಿ ಬೇಕಾಗಿರುವ ಈ ಒಂದು ಪ್ರೊಜೆಕ್ಟನ್ನು ಮಾಡಿಕೊಡಬೇಕೆಂದು ನಾನು ಸರಕಾರಕ್ಕೆ ಕೇಳಿಕೊಳ್ಳುತ್ತೇನೆ.

2-30 P.M.

ಇನ್ನು ಎಲೆಕ್ಟ್ರಿಸಿಟಿ ಬೋರ್ಡಿನವರು ನಮ್ಮ ತಾಲ್ಲೂಕಿನಲ್ಲಿ ಬಹಳ ಅನ್ಯಾಯ ಮಾಡುತ್ತಿದ್ದಾರೆ. 1961 ರಿಂದ 1963ರ ವರೆಗೂ ಗುಂಡ್ಲುಪೇಟೆ ವಾಟರ್ ವರ್ಕ್ಸನ್ನು ಪಿ.ಡಬ್ಲ್ಯೂ.ಡಿ. ಅವರೇ ನೋಡಿಕೊಳ್ಳುತ್ತಿದ್ದರು. ಈಗ ಈ ಕೆಲಸವನ್ನು ಮುನಿಸಿಪಾಲಿಟಿಗೆ ಛಾರ್ಜ್ ವಹಿಸಲಾಗಿದೆ. ಈ ಛಾರ್ಜನ್ನು ಅವರಿಗೆ ವಹಿಸತಕ್ಕ ಕಾಲದಲ್ಲಿ Electricity Boardಗೆ ಕೊಡುವ ಹಣವನ್ನೆಲ್ಲಾ ಅವರು ಕೊಟ್ಟುಬಿಟ್ಟಿದ್ದಾರೆಂದು ತಿಳಿಸಿದ್ದಾರೆ. ಆದರೆ ಈಗ ಎಲೆಕ್ಟ್ರಿಸಿಟಿ ಬೋರ್ಡಿನವರು ಒಂದು ನೋಟೀಸನ್ನು ಕೊಟ್ಟು 4 ವರ್ಷಗಳಿಂದಲೂ ಬಹಳ ಅರಿಯರ್ಸ್ ನಿಂತುಹೋಗಿದೆ. ಅದನ್ನೆಲ್ಲಾ ಕೂಡಲೇ ಕಟ್ಟಬೇಕೆಂದು ಒತ್ತಾಯಮಾಡುತ್ತಿದ್ದಾರೆ. ಕೂಡಲೇ ಪಾವತಿ ಮಾಡದಿದ್ದರೆ ಡಿಸ್‌ಕನೆಕ್ಟ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಈ ಬೋರ್ಡಿನವರಿಂದ ಮುನಿಸಿಪಾಲಿಟಿಗೆ ಸಾವಿರಾರು ರೂಪಾಯಿಗಳು ಬರಬೇಕಾದ್ದು ಹಾಗೇ ಬಾಕಿ ನಿಂತಿದೆ. ಅವರು ಕೊಡತಕ್ಕದ್ದನ್ನು ಅವರು ಕೊಡುತ್ತಿಲ್ಲ. ಅವರಿಗೆ ಬರಬೇಕಾದ್ದನ್ನು ಮಾತ್ರ ಕೊಟ್ಟೇಕೊಡಬೇಕೆಂದು ಒತ್ತಾಯಮಾಡುತ್ತಿದ್ದಾರೆ. ಈ ಹಿಂದೆ ಪವರನ್ನು ರಾತ್ರಿ ವೇಳೆಯಲ್ಲಿ ಸರಬರಾಯಿ ಮಾಡುತ್ತಿದ್ದರು. ಆಗ ನಾವು ಇದನ್ನು ಡೇ ಟೈಂ ನಲ್ಲಿ ಸಪ್ಲೈ ಮಾಡಬೇಕೆಂದು ಕೇಳಿಕೊಂಡಿದ್ದೆವು. ಈಗ ಅದನ್ನು ಡೇ ಟೈಮಿನಲ್ಲಿ ಕೊಡುತ್ತಿದ್ದಾರೆ. ಆದರೆ ಇದನ್ನು ಬದಲಾವಣೆ ಮಾಡಿದ್ದರಿಂದ ರೇಟಿನಲ್ಲಿ ಒಂದು ಪೈಸಾ ಹೆಚ್ಚಾದುದನ್ನು ಆ ಹಿಂದಿನಿಂದಲೂ ಇಲ್ಲಿಯವರೆಗೂ ಕೊಡಬೇಕೆಂದು ಒತ್ತಾಯಮಾಡುತ್ತಿದ್ದಾರೆ. ಇದನ್ನೆಲ್ಲಾ ಓವರ್ ನೈಟ್ ಪೇ ಮಾಡಬೇಕೆಂದು ಒತ್ತಾಯಮಾಡುತ್ತಿದ್ದಾರೆ. ಈಗ ಆ ಹಣವನ್ನೆಲ್ಲಾ ಪಿ.ಡಬ್ಲ್ಯೂ.ಡಿ. ಅವರು ಇವರಿಗೆ ಕೊಟ್ಟಿದ್ದಾರೆಯೋ ಇಲ್ಲವೇ ಎಂಬುದನ್ನು ವಿಮರ್ಶೆ ಮಾಡಿಕೊಳ್ಳುವುದಕ್ಕೂ ಕೂಡ ಅವರು ಅವಕಾಶ ಕೊಡುತ್ತಿಲ್ಲ, ಗಲಾಟೆ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಅವರಿಗೆ ಕಾಗದ ಪತ್ರಗಳನ್ನು ಬರೆದರೆ ಅವರು ಜವಾಬನ್ನೇ ಕೊಡುವುದಿಲ್ಲ. ಇಷ್ಟು ಬೇಜವಾಬ್ದಾರಿಯಿಂದ ಅವರು ವರ್ತಿಸುತ್ತಿದ್ದಾರೆ. ಈ ಇಲಾಖೆಯ ವಿಚಾರವನ್ನು ನಾವು ಯಾರಲ್ಲಿ ಹೇಳಿಕೊಳ್ಳಬೇಕೋ ಅದು ನಮಗೆ ಗೊತ್ತಾಗುತ್ತಿಲ್ಲ. ಈ ದಿವಸ ಈ ಬೋರ್ಡಿನವರಿಂದ ಮುನಿಸಿಪಾಲಿಟಿಗೆ ಹೌಸ್ ಟ್ಯಾಕ್ಸ್, ಆಕ್ಟ್ರಾಯಿ ಇತ್ಯಾದಿ ಬಾಬುಗಳಿಂದ ಸಾವಿರಾರು ರೂಪಾಯಿಗಳು ಬರಬೇಕಾದ್ದು ಹಾಗೇ ಬಾಕಿ ನಿಂತಿದೆ. ಹೀಗೆ ತಾವು ಕೊಡತಕ್ಕದ್ದನ್ನು ಅವರು ಕೊಡದೆ ತಮಗೆ ಬರತಕ್ಕದ್ದನ್ನು ಮಾತ್ರ ಅವರು ಓವರ್ ನೈಟ್ ಪೇ ಮಾಡಬೇಕೆಂದು ಒತ್ತಾಯಮಾಡುತ್ತಿದ್ದಾರೆ. ಹೀಗೆ ಇವರೇನು ಮಾಡಿದರೂ ಇವರನ್ನು ಕೇಳುವವರೇ ಇಲ್ಲದಂತಾಗಿದೆ. ಇವರಿಗೆ ಸರ್ಕಾರದವರು ಸ್ವಲ್ಪ ಸೂಕ್ತ ತಿಳುವಳಿಕೆಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಎರಡನೇ ಕ್ಲಾಸ್ ಟಿ.ಬಿ. ಇರುತ್ತದೆ. ಬಂಡೀಪುರಕ್ಕೆ ಹೋಗತಕ್ಕವರು ಯಾವಾಗಲೂ ಇಲ್ಲಿ ಇದ್ದೇ ಇರುತ್ತಾರೆ. ಇನ್ನು ಬೇರೆಯವರು ಯಾರಾದರೂ ಇಲ್ಲಿಗೆ ಬಂದರೆ ಅವರಿಗೆ ಸ್ವಲ್ಪಹೊತ್ತು ವಿಶ್ರಾಂತಿ ಪಡೆಯುವುದಕ್ಕೂ ಅಲ್ಲಿ ಅವಕಾಶವಿರುವುದಿಲ್ಲ, ಜಾಗವೇ ಸಿಕ್ಕುವುದಿಲ್ಲ. ಆದುದರಿಂದ ಇದನ್ನು ಇನ್ನೂ ಸ್ವಲ್ಪ ಬಡಾವಣೆ ಮಾಡಿದರೆ ಸರ್ಕಾರಕ್ಕೂ ಹೆಚ್ಚಿನ ವರಮಾನ ಬರುತ್ತದೆ, ಜನರಿಗೂ ಹೆಚ್ಚಿನ ಅನುಕೂಲವಾಗುತ್ತದೆ. ಆದ್ದರಿಂದ ಇದನ್ನು ದೊಡ್ಡದನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪಂಪ್‌ಸೆಟ್‌ಗಳ ವಿಚಾರಕ್ಕೆ ಬಂದರೆ: ನಮ್ಮ ಮುಖ್ಯಮಂತ್ರಿಗಳು ಎಲ್ಲಾ ರೈತರಿಗೂ ಸಾಕಾಗುವಷ್ಟು ಒದಗಿಸುತ್ತೇವೆ ಎಂದು ಹೇಳುತ್ತಲೇ ಇದ್ದಾರೆ. ನಮ್ಮ ಗುಂಡ್ಲುಪೇಟೆಯ ತಾಲ್ಲೂಕಿನಲ್ಲಿರತಕ್ಕ ಜನರು ಬಹಳ ಬಡವರು. ಇವರಿಗೆ ಪಂಪ್‌ಸೆಟ್ಟನ್ನು ಕೊಡಬೇಕೆಂದರೆ ವೈರಿಲ್ಲ, ಕಂಬಗಳಿಲ್ಲ, ಪಂಪ್‌ಸೆಟ್‌ಗಳಿಲ್ಲ. ಆದರೆ ಕೋಲಾರ ಬೆಂಗಳೂರು ಮತ್ತು ಚಿತ್ರದುರ್ಗ ಜಿಲ್ಲೆಗಳ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಜನರಿಗಾದರೆ ಮಾತ್ರ ಇವೆಲ್ಲಾ ಇರುತ್ತವೆ. ಆದ್ದರಿಂದ ನಮ್ಮ ಗುಂಡ್ಲುಪೇಟೆಯ ಜನರಿಗೂ ಫಂಪ್‌ಸೆಂಟ್‌ಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಂಡು ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ದುಗ್ಗಪ್ಪ (ಹೊಳಲ್ಕೆರೆ).—ಮಾನ್ಯ ಅಧ್ಯಕ್ಷರೇ, ಹಾಲಿ ಸಭೆಯ ಮುಂದೆ ಮಂಡಿಸಿರತಕ್ಕ ಡಿಮ್ಯಾಂಡುಗಳ ಬಗ್ಗೆ ನಾನು ಒಂದೆರಡು ಮಾತುಗಳನ್ನು ಆಡಬಯಸುತ್ತೇನೆ.

ಮಾನ್ಯ ಆರ್ಥಿಕ ಸಚಿವರು ತಮ್ಮ ಭಾಷಣದಲ್ಲಿ ಹೇಳಿರುವಂತೆ ನಮ್ಮ ಸಂಸ್ಥಾನದ ಹಣಕಾಸಿನ್ನ ಪರಿಸ್ಥಿತಿ ಸ್ವಲ್ಪ ಗಂಭೀರವಾಗಿಯೇ ಇದೆ. ಆ ವಿಚಾರದಲ್ಲಿ ಅವರು ಕೆಲವು ನಿದರ್ಶನಗಳನ್ನೂ ಸಹಾ ನಮ್ಮ ಮುಂದಿಟ್ಟಿದ್ದಾರೆ. ಅವರು ಹೇಳಿರುವಂತೆ ನಾವು ನಮ್ಮ ಸಂಸ್ಥಾನದ ಹುಟ್ಟುವಳಿಯ ಬಹುಭಾಗವನ್ನು ದೇಶದ ಅಭಿವೃದ್ಧಿಕಾರ್ಯಗಳಲ್ಲಿ ಹಾಕತೊಡಗಿದ್ದೇವೆ. ಆದರೆ ಅವುಗಳಿಂದ ನಮಗೆ ತಕ್ಷಣ ಪ್ರತಿಫಲ ಬರುವುದಿಲ್ಲವೆಂಬುದಾಗಿ ಮಂತ್ರಿಗಳು ಅಪ್ಪಣೆ ಕೊಡಿಸಿದ್ದಾರೆ. ಅದೂ ನಿಜವೇ, ನಾನಾದರೂ ಈ ದಿವಸ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ಒಂದು ಸಮಗ್ರವಾದ ಆಲೋಚನೆಯನ್ನು, ಅಥವಾ ವಿಮರ್ಶೆಯನ್ನು ಸರ್ಕಾರದವರು ಅವರ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆಮಾಡಿ ವಿಚಾರ ವಿನಿಮಯವನ್ನು ಮಾಡಿದ್ದಾರೆಯೇ ಎಂಬುದನ್ನು ಕೇಳ ಬಯಸುತ್ತೇನೆ. ಆದರೆ ಸರ್ಕಾರದವರೊಂದು ರೀತಿಯಲ್ಲಿ ಸಮಾಲೋಚನೆ ಮಾಡಿರಬಹುದು. ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ನಾನೀಗ ಕೇಳುತ್ತಿರುವುದು ಇದನ್ನು ಅವರು ಯಾವ ಒಂದು ದೃಷ್ಟಿಯಿಂದ ನೋಡಬೇಕಾಗಿತ್ತೋ ಮತ್ತು ಯಾವ ಒಂದು ದೃಷ್ಟಿಯಿಂದ ಆಲೋಚನೆ ಮಾಡಬೇಕಾಗಿತ್ತೋ ಆ ದೃಷ್ಟಿಯಿಂದ ಆಲೋಚನೆ ಮಾಡಿದ್ದಾರೆಯೇ ಎಂಬ ಅಂಶವನ್ನು ಕೇಳುತ್ತಿದ್ದೇನೆ. ಶ್ರೀಮಾನ್ ಬಸಪ್ಪನವರು ಮಾತನಾಡುತ್ತಾ ನಮ್ಮ ಅಕ್ಕಪಕ್ಕದ ರಾಜ್ಯಗಳಲ್ಲಿ ಅವರು ಅನೇಕ ಅಭಿವೃದ್ಧಿ ಕಾರ್ಯಗಳಲ್ಲಿ, ಅದರಲ್ಲೂ ಬಹಳ ಮುಖ್ಯವಾದ ನೀರಾವರಿ ಯೋಜನೆಗಳಲ್ಲಿ, ಬಹಳ ಮುಂದೆಹೋಗಿದ್ದಾರೆ ಎಂದು ಹೇಳಿದರು. ಒಂದಾನೊಂದು ಕಾಲದಲ್ಲಿ ನಮ್ಮ ಮೈಸೂರು ಈ ವಿಚಾರದಲ್ಲಿ ಮುಂದಿತ್ತು. ಈ ದಿವಸ ನಾವು ಕೇವಲ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೆ ಆದ್ಯತೆಯನ್ನು ಕೊಡುತ್ತಿದ್ದೇವೆ. ಹೀಗೆ ಒಂದು ಆದ್ಯತೆಯನ್ನು ಕೊಡತಕ್ಕ ಕಾಲದಲ್ಲಿ ನಾನಾದರೂ ನಮ್ಮ ಆರ್ಥಿಕ ಸಚಿವರಿಗೆ ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ಅವರು ತಮ್ಮ ಭಾಷಣದಲ್ಲಿ ಹೇಳಿರುವಂತೆ ನಾವು ನಮ್ಮ ನಾಲ್ಕನೇ ಪಂಚವಾರ್ಷಿಕ ಯೋಜನೆಗೆ ಹಾಕಿರತಕ್ಕ ಒಂದು ಫೇಸ್ಡ್ ಪ್ರೋಗ್ರಾಂ ಬಗ್ಗೆ ಹಾಕಿರತಕ್ಕ ಬಂಡವಾಳ 800 ಕೋಟಿ ರೂಪಾಯಿಗಳು. ಇದೂ ಸಹಾ ಸಾಲದೆ ಬರಬಹುದು ಎಂಬುದಾಗಿ ಅವರು ಹೇಳಿದ್ದಾರೆ. ಆದರೆ ಇಲ್ಲಿ 8 ಕೋಟಿ ರೂಪಾಯಿಗಳ ಒಂದು ಗ್ಯಾಪನ್ನು ಮಾಡಿದ್ದಾರೆ. ನಾನು ಈಗ ಕೇಳುತ್ತಿರುವುದು ಹೀಗೆ ಗ್ಯಾಪ್ ಬೀಳತಕ್ಕ 8 ಕೋಟಿ ರೂಪಾಯಿಗಳಲ್ಲಿ 4 ಕೋಟಿ ರೂಪಾಯಿಗಳನ್ನು ಇಷ್ಟು ಮೊಬಲಗನ್ನು ಈ ದಿವಸ ಬೇರೆ ಇಲಾಖೆಗಳ ಬಗ್ಗೆ ಕೈಗೊಳ್ಳಬೇಕೆಂದು ಉದ್ದೇಶಿಸಿರತಕ್ಕ ಕೆಲವು ಬಾಬುಗಳನ್ನು ಹಿಂದಕ್ಕಿಟ್ಟು ಅವುಗಳಿಂದ ಈ 4 ಕೋಟಿಯ ಕೊರತೆಯನ್ನು ಭರ್ತಿಮಾಡಿಕೊಂಡು, ಕೆಲವು ಅತ್ಯಗತ್ಯವಾದ ಬಾಬುಗಳಿಗೆ ಪ್ರಥಮ ಪ್ರಾಶಸ್ತ್ಯವನ್ನು ಕೊಟ್ಟು ಅದರಲ್ಲಿ ಈ ಸಣ್ಣ ನೀರಾವರೀ ಯೋಜನೆಗಳನ್ನು ಕೈಗೊಳ್ಳಬೇಕೆಂದು ನಾನು ಸಲಹೆಮಾಡುತ್ತೇನೆ. ನಾವು ನಮ್ಮ ಮೊದಲನೇ ಮತ್ತು ಎರಡನೇ ಯೋಜನೆಗಳಲ್ಲಿ ಹಾಕಿಕೊಂಡಿದ್ದ ಪ್ರೋಗ್ರಾಂ ಪ್ರಕಾರ 25 ಯೋಜನೆಗಳ ಒಟ್ಟು ಮೊತ್ತ 129·28 ಕೋಟಿ ರೂಪಾಯಿಗಳು. ಆದರೆ ಈ ಯೋಜನೆಗಳಿಂದ ಬಯಸಿದ್ದುದು ಅಂದರೆ ಅಚ್ಚುಕಟ್ಟಿನ ವಿಸ್ತೀರ್ಣ 14.61 ಲಕ್ಷ ಎಕರೆಗಳು; ಇಷ್ಟು ಆ ಯೋಜನೆಗಳಿಂದ ಆಗಬೇಕಾಗಿತ್ತು. ಆದರೆ ನಾವು ಇದುವರೆಗೂ ಸಾಧಿಸಿರತಕ್ಕದ್ದೇನೆಂದರೆ ಅದು ಕೇವಲ 7·5 ಲಕ್ಷ ಎಕರೆಗಳು ಮಾತ್ರ. ಇನ್ನು ನಾವು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಉಳಿದ ಭಾಗವನ್ನು ಕಾರ್ಯಗತ ಮಾಡಲು ಕೇಳಿದ್ದ ಹಣವೆಷ್ಟು ಎಂದರೆ 26·68 ಕೋಟಿ. ನಾವು ಹೀಗೆ ಇಲ್ಲಿಯವರೆಗೂ ಏನೇನು ಯೋಜನೆಗಳನ್ನು ಕಾರ್ಯಗತ ಮಾಡಿದ್ದೇವೋ ಅವುಗಳ ಪ್ರತಿಫಲ ಆದಷ್ಟು ಬೇಗ ಜನರಿಗೆ ಲಭಿಸುವಂತಾಗಬೇಕೆಂಬುದೇ ನಮ್ಮೆಲ್ಲರ ಬಯಕೆಯಾಗಿತ್ತು. ಆದರೆ ಈ ಯೋಜನೆಗಳನ್ನು ತಯಾರು ಮಾಡತಕ್ಕ ಕಾಲದಲ್ಲಿ ಇಂಜಿನಿಯರಿಂಗ್ ಇಲಾಖೆಯ ಅಧಿಕಾರಿಗಳನ್ನೂ ಈ ಯೋಜನೆಗಳಲ್ಲಿ ತಜ್ಞರಾಗಿರತಕ್ಕವರನ್ನೂ ಇಟ್ಟುಕೊಂಡು ಅವರ ಅಭಿಪ್ರಾಯವನ್ನು ಕ್ರೋಢೀಕರಿಸಿ ದೇಶಾಭಿವೃದ್ಧಿಗೆ ಅನುಕೂಲವಾಗತಕ್ಕ ಸಂಪನ್ಮೂಲಗಳು ಎಲ್ಲೆಲ್ಲಿ ಏನೇನಿರುತ್ತವೆ ಎಂಬುದನ್ನು ಅನುಲಕ್ಷಿಸಿ ಆಬಗ್ಗೆ ಅಂಕಿ ಅಂಶಗಳನ್ನು ತರಿಸಿಕೊಂಡು ಇದರ ಬಗ್ಗೆ ಸರ್ಕಾರದವರು ಒಂದು ಹೆಚ್ಚಿನ ಜವಾಬ್ದಾರಿಯನ್ನು ವಹಿಸಿ ಯಾವುದು ಯೋಗ್ಯ ಯಾವುದು ಯೋಗ್ಯ

ವಲ್ಲ, ಯಾವುದಕ್ಕೆ ಎಷ್ಟೆಷ್ಟರ ಮಟ್ಟಿನ ಪ್ರಾಶಸ್ತ್ಯ ಕೊಡಬೇಕು ಎಂಬುದನ್ನು ಆಲೋಚನೆ ಮಾಡಿ ಒಂದು ತೀರ್ಮಾನಕ್ಕೆ ಬಂದ ನಂತರ ಇವುಗಳಿಗೆ ಕೈಹಾಕಬೇಕಾಗಿತ್ತು. ಆದರೆ ಆ ರೀತಿ ಮಾಡ ದಿರುವುದರಿದಲೇ ನಾವು ಇದರಲ್ಲಿ ಈ ದಿವಸ ಎಡವಿದ್ದೇವೆಂದು ನನಗೆ ಅನಿಸುತ್ತಿದೆ. ಅಧಿಕಾರಿಗಳು ಈ ದಿವಸ ಕೊಟ್ಟಿರತಕ್ಕ ಅಂಕಿ ಅಂಶಗಳೇನಿವೆ ಅವುಗಳೇ ಇದನ್ನು ಹೊರಗೆಡುವುತ್ತಿವೆ. ಆದ್ದರಿಂದ ನಾನು ಇದರ ಬಗ್ಗೆ ಇನ್ನು ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಇನ್ನು ನಾವು ನಮ್ಮ ಯೋಜನೆಗಳನ್ನು ಕಾರ್ಯಗತ ಮಾಡಬೇಕೆಂದು ಹೇಳತಕ್ಕ ಕಾಲದಲ್ಲಿ ಅದರಲ್ಲೂ ನೀರಾವರಿ ಯೋಜನೆಗಳನ್ನು ನಿರ್ಮಾಣ ಮಾಡತಕ್ಕ ಕಾಲದಲ್ಲಿ ಅಥವಾ ಒಂದು ಕೆರೆಯನ್ನು ಕಟ್ಟತಕ್ಕ ಸಂದರ್ಭದಲ್ಲಿ ಅದನ್ನು ಕಟ್ಟಿದಾಕ್ಷಣಕ್ಕೆ ನಮ್ಮ ಜವಾಬ್ದಾರಿ ಎಲ್ಲಾ ಮುಗಿಯಿತು ಎಂಬು ದಾಗಿ ಕೆಲವರು ಭಾವಿಸಿದ್ದಾರೆ. ಆದರೆ ದೇಶದಲ್ಲಿರತಕ್ಕ ಜನರ ಕ್ಷೇಮಾಭಿವೃದ್ಧಿಯನ್ನು ಹೊತ್ತಿರತಕ್ಕ ಆಡಳಿತ ಪಕ್ಷ ಏನು ಮಾಡಬೇಕೆಂಬುದನ್ನು ಸ್ವಲ್ಪ ಆಲೋಚನೆ ಮಾಡಬೇಕು. ಆದರೆ ನಾನು ಹೀಗೆ ಹೇಳುತ್ತಿರುವಾಗ ಕೆಲವರು ನೀವಾದರೂ ಇಲ್ಲಿ ಒಂದು ಭಾಷಣವನ್ನು ತಾನೆ ಮಾಡುವುದು ಎಂತ ಕೇಳಬಹುದು. ಆದರೆ ನಾನು ಇದನ್ನೇ ಒಂದು ಉದಾಹರಣೆಯಾಗಿ ಹೇಳುತ್ತಿದ್ದೇನೆ ಇನ್ನಾದರೂ ಸರ್ಕಾರದವರು ಈ ವಿಚಾರದಲ್ಲಿ ಸ್ವಲ್ಪ ಹೆಚ್ಚಿನ ನಿಗಾವಹಿಸಬಹುದೆಂಬ ವಿಶ್ವಾಸದಿಂದ ನಾನು ಇದನ್ನು ಹೇಳುತ್ತಿದ್ದೇನೆ. ಉದಾಹರಣೆಗೆ ಈ ದಿವಸ ಗಾಯತ್ರಿ ಪ್ರಾಜೆಕ್ಟ್ ಎಂತ ಒಂದು ಪ್ರಾಜೆಕ್ಟನ್ನು ಮಾಡಿದ್ದಾರೆ ಅದಕ್ಕೆ ಮೊದಲು 25 ಲಕ್ಷ ರೂಪಾಯಿಗಳ ಅಂದಾಜಾಗಿತ್ತು. ಆದರೆ ಅದು ಕೊನೆಗೆ ನಿಂತದ್ದು 39 ಲಕ್ಷಕ್ಕೆ. ಈಗ ಆ ಪ್ರಾಜೆಕ್ಟನ್ನು ಸಂಪೂರ್ಣವಾಗಿ ಮುಗಿಸಿದ್ದೇವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೆ ತೂಬಿನಿಂದ ಈಗಲೂ ಅದನ್ನು ಮುಚ್ಚಿದ್ದರೂ ನೀರು ಬರುತ್ತಲೇ ಇದೆ.

[MR. DEPUTY SPEAKER in the Chair]

ಈ ಒಂದು ದೊಡ್ಡ ಜಲಾಶಯದ ರೈಟ್ ಬ್ಯಾಂಕ್ ತೂಬನ್ನು ಹಾಕಿದರೆ ಅದರಲ್ಲಿ ಸಂಪೂರ್ಣ ವಾಗಿ ನೀರು ನಿಲ್ಲುವುದೇ ಇಲ್ಲ. ಅದೇ ರೀತಿ ಲೆಫ್ಟ್ ಬ್ಯಾಂಕ್ ಛಾನಲ್‌ಗೂ ಕೂಡ ನೀರು ನಿಲ್ಲುವುದಿಲ್ಲ. ನಾನು ಮೂರು ನಾಲ್ಕು ದಫ ಅಲ್ಲಿಯ ಎಕ್ಸಿಕ್ಯೂಟೀವ್ ಇಂಜನಿಯರಿಗೆ ಹೇಳಿದೆ, ಆದರೆ ಅದು ಇನ್ನೂ ಪೂರ್ತಿಯಾಗಿಲ್ಲ ಎಂದು ಹೇಳುತ್ತಾ ಇದ್ದಾರೆ. ಗಾಯತ್ರಿ ಪ್ರಾಜೆಕ್ಟ್ ಪ್ರಾರಂಭವಾಗಿ ಎಷ್ಟೋ ವರ್ಷ ಆಯಿತು. ಹತ್ತು ಮೈಲಿ ಛಾನಲ್‌ನಲ್ಲಿ 15 ತೂಬುಗಳಿವೆ, ಅದರಲ್ಲಿ 8 ತೂಬುಗಳಿಗೆ ಷಟರ್ಸ್ ಫಿಕ್ಸ್ ಮಾಡಿಲ್ಲ. ನೀರೆಲ್ಲಾ ಹಳ್ಳಕ್ಕೆ ಬಿದ್ದು ನದಿಯಲ್ಲಿ ಹರಿದು ಹೋಗುತ್ತಾ ಇದೆ. 35 ಲಕ್ಷ ರೂಪಾಯಿಗಳನ್ನು ನೀರಿನಲ್ಲಿ ಹಾಕಿ ಆದರಿಂದ ಪ್ರತಿಫಲ ದೊರೆಯದೆ, ರೈತರಿಗೆ ಉಪಯೋಗವಾಗದೆ, ರೈತರ ಜಮೀನೆಲ್ಲಾ ಹಾಳಾಗಿ ಲುಕ್ಸಾನಾಗುತ್ತಾ ಇದೆ, ಇದು ಯಾವ ದೇವರಿಗೆ ಪ್ರೀತಿ ? ತಮ್ಮ ಅಧಿಕಾರಿಗಳು ಇದನ್ನು ನೋಡಿದ್ದಾರೆಯೇ ? ನೋಡಿದ್ದರೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ? ಹಿಂದೆ ಶ್ರೀಮಾನ್ ವಿಶ್ವೇಶ್ವರಯ್ಯನವರು ಇದ್ದಾಗ ಒಂದು ಪ್ರಾಜೆಕ್ಟನ್ನು ಮಾಡಿದರು, ವಾಣಿವಿಲಾಸ ಸಾಗರದ ಜಲಾಶಯ ನಿರ್ಮಾಣವಾಯಿತು. ಅವರು ಯಾವುದನ್ನೇ ಮಾಡಿದರೂ ಕೂಡ ಚೆನ್ನಾಗಿ ಆಲೋಚನೆ ಮಾಡಿ ಮಾಡುತ್ತಾ ಇದ್ದರು. ಈಗಿನವರು ದೊಡ್ಡ ದೊಡ್ಡ ಯೋಜನೆಗಳನ್ನು ಮಾಡು ತ್ತಾರೆಯೇ ಹೊರತು ಸರಿಯಾಗಿ ಯೋಚನೆ ಮಾಡಿ ಮಾಡುತ್ತಾ ಇಲ್ಲ. ಒಂದು ಜಲಾಶಯ ಆಯಿತು ಎಂದರೆ ಅದರ ನಿರ್ಮಾಣ ಅಲ್ಲಿಗೇ ಮುಗಿಯಲಿಲ್ಲ, ಅದನ್ನು ಸಂಪೂರ್ಣವಾಗಿ ಉಪಯೋಗ ಮಾಡತಕ್ಕ ನಿರ್ವಹಣೆಯನ್ನು, ಅದರ ಜವಾಬ್ದಾರಿಯನ್ನು ಅಧಿಕಾರಿಗಳು ವಹಿಸಬೇಕು. ಅನೇಕ ಎಸ್ಟಿಮೇಟು ಮತ್ತು ಪ್ಲಾನುಗಳನ್ನು ಪ್ರಾರಂಭದಲ್ಲಿ ಅಧಿಕಾರಿಗಳು ಕಳುಹಿಸುತ್ತಾರೆ. ಆದರೆ, ವಾಸ್ತವವಾಗಿ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುವಾಗ ಅನೇಕ ಅಡ್ಡಿ ಆತಂಕಗಳನ್ನು ಎದುರಿಸಬೇಕಾಗುತ್ತದೆ ಎಂದು ಅವರೇ ಹೇಳುತ್ತಾರೆ. ಒಂದು ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ ಮೇಲೆ ಅದಕ್ಕೆ ಸಂಬಂಧಪಟ್ಟ ಎಲ್ಲಾ ವಿಚಾರಗಳನ್ನೂ ಕೂಲಂಕಷವಾಗಿ ಪರಿಶೀಲನೆ ಮಾಡಿ ಪ್ಲಾನ್ ಮತ್ತು ಎಸ್ಟಿಮೇಟುಗಳನ್ನು ತಯಾರು ಮಾಡಬೇಕು. ಅಲ್ಲದೆ ಅದನ್ನು ಕಾರ್ಯಗತ ಮಾಡತಕ್ಕ ಕಾಲದಲ್ಲಿ ಯಾವ ವಿಧವಾದ ಅಡ್ಡಿ ಆತಂಕಗಳೂ ಸಹ ಬರಬಾರದು. ನಿರ್ಮಾಣ ಮಾಡ ತಕ್ಕ ಜಲಾಶಯದಿಂದ ನೀರು ಉಪಯೋಗ ಮಾಡಲಿಕ್ಕೆ ಏನಾದರೂ ಅಡ್ಡಿ ಇದ್ದಲ್ಲಿ, ಅಕಸ್ಮಾತ್ತಾಗಿ ಯಾವುದಾದರೂ ಅಂತಹ ಸಂದರ್ಭ ಇದ್ದಲ್ಲಿ ಸಂಬಂಧಪಟ್ಟ ಮಂತ್ರಿಗಳು ಕೂಡಲೇ ಹೋಗಿ ನೋಡಿ ಅದನ್ನು ಸರಿಪಡಿಸಲು ತಕ್ಕ ವ್ಯವಸ್ಥೆ ಮಾಡಬೇಕು. ಒಂದು ಕೆರೆಯನ್ನು ಕಟ್ಟುವಾಗ ಎಷ್ಟು ಗಮನ ವನ್ನು ಕೊಡುತ್ತೀರೋ ಅದಕ್ಕಿಂತ ಹೆಚ್ಚಿನ ಗಮನವನ್ನು ಅದರ ನೀರನ್ನು ಉಪ ಯೋಗ ಮಾಡುವಾಗ ಕೊಡಬೇಕೆನ್ನುವುದು ನನ್ನ ಅಭಿಪ್ರಾಯ, ಇದು ಸ್ಪಷ್ಟವಾದ ಅಭಿಪ್ರಾಯ, ಆ ರೀತಿ ಮಾಡಬೇಕೆಂದು ಹೇಳಿ. ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನೂ ಈ

(ಶ್ರೀ ಜಿ. ದುಗ್ಗಪ್ಪ)

ಕೆರೆಯ ಅಚ್ಚುಕಟ್ಟಿಗೆ ಪೂರ್ತಿ ನೀರು ಕೊಟ್ಟಿಲ್ಲ. ಅದನ್ನು ಅಧಿಕಾರಿಗಳು ಹೋಗಿ ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಈ ಒಂದು ಜಲಾಶಯದ ಕೆಳಗೆ ಇರತಕ್ಕ ಅಚ್ಚುಕಟ್ಟು ಏನಿದೆ ಅದು ಆಸ್ಪತ್ರೆಯಲ್ಲಿರತಕ್ಕ ಕ್ಷಯ ರೋಗದ ಖಾಯಿಲೆಯ ಮನುಷ್ಯನಂತೆ ಇದೆ, ನೀರನ್ನು ತೆಗೆದುಕೊಂಡು ಹೋಗುವುದಕ್ಕೆ ಸರಿಯಾದ ಛಾನಲ್‌ಗಳನ್ನು ಮಾಡಿಲ್ಲ, ಛಾನಲ್‌ಗಳನ್ನು ಮಾಡಿದ್ದ ಕಡೆ ಅದರಲ್ಲಿ ಬರತಕ್ಕ ನೀರನ್ನು ತೆಗೆದುಕೊಂಡು ಹೋಗತಕ್ಕ ಡಿಸ್ಟ್ರಿಬ್ಯೂಟರಿಗಳನ್ನು ಮಾಡಿಲ್ಲ. ಆದ್ದರಿಂದ 15 ತೂಬುಗಳು ಏನಿದೆ ಅವುಗಳೆಲ್ಲಕ್ಕೂ ಕೂಡ ಸರಿಯಾದ ಬಾಗಿಲುಗಳನ್ನು ಇದುವರೆಗೂ ಹಾಕಿಲ್ಲ, ಅದನ್ನು ಕೂಡಲೇ ಮಾಡಿಕೊಡಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ. ಈಗ ಅಪ್‌ಸ್ಟ್ರೀಂ ಮೇಲೆ ಇನ್ನೊಂದು ಕೆರೆ ಕಟ್ಟಬೇಕೆಂದು ಹೇಳಿ ಒಂದು ಯೋಜನೆ ಇದೆ. ಅದನ್ನು ಮಾಡುವುದಾದರೆ ಈ ಜಲಾಶಯಕ್ಕೆ ಯಾವುದೇ ತೊಂದರೆ ಆಗದ ರೀತಿಯಲ್ಲಿ ಮಾಡಬೇಕು. ನಾನು ಹೇಳಬೇಕಾದರೆ ಅಪ್‌ಸ್ಟ್ರೀಂನಲ್ಲಿ ಒಂದಲ್ಲ ಎರಡು ಕೆರೆಗಳನ್ನಾದರೂ ಕಟ್ಟಿ, ಅದಕ್ಕೆ ಯಾರದೂ ಆಕ್ಷೇಪಣೆ ಇಲ್ಲ. ಆದರೆ ಈಗ ನಿರ್ಮಾಣವಾಗಿರತಕ್ಕ ಜಲಾಶಯದಿಂದ ಸಂಪೂರ್ಣ ಪ್ರತಿಫಲ, ಉಪಯೋಗವಾಗಿದೆಯೇ ಇಲ್ಲವೇ ಎಂಬುದನ್ನು ತೀವ್ರವಾಗಿ ಪರಿಶೀಲನೆಮಾಡಿ ಅದರಿಂದ ಸಂಪೂರ್ಣ ಪ್ರತಿಫಲ ಬರುವಂತೆ ಮುಂದಾದರೂ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಒಂದೆರಡು ಮಾತುಗಳನ್ನು ಆಡಬೇಕೆಂದು ಇದ್ದೇನೆ. ಆಡಳಿತದಲ್ಲಿ ಬಹಳ ಸಡಿಲತೆ ಇದೆ, ಆಡಳಿತದಲ್ಲಿ ಎಲ್ಲೂ ಬಿಗಿ ಇಲ್ಲ ಎಂದು ಅನೇಕರು ಹೇಳುತ್ತಾರೆ. ನನಗಾದರೂ ಕೂಡ ಅದು ಹೌದು ಎಂದು ಅನಿಸುತ್ತದೆ. ಹೌದು ಎಂದಾಗ ಇದಕ್ಕೆ ಕಾರಣವೇನು ? ಇದಕ್ಕೆ ಕಾರಣ ನನಗೆ ಒಂದು ತಿಳಿಯಿತು. ಅಧಿಕಾರಿಗಳು ಯಾವ ಅಧಿಕಾರಿಯೇ ಆಗಲಿ ಸಣ್ಣಪುಟ್ಟ ನೌಕರರಿಂದ ಹಿಡಿದು ದೊಡ್ಡ ಅಧಿಕಾರಿಯವರೆಗೂ ಕೂಡ ಯಾವ ಅಧಿಕಾರಿ ತಪ್ಪು ಮಾಡಿದರೆ ಆ ಅಧಿಕಾರಿಗೆ ರಕ್ಷಣೆ ಇದೆ ಎನ್ನತಕ್ಕ ಒಂದು ಮನೋಭಾವನೆ ಎಲ್ಲಿಯವರೆಗೆ ಕಂಡು ಬರುತ್ತದೋ ಅಲ್ಲಿಯವರೆಗೂ ಆಡಳಿತದಲ್ಲಿ ಬಿಗಿ ಇರುವುದಿಲ್ಲ. ಆಡಳಿತ ಕುಂಠಿತವಾಗುತ್ತದೆ. ಇದಕ್ಕೆ ಮುಖ್ಯವಾಗಿ ನಾನು ಮೂರು ಉದಾಹರಣೆಗಳನ್ನು ಕೊಡುತ್ತೇನೆ, ಮೊದಲನೆಯದು ಚಿತ್ರದುರ್ಗ ಜಿಲ್ಲೆಯ ಒಬ್ಬ ವಿದ್ಯಾಧಿಕಾರಿ, ಆತನ ಮೇಲೆ ಈ ಮಾನ್ಯ ಸಭೆಯ ಸದಸ್ಯರು ಈ ಸಭೆಯಲ್ಲಿ ಮತ್ತು ಹೊರಗಡೆ ಸಹ ಹೇಳಿದ್ದಾರೆ. ಮತ್ತು ಆಂಟಿ-ಕರಪ್‌ಷನ್ ಇಲಾಖೆಯವರು ವಿಚಾರಣೆಯನ್ನು ಮಾಡಿ ಇನ್ನು ಮುಂದೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಹೇಳುವ ಸ್ಥಿತಿಯಲ್ಲಿ ಒಂದು ಸ್ಟೇ ಆರ್ಡರ್ ಬಂತು, ಮುಂದೆ ಏನೂ ಆಗಲಿಲ್ಲ. ಇನ್ನೂ ಆಶ್ಚರ್ಯ ಎಂದರೆ ಆ ಅಧಿಕಾರಿಗೆ ಬಡ್ತಿ ದೊರೆತು ಅವನು ಮೇಲಿಂದ ಮೇಲೆ ಹೋಗಲಿಕ್ಕೆ ಇದ್ದಾನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಮಠಾಧಿಪತಿಗಳು ಹೇಳಿದ್ದಾರೆ.

ಶ್ರೀ ಜಿ. ದುಗ್ಗಪ್ಪ.—ತಾವು ಸ್ವಲ್ಪ ಸುಮ್ಮನೆ ಇರಬೇಕು. ಎರಡನೆಯದು ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರ ವರ್ಗದ ಸಮಯ, ಚಿತ್ರದುರ್ಗ ತಾಲ್ಲೂಕಿನ ವ್ಯವಸಾಯದ ಮಾರಾಟಗಾರರ ಸಂಘದ ಡೈರೆಕ್ಟರ ಚುನಾವಣೆಯ ಕಾಲ, ಚುನಾವಣೆ ಆಯಿತು, 15 ಜನರು ಚುನಾವಣೆಯಾಗಿ ಬಂದರು. ಆಗ ಕೆಲವರು ಆ ಅಧಿಕಾರಿಗೆ: 'ನೋಡ್ರಿ ನೀವು ಒಂದು ಸ್ಟೇ ಆರ್ಡರ್ ಕೊಟ್ಟು ಪ್ರೆಸಿಡೆಂಟರ ಎಲೆಕ್ಷನ್ ಆಗದ ಹಾಗೆ ಮಾಡಿ, ನಿಮ್ಮ ವರ್ಗ ಆಗದ ಹಾಗೆ ನೋಡಿಕೊಳ್ಳುತ್ತೇವೆ' ಎಂದು ಹೇಳಿದರು. ಆ ಅಧಿಕಾರಿಯ ವರ್ಗ ಆಗಲೇ ಇಲ್ಲ, ಅವನು ಇನ್ನೂ ಅಲ್ಲೇ ಇದ್ದಾರೆ. ವ್ಯವಸಾಯದ ಮಾರಾಟಗಾರರ ಸಂಘಕ್ಕೆ ಚುನಾವಣೆಯಾದ ಡೈರೆಕ್ಟರು ತಮ್ಮ ಅಧ್ಯಕ್ಷರನ್ನು ಚುನಾವಣೆ ಮಾಡದ ಹಾಗೆ ಸ್ಟೇ ಆರ್ಡರ್ ಕೊಟ್ಟಿದ್ದಾರೆ. ಮೂರನೆಯದು ಸಣ್ಣಪುಟ್ಟ ಅಧಿಕಾರಿ, ನಾನು ಕೆಲಸ ಮಾಡತಕ್ಕ ದೃಷ್ಟಿಯಿಂದ ಸಣ್ಣಪುಟ್ಟ ಅಧಿಕಾರಿ ಎಂದು ಅನ್ನುವುದಿಲ್ಲ, ಎಲ್ಲರಿಗೂ ಗೌರವ ಇದೆ, ಹುದ್ದೆಯ ದೃಷ್ಟಿಯಿಂದ ಸಣ್ಣಪುಟ್ಟ ಅಧಿಕಾರಿ ಎಂದು ಹೇಳುತ್ತೇನೆ. ಅವರು ಯಾರೇ ಆಗಲಿ ಕೆಳದರ್ಜೆಯಿಂದ ದೊಡ್ಡ ಅಧಿಕಾರಿಗಳವರೆಗೂ ಕಾರ್ಯ ನಿರ್ವಹಣೆಯ ಜವಾಬ್ದಾರಿ ಒಂದೇ ರೀತಿಯಲ್ಲಿರುತ್ತದೆ. ಯಾರೇ ತಪ್ಪು ಮಾಡಿದರೂ ಅದರ ಜವಾಬ್ದಾರಿ ನಿರ್ವಹಣೆ ಮಾಡತಕ್ಕವನು ಆತನೇ ಎಂದು ನಾನು ತಿಳಿದುಕೊಂಡಿದ್ದೇನೆ. ಆ ದೃಷ್ಟಿಯಿಂದ ಎಲ್ಲರಿಗೂ ಗೌರವ ಸಲ್ಲತಕ್ಕದ್ದೇ. ಒಬ್ಬ ಅಧಿಕಾರಿ, ಪೋಲೀಸ್ ದಫೇದಾರ, ಅವನ ಮೇಲೆ 29 ಚಾರ್ಜಸ್‌ನ್ನು ಆಂಟಿ-ಕರಪ್‌ಷನ್ ಇಲಾಖೆಯವರು ಹಾಕಿದ್ದರು, ಅದು ಪ್ರೂವ್ ಆಯಿತು. ಆ ಅಧಿಕಾರಿಯನ್ನು ಸಸ್‌ಪೆನ್‌ಷನ್‌ನಲ್ಲಿ ಇಡಬೇಕು, ಮುಂದೆ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿ ಡಿವಿಜನಲ್ ಕಮಿಷನರು ಬರೆದರು. ಅದು ಏನು ಆಯಿತು ? ಆತನ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರು ಎಲ್ಲಿದ್ದರು ?

ಶ್ರೀ ಜಿ. ದುಗ್ಗಪ್ಪ.—ಎಲ್ಲೀ ಇರಲಿ ತಾವು ಸ್ವಲ್ಪ ಸುಮ್ಮನೆ ಇರಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರು ಸಿರಿಗೆರೆ ಮಠದಲ್ಲಿ ಇದ್ದರು.

ಶ್ರೀ ಜಿ. ದುಗ್ಗಪ್ಪ.—ಯಾರೂ ಮಠದಲ್ಲಿ ಇರುವುದಿಲ್ಲ. ಮಾನ್ಯ ಸದಸ್ಯರು ಸ್ವಲ್ಪ ಸುಮ್ಮನೆ ಕುಳಿತುಕೊಳ್ಳಬೇಕು. ಯಾವ ಮಠಕ್ಕೂ ಪೋಲೀಸ್ ಅಧಿಕಾರಿಯನ್ನು ನೇಮಿಸುವುದಿಲ್ಲ ಎಂಬುದನ್ನು ಶ್ರೀಮಾನ್ ಸಿ. ಜೆ. ಮುಕ್ಕಣ್ಣಪ್ಪನವರು ತಿಳಿದುಕೊಳ್ಳಬೇಕು. ಆದ್ದರಿಂದ ದಯವಿಟ್ಟು ಈ ರೀತಿ ಮಾತನಾಡಬೇಡಿ. ಹೀಗೆ ಯಾವ ಕಾಲದಲ್ಲಿ, ಯಾವ ಕ್ಷಣದಲ್ಲಿ ಏನು ಬೇಕಾದರೂ ಆಗಬಹುದು. ಶ್ರೀಮಾನ್ ವೀರೇಂದ್ರ ಪಾಟೀಲರಿದ್ದಾರೆ, ಸಂಬಂಧಪಟ್ಟ ಒಂದು ಉದಾಹರಣೆಯನ್ನು ಹೇಳುತ್ತೇನೆ. ಒಬ್ಬ ಅಧಿಕಾರಿಯನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ವರ್ಗ ಮಾಡಿ ಎಂದು ಹೇಳಿದರೆ ಹಾಗೆ ಮಾಡುವುದಕ್ಕಾಗುವುದಿಲ್ಲ, ತಾಲ್ಲೂಕಿನಲ್ಲಿ ಸಹ ಇಡುವುದಕ್ಕಾಗುವುದಿಲ್ಲ, ಕಾರಣ ಆ ಜಿಲ್ಲೆಯಿಂದ ಬಂದ ಹುಡುಗ ಎಂದು ಹೇಳಿದರು. ಇರಬಹುದು, ತಮಗೇ ಬಿಡುತ್ತೇನೆ ಎಂದು ಹೇಳಿದೆ. ಆದರೆ ಆಮೇಲೆ ವಿಚಾರ ಮಾಡಿದರೆ ಆಯಾ ತಾಲ್ಲೂಕಿನಲ್ಲಿರುವವರು ಆಯಾ ಡಿಸ್ಟ್ರಿಕ್ಟಿನಲ್ಲಿರುವವರು ಅಲ್ಲಲ್ಲೇ ಅಧಿಕಾರಿಗಳಾಗಿದ್ದಾರೆ. ಹೀಗೆ ಇರುವಾಗ ನನಗೆ ಮಾತ್ರ ಆ ರೀತಿ ಹೇಳಿದರು. ನಾನು ಅದನ್ನು ಅಲ್ಲಿಗೇ ಬಿಟ್ಟೆ. ಯಾವ ಸಮಯದಲ್ಲಿ ಏನು ಬೇಕಾದರೂ ಆಗಬಹುದು. ಈ ಸಂಬಂಧದಲ್ಲಿ ಒಂದು ಕಥೆ ಹೇಳುತ್ತೇನೆ. ಒಬ್ಬ ಗುರು ಇದ್ದರು, ಅವರಿಗೆ ಒಬ್ಬ ಶಿಷ್ಯ ಇದ್ದ. ಅವರು ತೀರ್ಥಯಾತ್ರೆಗೆ ಹೊರಟರು. ಮಧ್ಯದಲ್ಲಿ ಒಂದು ಛತ್ರದಲ್ಲಿ ಉಳಿದುಕೊಂಡರು. ಶಿಷ್ಯನನ್ನು ಕರೆದು ಗುರುಗಳು ಏನಾದರೂ ತೆಗೆದುಕೊಂಡುಬರುವಂತೆ ಹೇಳಿದರು. ಶಿಷ್ಯ ಅಂಗಡಿಗೆ ಹೋಗಿ ಕೇಳಲು ಅಂಗಡಿಯವನು ರೂಪಾಯಿಗೆ ಎರಡು ಸೇರು, ಏನು ಬೇಕಾದರೂ ತೆಗೆದುಕೊಳ್ಳಬಹುದು ಎಂದು ಹೇಳಿದ. ಶಿಷ್ಯನಿಗೆ ಆಶ್ಚರ್ಯವಾಯಿತು, ಚಿನ್ನ ಬೆಳ್ಳಿ ಯಾವುದು ತೆಗೆದುಕೊಂಡರೂ 2 ರೂಪಾಯಿ, ಎಷ್ಟು ಸುಲಭ ಎಂದುಕೊಂಡು ಹೋಗಿ ಗುರುವಿಗೆ ವಿಚಾರ ತಿಳಿಸಿದ, ಇಷ್ಟು ಸುಭಿಕ್ಷವಾದ ದೇಶ ಎಲ್ಲೂ ಕಾಣಲಿಲ್ಲ, ಚಿನ್ನ ಬೆಳ್ಳಿ ಎಲ್ಲಾ ರೂಪಾಯಿಗೆ 2 ಸೇರು ಎಂದು ಹೇಳಿದ. ಅದಕ್ಕೆ ಗುರುಗಳು ಈ ಸ್ಥಳದಲ್ಲಿರುವುದು ಬಹಳ ಅಪಾಯ, ಇಲ್ಲಿ ಯಾರೂ ಬುದ್ಧಿವಂತರಿರುವ ಹಾಗೆ ಕಾಣುವುದಿಲ್ಲ, ಯಾವ ಘಳಿಗೆಯಲ್ಲಿ ಏನು ಬೇಕಾದರೂ ಆಗಬಹುದು, ಇಲ್ಲಿರುವುದಕ್ಕೆ ಸಾಧ್ಯವಿಲ್ಲ, ಬೆಳಿಗ್ಗೆ ಬೇರೆ ಕಡೆಗೆ ಹೊರಡೋಣ ಎಂದು ಹೇಳಿದರು. ಆದರೆ ಶಿಷ್ಯ ಹೊರಡಲು ಒಪ್ಪಲಿಲ್ಲ, ಗುರುಗಳು ಹೊರಟು ಹೋದರು, ಶಿಷ್ಯ ಸುಖವಾಗಿರಬಹುದೆಂದು ಅಲ್ಲೇ ಉಳಿದುಕೊಂಡ. ಅವನು ಪದಾರ್ಥಗಳು ಸುಲಭವಾಗಿವೆ ಎಂದು ಚೆನ್ನಾಗಿ ತಿಂದು ಕೊಬ್ಬಿದ. ಒಂದು ಸಲ ರಾಜ್ಯದ ಮಹಾರಾಜರ ಸವಾರಿ ಆ ಕಡೆ ಚಿತ್ತೈಸಿತು. ಮಹಾರಾಜರು ಅಂಬಾರಿ ಮೇಲೆ ಹೋಗುತ್ತಿದ್ದರು, ಅಂಬಾರಿ ಮಹಾರಾಜರಿಗೆ ತಗುಲಿ ಅವರಿಗೆ ನೋವಾಯಿತು, ಆಗ ಮಂತ್ರಿಗಳ ಗಮನವನ್ನು ಆ ಕಡೆ ಸೆಳೆದರು. ಮಂತ್ರಿಗಳು ಮಾವಟಿಗನನ್ನು ಕರೆದು ಕಾರಣ ಕೇಳಿದರು. ಆನೆ ಹೋಗುವ ದಾರಿಯಲ್ಲಿ ಮನೆಯವನು ನೀರು ಜಾಸ್ತಿ ಹಾಕಿದ್ದ ಅದರಿಂದ ಹಾಗಾಯಿತು ಎಂದು ಆತ ಹೇಳಿದ. ಆಗ ಮನೆಯವನನ್ನು ಕರೆದು ಏಕೆ ಹಾಗೆ ಮಾಡಿದೆ ಎಂದು ಕೇಳಲು ನೀರು ಹಾಕಲು ಉಪಯೋಗಿಸಿದ ಮಡಕೆಯನ್ನು ಕುಂಬಾರ ಬಾಯಿ ಅಗಲವಿರುವಂತೆ ಮಾಡಿದ ಎಂದು ಹೇಳಿದ. ಕುಂಬಾರನನ್ನು ಕರೆಸಿ ಮಡಕೆ ಬಾಯಿ ಅಗಲ ಮಾಡಿದ್ದೀಯ ಎಂದು ಕೇಳಲು ಹೌದು ಎಂದ. ಆದ್ದರಿಂದ ಅವನೇ ಕಾರಣ ಅವನನ್ನು ಗಲ್ಲಿಗೆ ಹಾಕಿ ಎಂದು ಆಜ್ಞೆ ಮಾಡಿದರು. ಆದರೆ ಆ ಕುಂಬಾರ ತೆಳ್ಳಗಿದ್ದುದರಿಂದ ಗಲ್ಲಿಗೆ ಹಾಕಲು ಸಾಧ್ಯವಾಗಲಿಲ್ಲ. ಅದನ್ನು ತಿಳಿಸಿದಾಗ ಮಹಾರಾಜರು ಯಾರು ದಪ್ಪಕ್ಕಿರುತ್ತಾರೋ ಅವರನ್ನು ಗಲ್ಲಿಗೆ ಹಾಕಿ ಎಂದು ಹೇಳಿದರು. ಆಗ ಹುಡುಕಲಾಗಿ ಗುರುಗಳ ಶಿಷ್ಯ ಆ ಊರಿನಲ್ಲಿ ಉಳಿದುಕೊಂಡಿದ್ದವನು ತಿಂದು ಕೊಬ್ಬಿದ್ದ, ಆ ದಾಂಡಿಗನನ್ನು ಹಿಡಿದುಕೊಂಡು ಹೋದರು. ಶಿಷ್ಯನಿಗೆ ಗುರುಗಳು ಹೇಳಿದ್ದು ಜ್ಞಾಪಕಕ್ಕೆ ಬಂತು; ಜ್ಞಾನೋದಯವಾಯಿತು, ಯಾವ ಕಾಲದಲ್ಲಿ ಏನು ಬೇಕಾದರೂ ಆಗಬಹುದು ಎಂಬುದು ಜ್ಞಾಪಕಕ್ಕೆ ಬಂತು. ಹೀಗೆ ಯಾವ ಕಾಲದಲ್ಲೇನಾಗುತ್ತದೋ ಎಂಬ ಭೀತಿ ಇರಬಾರದು, ಅಧಿಕಾರಿಗಳಾಗಲಿ, ಸಾರ್ವಜನಿಕರಾಗಲಿ ತಮ್ಮ ಕರ್ತವ್ಯವನ್ನು ನಿರ್ವಹಿಸಲು ಅವಕಾಶವಿರಬೇಕು. ಆಗಮಾತ್ರ ಆಡಳಿತ ದಕ್ಷತೆಯಿಂದ ಕೂಡಿರುತ್ತದೆ. ಆಡಳಿತ ನಿರ್ವಹಣೆಯನ್ನು ಬಹಳ ದಕ್ಷತೆಯಿಂದ ಮಾಡಬೇಕಾದರೆ ಯಾವ ಗಳಿಗೆಯಲ್ಲಿ ಏನು ಆಗುತ್ತದೊ ಎಂಬ ಭೀತಿ ಇರಬಾರದು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿದ್ದಯ್ಯ ಕಾಶೀಮಠ್ (ಶಿರಹಟ್ಟಿ).—ಅಧ್ಯಕ್ಷರೇ, ಈ ಸಭೆಯ ಮುಂದಿಟ್ಟಿರುವ ಬಡ್ಜೆಟ್ಟಿನ ಬಗ್ಗೆ ಒಂದೆರಡು ಸಲಹೆಗಳನ್ನು ನೀಡುತ್ತೇನೆ. ಅರ್ಥಿಕಮಂತ್ರಿಗಳು ಮಾತನಾಡುತ್ತಾ ಈ ವರ್ಷ ರಾಜ್ಯ ಕಠಿಣ ಪರಿಸ್ಥಿತಿಯನ್ನೆದುರಿಸಬೇಕಾಗಿದೆ ಎಂದು ಹೇಳಿದ್ದಾರೆ. ಅಷ್ಟೇ ಅಲ್ಲದೆ ಬಹಳ ಮುಖ್ಯವಾಗಿ ದಿನನಿತ್ಯದಲ್ಲಿ ಜನರಿಗೆ ಬೇಕಾಗುವ ದಿನಸಿಯಮೇಲೆ ತೆರಿಗೆ ಹಾಕಿದ್ದಾರೆ. ಅದರಲ್ಲೂ ಮುಖ್ಯವಾಗಿ ಆಹಾರಧಾನ್ಯಗಳ ಮೇಲೆ ಸೇಕಡ ಒಂದರಷ್ಟು ಟರ್ನ್‌ಓವರ್ ತೆರಿಗೆ ಹಾಕಿರುವುದು

(ಶ್ರೀ ಸಿದ್ದಯ್ಯ ಕಾಶೀಮಠ್)

ಜನತೆಗೆ ತೊಂದರೆಯನ್ನುಂಟುಮಾಡುತ್ತದೆ. ಆದರೆ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಸರಿಯಾಗಿ ವಿಧಿಸಿದ್ದಾರೆ. ರಾಜ್ಯದಲ್ಲಿ ಪಾನನಿರೋಧಮಾಡಿ ಸುಮಾರು 10-11 ಕೋಟಿ ರೂಪಾಯಿ ಕಳೆದು ಕೊಂಡಿರುವಾಗ ಗ್ಯಾಂಬ್ಲಿಂಗ್ ತರಿಗೆಗೆ ಉತ್ತೇಜನ ಕೊಡುವುದು ಅವಶ್ಯಕ. ಈ ತೆರಿಗೆಯಿಂದ 30.25 ಲಕ್ಷ ರೂಪಾಯಿ ಬರುತ್ತಿದ್ದುದು 30.10 ಲಕ್ಷಕ್ಕೆ ಇಳಿದಿದೆ. ಇದು ಜನರಿಗೆ ಕಂಟಕವಾದ ಬಾಬು. ಆದುದರಿಂದ ಇದನ್ನು ನಿರ್ಮೂಲ ಮಾಡುವುದಕ್ಕೆ ಹೆಚ್ಚು ತೆರಿಗೆ ಹಾಕಬಹುದು. ಇದಕ್ಕೆ ಅಷ್ಟು ಅಸ್ಪದ ಕೊಡುವುದು ಸರಿಯಲ್ಲ. ಇದನ್ನು ಸೇಕಡ 30-40 ರಷ್ಟು ಹಾಕಬಹುದು. ಹೀಗೆ ಮಾಡಿ ಗ್ಯಾಂಬ್ಲಿಂಗ್ ರಾಜ್ಯದಾದ್ಯಂತ ನಿರ್ಮೂಲಮಾಡಿ ಜನರಿಗೆ ಸೌಕರ್ಯಮಾಡಿಕೊಡಬೇಕು, ಮತ್ತೊಂದು ಲ್ಲಕ್ಸುರಿ ಟ್ಯಾಕ್ಸ್. 64-65ರಲ್ಲಿ ಇದನ್ನು ಹಾಕಿ 65-66ರಲ್ಲಿ ತೆಗೆದುಹಾಕಿದೆ. ಏಕೆ ಹಾಗೆ ಮಾಡಲಾಯಿತು? ಲಕ್ಸುರಿ ಬೇಕಾದವರು ಯಾವುದೇ ತೆರಿಗೆ ಹಾಕಿದರೂ ಕೂಡ ಅದನ್ನು ಉಪಯೋಗಮಾಡಿಕೊಳ್ಳುವುದರಿಂದ ಸಾಧ್ಯವಾದಮಟ್ಟಿಗೆ ಅದಕ್ಕೆ ಹೆಚ್ಚು ತೆರಿಗೆ ಹಾಕಿ ಆದಾಯ ಹೆಚ್ಚಿಸಿಕೊಳ್ಳಬೇಕೆಂದು ಸಲಹೆಮಾಡುತ್ತೇನೆ.

ಇನ್ನು ಸಾಮಾನ್ಯ ಆಡಳಿತದ ಬಗ್ಗೆ ರಾಜ್ಯದ ಆಡಳಿತ ಸುಗಮವಾಗಬೇಕೆಂದು ಹೇಳುತ್ತೇನೆ. ಹಿಂದೆ ಎ. ಜಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಮಾಡಿ ಸಾವಿರಾರು ರೂಪಾಯಿ ಖರ್ಚುಮಾಡಿ ಒಂದು ವರದಿಯನ್ನು ತರಿಸಿದರು. ಅದು ಬಂದು 3-4 ವರ್ಷಗಳಾದರೂ ಸರಕಾರ ಇದುವರೆಗೆ ಕೈಕೊಂಡಿರುವ ಕ್ರಮ ನೋಡಿದರೆ ಶೋಚನೀಯವಾಗಿದೆ. ಡಿವಿಜನ್ ಆಫೀಸು ತೆಗೆಯ ಬೇಕೆಂದು, ಅದಕ್ಕೆ ಖರ್ಚಾಗುವುದನ್ನು ಬೇರೆ ಕೆಲಸಗಳಿಗೆ ಉಪಯೋಗಿಸಬೇಕು ಎಂದು ಮುಖ್ಯ ವಾಗಿ ವರದಿಮಾಡಿದ್ದರು. ಆ ಆಫೀಸಿನಿಂದ ಪ್ರಯೋಜನವಿಲ್ಲ. ತಾಲ್ಲೂಕಾಫೀಸು, ಡಿಸ್ಟ್ರಿಕ್ಟ್ ಆಫೀಸು, ಸರಕಾರ ಇದ್ದರೆ ಸಾಕು ಎಂದು ಹೇಳಿದ್ದರು. ಡಿವಿಜನ್ ಆಫೀಸು ಕೆಳಗಿನಿಂದ ಬಂದು ಕಾಗದಗಳನ್ನು ಮೇಲಕ್ಕೆ ಕಳುಹಿಸುವುದು, ಮೇಲಿನಿಂದ ಬಂದುದನ್ನು ಕೆಳಗಿನ ಆಫಿಸುಗಳಿಗೆ ಕಳುಹಿಸುವುದು, ಈ ರೀತಿ ಪೋಸ್ಟ್ ಆಫೀಸು ಕೆಲಸ ಮಾಡುತ್ತಿರುವುದರಿಂದ ಅದನ್ನು ತೆಗೆಯಬೇಕೆಂದು ಸಲಹೆಮಾಡುತ್ತೇನೆ. ತಾಲ್ಲೂಕಾಫೀಸಿನ ಸಿಬ್ಬಂದಿ ನೋಡಿದರೆ ಮುಂಬಯಿ ಕರ್ಣಾಟಕದಲ್ಲ ಇತರ ಭಾಗಗಳಲ್ಲಿರುವ ಸಿಬ್ಬಂದಿಗಿಂತ ಸೇಕಡ 50 ಭಾಗ ಕಡಮೆ ಇದೆ. ಇದರಿಂದ ಕಾಗದಪತ್ರಗಳ ವಿಲೇವಾರಿ ನಿಧಾನವಾಗುತ್ತಿದೆ. ಗುಮಾಸ್ತರ ಸಂಖ್ಯೆ ಅಲ್ಲಿ ಹೆಚ್ಚು ಮಾಡದಿರುವುದರಿಂದ ಸಕಾಲದಲ್ಲಿ ಕೆಲಸವಾಗದೆ ತುಂಬಾ ತಡವಾಗುತ್ತಿದೆ. ಆದಕ್ಕಾದರೂ ಕೂಡ ದೇಶಾದ್ಯಂತ ತಾಲ್ಲೂಕು ಆಫೀಸುಗಳಿಗೆ ಯಾವ ರೀತಿಯಾಗಿ ಇವತ್ತಿನ ದಿವಸ ಸಿಬ್ಬಂದಿಯನ್ನು ನೇಮಿಸುತ್ತಿರುತ್ತೀರೋ ಅದೇ ರೀತಿಯಾಗಿ ಮುಂಬೈ ಕರ್ಣಾಟಕದಲ್ಲಿ ಇರುವ ಎಲ್ಲ ಜಿಲ್ಲಾ ಮತ್ತ ತಾಲ್ಲೂಕುಗಳಲ್ಲಿರುವ ಸಿಬ್ಬಂದಿ ಯನ್ನು ಹೆಚ್ಚಿಸಬೇಕು ಎಂದು ಈ ಸಮಯದಲ್ಲಿ ಹೇಳುತ್ತೇನೆ.

Mr. DEPUTY SPEAKER.—The House will now rise for tea and reassemble at 3-30 P.M.

The House adjourned for Recess at Three of the Clock and re-assembled at Thirty-five Minutes past Three of the Clock.

(Mr. SPEAKER in the Chair)

†ಶ್ರೀ ಸಿದ್ದಯ್ಯ ಕಾಶೀಮಠ.—ಸ್ವಾಮಿ, ನಾನು ಹಿಂದೆ ಮಾತನಾಡುತ್ತ ಮುಂಬೈ ಕರ್ಣಾಟಕ ದಲ್ಲಿರುವ ತಾಲ್ಲೂಕಾಫೀಸುಗಳಲ್ಲಿ ಹೆಚ್ಚಿನ ಕೆಲಸವನ್ನು ನೀಗಿಸಲು ಸಾಕಷ್ಟು ಸಿಬ್ಬಂದಿಯನ್ನು ನೇಮಿಸಬೇಕೆಂದು ಹೇಳಿದೆ. ಸರ್ಕಾರಿ ನೌಕರರನ್ನು ರಿಟ್ರೆಂಚ್ ಮಾಡುವಾಗ ನಾಲ್ಕನೇ ದರ್ಜೆಯ ನೌಕರರನ್ನು ಹೆಚ್ಚಿಗೆ ರಿಟ್ರೆಂಚ್ ಮಾಡುತ್ತಾರೆ. ಆ ಪದ್ಧತಿ ನಮ್ಮಲ್ಲಿದೆ. ಪ್ರತಿಯೊಂದು ತಾಲ್ಲೂ ಕಾಫೀಸಿನಲ್ಲಿಯೂ ಒಬ್ಬರು ಅಥವಾ ಇಬ್ಬರು ಸೇವಕರು ಇರತಕ್ಕ ಪದ್ಧತಿ ಮುಂಬೈ ಕರ್ಣಾಟಕ ದಲ್ಲಿದೆ. ಆದ್ದರಿಂದ ಅದಷ್ಟುಮಟ್ಟಿಗೂ ಕೆಳದರ್ಜೆ ನೌಕರರಿಗೆ ತೊಂದರೆಯಾಗದ ರೀತಿಯಲ್ಲಿ ರಿಟ್ರೆಂಚ್ ಮಾಡುವ ನೀತಿಯನ್ನು ಅನುಸರಿಸಬೇಕು ಎಂದು ಹೇಳುತ್ತೇನೆ.

ಧಾರವಾಡ ಜಿಲ್ಲೆಯಲ್ಲಿ ಮುಖ್ಯವಾಗಿ ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಯ ಕೆಲಸಗಳ ಬಗ್ಗೆ ನೋಡಬೇಕು ಎಂದರೆ ಧಾರವಾಡ ಡಿವಿಷನ್ ಬಗ್ಗೆ ಸರ್ಕಾರದವರು ಏನೂ ನಿಗಾ ಕೊಡದೆ ಕಡೆಗಣಿಸಿದ್ದಾರೆ ಎಂದರೆ ತಪ್ಪಾಗಲಾರದು. ಕುಡಿಯುವ ನೀರಿನ ಬಗ್ಗೆ ಕುಂದಗೋಳ ತಾಲ್ಲೂಕಿನ ಹೊಸಾಪುರ ಹಾಗೂ ಶಿರಹಟ್ಟಿ ತಾಲ್ಲೂಕಿನ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಿ ಎಂದು ಮೇಲಿಂದ ಮೇಲೆ ಒತ್ತಾಯ ಪಡಿಸಿದರೂ ಕೂಡ ಸರ್ಕಾರ ಒದಗಿಸದೆ ಇರುವುದು ಶೋಚನೀಯವೆಂದು ಹೇಳುತ್ತೇನೆ. ಅವರಿಗೆ ಪ್ರತಿ ವರ್ಷ ಲಾರಿಗಳ ಮುಖಾಂತರವಾಗಿ ಕುಡಿಯುವ ನೀರನ್ನು ಒದಗಿಸತಕ್ಕ ಪದ್ಧತಿ ಇದೆ. ಕುಂದಗೋಳ ತಾಲ್ಲೂಕಿನ ದುಂಬಾಡಿ ಕೆರೆಯಿಂದ ಕುಂದಗೋಳ ಕೆಲವು ಭಾಗಗಳಿಗೆ ನಲ್ಲಿ ಮೂಲಕ ನೀರನ್ನು ಒದಗಿಸುತ್ತಿದ್ದಾರೆ. ಪಶುಪತಾಳ, ಬೂದಿಹಾಳ, ಬಸಾಪುರ, ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಆಗಿಲ್ಲ ಎಂದು ಹೇಳಬಯಸುತ್ತೇನೆ. ಈ ಮೂರು ಗ್ರಾಮಗಳ ಮಧ್ಯದಲ್ಲಿರತಕ್ಕ ಬರದ್ವಾಡ ಹತ್ತಿರ ಒಳ್ಳೆಯ ಬಾವಿಗಳಿವೆ. ಅವುಗಳಿಂದ ನೀರನ್ನು ಒದಗಿಸಲು ದೊಡ್ಡ ಟ್ಯಾಂಕ್ ಕಟ್ಟಿ ಅದರ ಮೂಲಕ ನೀರನ್ನು ಒದಗಿಸಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳಬಯಸುತ್ತೇನೆ.

ಲಕ್ಷ್ಮೇಶ್ವರ ಮುನಿಸಿಪಾಲಿಟಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಸರ್ಕಾರದವರನ್ನು ಸಾಲ ಕೇಳಿದರು. ಅಲ್ಲಿಗೆ ಬಹಳ ದೂರದಿಂದ ನೀರನ್ನು ತರಬೇಕಾಗಿದೆ. ಅಲ್ಲಿಗೆ ನಲ್ಲಿಗಳ ಮೂಲಕ ನೀರನ್ನು ಒದಗಿಸಲು ಸರ್ಕಾರ ಏನೂ ಕ್ರಮ ತೆಗೆದುಕೊಳ್ಳದೆ ಇರುವುದು ಶೋಚನೀಯ ಸಂಗತಿ.

ನೀರಾವರಿ ವಿಚಾರದಲ್ಲಿ ನಮ್ಮಲ್ಲಿ ಕೇವಲ ಒಂದೆ ಕೆರೆ ನೀರಾವರಿಗೆ ನೀರನ್ನು ಒದಗಿಸುವುದು ಇದೆ. ಇಲ್ಲಿಯವರೆಗೆ ಎರಡನೆಯ ಪಂಚ ವಾರ್ಷಿಕ ಯೋಜನೆಯಲ್ಲಿ ಮಂಜೂರಾದಂಥ ಮಜ್ಜೂರು ಕೆರೆ ಕೆಲಸಕ್ಕೆ ಈ ಸಲ ಬಜೆಟ್ಟಿನಲ್ಲಿ ಹಣವನ್ನು ಒದಗಿಸಿದ್ದಾರೆ. ಹೋದ ಸಲ ಸಹ ಇದೇ ರೀತಿ ಹಣವನ್ನು ತೋರಿಸಿದ್ದರು. ಆ ಕೆಲಸ ಪ್ರಾರಂಭವಾದೀತು ಎಂದು ಇದ್ದೆವು. ಆದರೆ ಆಗಲಿಲ್ಲ. ಈ ವರ್ಷವೂ ಸಹ ಮುಂದುವರಿಸುತ್ತಾರೆಯೋ ಎನ್ನುವ ಭಯ ಬಂದಿದೆ. ಈ ಕೆರೆಯಿಂದ ಸಾವಿರಾರು ಎಕರೆ ಜಮೀನಿಗೆ ನೀರಾವರಿ ಸೌಕರ್ಯ ಸಿಕ್ಕುತ್ತದೆ. ಅದರಿಂದ ಆಹಾರಾಭಾವವನ್ನು ನೀಗಿಸುವುದಕ್ಕೆ ಸಹ ಅನುಕೂಲವಾಗುತ್ತದೆ. ಆದುದರಿಂದ ಈ ಕೆರೆಯನ್ನು ಶೀಘ್ರವಾಗಿ ಷುರು ಮಾಡಿಸಬೇಕು.

ಹೋದ ವರ್ಷದ ಬಜೆಟ್ಟಿನಲ್ಲಿ ತಕ್ಕಿನಬಾವನೂರು ಹತ್ತಿರ ಒಂದು ಕೆರೆಯನ್ನು ಕಟ್ಟಲು ಬಜೆಟ್ಟಿನಲ್ಲಿ ಹಣವನ್ನು ಒದಗಿಸಿದ್ದರು. ಈ ವರ್ಷ ಅದನ್ನು ಕೈಬಿಟ್ಟಿದ್ದಾರೆ. ಇದಕ್ಕೆ ಕಾರಣವೇನು ಎನ್ನುವುದನ್ನು ಸವಿಸ್ತಾರವಾಗಿ ತಿಳಿಸಬೇಕೆಂದು ಕೇಳುತ್ತೇನೆ. ಕೇವಲ ಮೂರು ನಾಲ್ಕು ಕೆರೆಗಳಿರುವ ಒಂದು ತಾಲ್ಲೂಕಿಗೆ ಹೋದ ವರ್ಷ ಮಂಜೂರಾಗಿದ್ದಂಥ ಈ ಕೆರೆಯನ್ನು ಇವತ್ತಿನ ದಿವಸ ಏತಕ್ಕೋಸ್ಕರ ಕೈ ಬಿಟ್ಟಿದ್ದಾರೆ ಎನ್ನುವ ವಿಚಾರ ಬೇಕಾಗಿದೆ. ಆ ಭಾಗದಲ್ಲಿ ಹೆಚ್ಚಿನ ನೀರಾವರಿಗೆ ಸೌಕರ್ಯಗಳಿಲ್ಲ. ಸಣ್ಣ ನೀರಾವರಿ ಯೋಜನೆಯಲ್ಲಿ ನೀರಾವರಿ ಬಾವಿಗಳಿಗೆ ಕೊಡತಕ್ಕ ಹಣ ನಮ್ಮ ತಾಲ್ಲೂಕಿಗೆ ಬಹಳ ಕಡಮೆ ಬರುತ್ತಿದೆ. ನೀರಾವರಿ ಸಪ್ತಾಹ ಸಂಬಂಧದಲ್ಲಿ ಬಾವಿಗಳಿಗಾಗಿ ಅರ್ಜಿಗಳನ್ನು ಸಂಗ್ರಹಿಸಿದ್ದರಲ್ಲಿ ಕೇವಲ 60 ಬಾವಿಗಳಿಗೆ ಮಾತ್ರ ಹಣ ಕೊಟ್ಟು ಇನ್ನು 100—120 ಬಾವಿಗಳಿಗೆ ಹಣ ಕೊಡದೆ ಇರುವುದರಿಂದ ತೊಂದರೆಯಾಗಿದೆ. ಈ ವರ್ಷವಾದರೂ ಉಳಿದಿರುವ ಬಾವಿಗಳಿಗೆ ಹಣವನ್ನು ಒದಗಿಸಿಕೊಡಬೇಕೆಂದು ಹೇಳಬಯಸುತ್ತೇನೆ.

ಧಾರವಾಡ ಡಿವಿಜನ್‌ನಲ್ಲಿ ರಸ್ತೆ ಮಾಡುವುದಾಗಲೀ ಆಸ್ಫಾಲ್ಟಿಂಗ್ ಮಾಡುವುದಾಗಲೀ ಸೇತುವೆಗಳನ್ನು ಕಟ್ಟುವುದಾಗಲೀ ಯಾವುದೂ ಕಂಡು ಬರುತ್ತಿಲ್ಲ. ಇದನ್ನು ನೋಡಿದರೆ ಧಾರವಾಡ ಜಿಲ್ಲೆ ಇದೆಯೋ ಇಲ್ಲವೋ ಎನ್ನುವ ವಿಚಾರವನ್ನು ಗಮನಿಸಬೇಕಾಗಿದೆ. ಧಾರವಾಡ ಡಿವಿಜನ್ನಿನಲ್ಲಿ ಒಬ್ಬ ಎಕ್ಸಿಕ್ಯೂಟಿವ್ ಇಂಜಿನಿಯರಿದ್ದಾರೆ. ಅವರಿಗೆ ತಕಷ್ಟು ಸಿಬ್ಬಂದಿಯೂ ಇದೆ. ಅವರಿಂದ ನಮಗೆ ಏನೂ ಪ್ರತಿಫಲ ಬರುತ್ತಿಲ್ಲ. ಅದಕ್ಕಾಗಿ ಅದರೂ ಕೂಡ ಹೆಚ್ಚು ಹಣವನ್ನು ಕೊಟ್ಟು ರಸ್ತೆಗಳಿಗೆ ಆಸ್ಫಾಲ್ಟಿಂಗ್ ಮಾಡುವುದು, ಸೇತುವೆಗಳನ್ನು ನಿರ್ಮಿಸುವುದು ಇಂಥ ಕೆಲಸಗಳಿಗೆ ಅವಕಾಶ ಮಾಡಬೇಕು ಎಂದು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ.

ಪಾಲ—ಬಾದಾಮಿ ರಸ್ತೆ ಸ್ಟೇಟ್‌ಫಂಡ್ ರಸ್ತೆಯಾಗಿಲ್ಲ. ಲೋಕೋಪಯೋಗಿ ಮಂತ್ರಿಗಳು ಆ ಭಾಗಕ್ಕೆ ಆಗಾಗ್ಗೆ ಬಂದಿದ್ದಾರೆ. ಲಕ್ಷ್ಮೇಶ್ವರ-ಶಿರಹಟ್ಟಿ ರಸ್ತೆ ಸಹ ಬಹಳ ಉಪಯುಕ್ತವಾದ ರಸ್ತೆಯಾಗಿದೆ. ಇಲ್ಲಿ ಪ್ರತಿ ವರ್ಷ ಒಂದೊಂದು ಸೇತುವೆಯನ್ನು ಕಟ್ಟುತ್ತೇವೆಂಬ ಭರವಸೆಯನ್ನು ಕೊಟ್ಟಿದ್ದರು. ಯಾವ ಕಾರಣದಿಂದ ತೆಗೆದುಹಾಕಿದರೋ ತಿಳಿಯದೆ ಇದೆ. ಆ ರಸ್ತೆಗಳು ವಾಹನ ಸೌಕರ್ಯಕ್ಕೆ ಸರಿಯಾಗಿ ಇಲ್ಲದೆ ಇರುವುದರಿಂದ ಅವುಗಳನ್ನು ಸರಿಪಡಿಸಿ ಆಸ್ಫಾಲ್ಟಿಂಗ್ ಮಾಡಬೇಕೆಂದು ಹೇಳಬಯಸುತ್ತೇನೆ.

(ಶ್ರೀ ಸಿದ್ದಯ್ಯ ಕಾಶಿಮಠ)

ಮತ್ತೊಂದು ಸಂಗತಿ ಎಂದರೆ ಲಕ್ಷ್ಮೇಶ್ವರ-ಸವಣೂರು ರಸ್ತೆ. ಮಾನ್ಯ ಹಣಕಾಸು ಉಪಮಂತ್ರಿಗಳ ಕಾರು ಕೂಡ ಅಲ್ಲಿ ಸಿಕ್ಕಿಕೊಂಡ ಪರಿಸ್ಥಿತಿ ಇದೆ. ಅವರೂ ಕೂಡ ಲೋಕೋಪಯೋಗಿ ಮಂತ್ರಿಗಳ ಕಡೆಗೆ ರಿಪೋರ್ಟ್ ಕಳಿಸಿದ್ದಾರೆ. ಆ ರಸ್ತೆಯನ್ನು ರಿಪೇರಿ ಮಾಡಿಸಿ ಅಸ್ಫಾಲ್ಟಿಂಗ್ ಮಾಡಿಸಬೇಕು ಮತ್ತು ಆ ರಸ್ತೆ ವಾಹನ ಸಂಚಾರಕ್ಕೆ ಸೌಕರ್ಯವಾಗುವಂತೆ ಮಾಡಬೇಕು ಎಂದು ಹೇಳಬಯಸುತ್ತೇನೆ.

ಇನ್ನು ಲಕ್ಷ್ಮೇಶ್ವರ್—ಬೆಳವಾಡಿ ರಸ್ತೆ ಎಂಬುದಾಗಿ ಮಾಡಿದ್ದಾರೆ. ಅದಿನ್ನೂ ಪೂರ್ತಿ ಮುಗಿಯುವ ಸ್ಟೇಜಿನಲ್ಲದೆ, ಅದನ್ನು ಪೂರ್ತಿಯಾಗಿ ಮಾಡುವುದರಿಂದ ಹೆಚ್ಚಿನ ಅನುಕೂಲಗಳು ಉಂಟು. ಅದರಿಂದ ಉಲ್ಲಾರ್ ಗ್ರಾಮಕ್ಕೆ 22 ಮೈಲಿ ದೂರ ಸರಾಗವಾಗಿ ವಾಹನ ಸೌಕರ್ಯವನ್ನು ಕೊಡಬಹುದು. ಈಗಾಗಲೇ 25-30 ಗ್ರಾಮಗಳಿಗೆ ವಾಹನ ಸೌಕರ್ಯಕ್ಕೆ ತೊಂದರೆಯಾಗಿದೆ. ಎಂ.ಎಸ್.ಆರ್.ಟಿ.ಸಿ. ನಮೂನೆ ಮಾಡಿದ ರಸ್ತೆ ಪರಿಯಾಗಿಲ. ಆದರೆ ಅಲ್ಲಿ ರಸ್ತೆಗಳ ಅವಶ್ಯಕತೆಗಾಗಿ ಅರ್ಜಿಗಳು ಮೇಲಿಂದ ಮೇಲೆ ಬರತಕ್ಕ ಪ್ರಮೇಯವಿರುವುದರಿಂದ ಅಲ್ಲಿ 80 ಸಾವಿರ ರೂಪಾಯಿಗಳು ಖರ್ಚಾದರೂ ಒಂದು ಸೇತುವೆಯನ್ನು ಕಟ್ಟಬೇಕು.

ಇನ್ನು ನಮ್ಮಲ್ಲಿರತಕ್ಕ ಟ್ರಾವಲರ್ಸ್ ಬಂಗಲೆ ಬಹಳವಾಗಿ ದುರಸ್ತು ಆಗುವ ಪರಿಸ್ಥಿತಿ ಇದೆ. ಅಲ್ಲಿರತಕ್ಕ ಫರ್ನಿಚರ್ ಹೇಗಿವೆಯೆಂದರೆ, ಮುರಿದ ಮುರಿದ ಕಾಲುಗಳು ಇರತಕ್ಕ ಮಂಚ, ಮೇಜು, ಕುರ್ಚಿಗಳೇ ಬಹಳ ಜಾಸ್ತಿ. ತಿಗಣೆಗಳಂತೂ ಇನ್ನೂ ಜಾಸ್ತಿ. ಆದ್ದರಿಂದ ಅಲ್ಲಿಗೆ ಅತಿ ಜಾಗ್ರತೆಯಾಗಿ ಒಳ್ಳೆಯ ಫರ್ನಿಚರನ್ನು ಒದಗಿಸಬೇಕು. ಇಲ್ಲದಿದ್ದರೆ ಬಹಳ ಕೆಟ್ಟ ಪರಿಸ್ಥಿತಿ ಅಲ್ಲಿ ಉಂಟಾಗುತ್ತದೆ. ಅಲ್ಲಿಗೆ ಬಂದವರು ಯಾವಾಗಲೂ ತಕರಾರು ಮಾಡುತ್ತಿದ್ದಾರೆ. ಆದಷ್ಟು ಮಟ್ಟಿಗೆ ಇವತ್ತು ಅಲ್ಲಿನ ದುರಸ್ತಿಗಾಗಿ ಸ್ವಲ್ಪ ಹಣವನ್ನು ಕೊಡಬೇಕು. ಇನ್ನು ಲಕ್ಷ್ಮೇಶ್ವರದ ಹತ್ತಿರ ಒಂದು ಟ್ರಾವಲರ್ಸ್ ಬಂಗಲೆಯನ್ನು ಕಟ್ಟಬೇಕೆಂಬ ಪ್ರಪೋಸಲ್ಲನ್ನು ಕಳುಹಿಸಿದ್ದೆವು. ಅದಕ್ಕೆ 40 ಸಾವಿರ ರೂಪಾಯಿಗಳ ಅಂದಾಜು 3 ವರ್ಷಗಳ ಕೆಳಗೇ ಬಂದಿದೆ. ಇಲ್ಲಿಯವರೆಗೂ ಅದಿನ್ನೂ ಮಂಜೂರು ಆಗಲಿಲ್ಲ. 20 ಸಾವಿರ ಜನಸಂಖ್ಯೆ ಇರತಕ್ಕ ಈ ಊರಿಗೆ ಸುತ್ತಮುತ್ತಲೂ ಯಾವುದೇ ತರಹ ಸೌಕರ್ಯಗಳು ಇಲ್ಲದೇ ಇರುವುದರಿಂದ ಲಕ್ಷ್ಮೇಶ್ವರದಲ್ಲಿ ಒಂದು ಟ್ರಾವಲರ್ಸ್ ಬಂಗಲೆಯನ್ನು ಕಟ್ಟುವುದಕ್ಕೆ ತಕ್ಕ ವ್ಯವಸ್ಥೆ ಮಾಡಲು ಸಾಕಷ್ಟು ಹಣವನ್ನು ಮಂಜೂರು ಮಾಡಬೇಕು.

ಇನ್ನು ಪಿ.ಡಬ್ಲ್ಯು.ಡಿ.ಯಲ್ಲಿ ಐಡ್ಲ್ ಆಗಿರತಕ್ಕ ಮೆಷಿನರಿಗಳನ್ನು ಕೂಡಲೇ ಸರ್ಕಾರದವರು ಹರಾಜು ಮಾಡಬೇಕು. ಅವನ್ನು ರಿಪೇರಿ ಮಾಡುವುದರಿಂದ ಯಾವ ತರಹ ಸೌಲಭ್ಯವೂ ಬರುವುದಿಲ್ಲ. ಅದರಿಂದ ಬರತಕ್ಕ ಹಣದಿಂದ ಹೊಸ ಮೆಷಿನರಿಗಳನ್ನು ತರಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಎಲೆಕ್ಟ್ರಿಕ್ ಸ್ಕೀಮ್ಸ್ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಮುಖ್ಯಮಂತ್ರಿಗಳು ಇನ್ನು ಕೆಲವೇ ವರ್ಷಗಳಲ್ಲಿ ಎಲ್ಲಾ ಗ್ರಾಮಗಳಿಗೂ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುತ್ತೇವೆಂಬುದಾಗಿ ಹಿಂದೆಯೇ ಆಶ್ವಾಸನೆ ಕೊಟ್ಟಿದ್ದಾರೆಂದು ನನಗನ್ನಿಸುತ್ತಿದೆ. ಆದರೆ ಈಗ ಶರಾವತಿ ವ್ಯಾಲಿಯಿಂದ ಸಾಕಷ್ಟು ಕರೆಂಟ್ ಬರುತ್ತಾ ಇರುವಾಗ ಈಗಿರತಕ್ಕ ಮೆಟೀರಿಯಲ್ಸ್ ಏನಿವೆ ಅವು ಅಷ್ಟಾಗಿ ಉಪಯುಕ್ತವಾಗಿಲ್ಲ. ಆದ್ದರಿಂದ ಹೊಸ ಹೊಸ ಸಾಮಗ್ರಿಗಳನ್ನು ಮುಂದೆ ಉಪಯೋಗಿಸುವುದು ಉತ್ತಮ. ನನ್ನ ತಾಲ್ಲೂಕಿನಲ್ಲಿ ಲಕ್ಷ್ಮೇಶ್ವರಕ್ಕೆ ಕಂಬಗಳನ್ನು ಹಾಕಿ ವೈರ್‌ಗಳನ್ನು ಎಳೆದಿದ್ದಾರೆ. ಟ್ರಾನ್ಸ್‌ಫಾರ್ಮರ್ಸ್ ಮತ್ತು ಕಂಡಕ್ಟರ್ಸ್ ಇಲ್ಲದೆ ಆ ಕೆಲಸಗಳು ಹಾಗೆಯೇ ನಿಂತಿವೆ. 480 ಪಂಪು ಸೆಟ್ಟುಗಳಿಗೆ ಹಣ ತುಂಬಿದ್ದರೂ ಆ ಬಗ್ಗೆ ಬೇಕಾದಷ್ಟು ಅರ್ಜಿಗಳು ಬಂದಿದ್ದಾಗ್ಯೂ ಇನ್ನೂ ಸರ್ವೆ ಮಾಡಿಲ್ಲ, ಎಲೆಕ್ಟ್ರಿಸಿಟಿ ಬೋರ್ಡಿಗೆ ಹೇಳುತ್ತೇವೆ ಎಂಬುದಾಗಿ ಇವರು ಹೇಳಿದರೆ ಹೇಗೆ? ಎಲೆಕ್ಟ್ರಿಸಿಟಿ ಬೋರ್ಡ್ ಬರೀ ಬೆಂಗಳೂರಿನಲ್ಲಿದ್ದರೆ ಸಾಲದು. ಡಿವಿಜನ್ನುಗಳಲ್ಲಿ ಅದರ ಬ್ರಾಂಚುಗಳು ಇಲ್ಲದೇ ಹೋದರೆ ಅದರಿಂದ ಸರಾಗವಾಗಿ ಕೆಲಸಗಳು ನಡೆಯುವುದಿಲ್ಲ. ಪ್ರತಿಯೊಂದು ಮಂಜೂರಾತಿಗೂ ಬೆಂಗಳೂರಿಗೇ ಬರುವುದಕ್ಕಾಗುವುದಿಲ್ಲ. ಆದ್ದರಿಂದ ಈಗಲಾದರೂ ಪ್ರತಿಯೊಂದು ಡಿವಿಜನ್ನಿನಲ್ಲಿಯೂ ಸೂಪರಿಂಟೆಂಡಿಂಗ್ ಇಂಜನಿಯರ್ ಅವರನ್ನು ಚೇರ್ಮನ್ನರಾಗಿ ಮಾಡಿ ಅವರ ಜೊತೆಯಲ್ಲಿ ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟ್, ಎಂ.ಎಲ್.ಎ. ಮತ್ತು ಎಂ.ಎಲ್.ಸಿ. ಸದಸ್ಯರು ಇತರ ಪ್ರಮುಖರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಅವರು ಮುಖಾಂತರ ವಿದ್ಯುಚ್ಛಕ್ತಿಯನ್ನು ಹಂಚುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಅಲ್ಲದೆ ಸ್ಥಳೀಯ ಮುಖಂಡರ ಮೂಲಕವೂ ಪ್ರತಿಯೊಂದು ತಾಲ್ಲೂಕಿಗೂ ಕರೆಂಟ್ ಕೊಡುವ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಹೇಳುತ್ತೇನೆ.

ಕೊನೆಯದಾಗಿ, ಈಗ ಅದುರು ಸಾಗಾಣಿಕೆಯ ಬಗ್ಗೆ ಕಾರವಾರಕ್ಕೆ ಪ್ರಥಮಸ್ಥಾನ ಕೊಡಬೇಕೆಂದು ಹೇಳಿ ಈಗ ಹೊಬ್ಳಿಯನ್ನು ತೋರಿಸುತ್ತಿದ್ದಾರೆ. ಆದರೆ ಅಲ್ಲಿ ರಸ್ತೆ ಸ್ವಲ್ಪಮಟ್ಟಿಗೆ ರಿಪೇರಿಯಾಗುತ್ತಿದೆ. ಆದರೂ ಅಲ್ಲಿ ಸಾಗಾಣಿಕೆ ಅಷ್ಟಾಗಿ ಆಗುತ್ತಿಲ್ಲ. ಅದನ್ನು ಅತಿ ಜಾಗ್ರತೆಯಾಗಿ ಸರಿಪಡಿಸಬೇಕು. ಅಷ್ಟೇ ಅಲ್ಲದೆ ಅಲ್ಲಿ ಒಂದು ದೊಡ್ಡ ಪೋರ್ಟ್ ನಿರ್ಮಾಣಕ್ಕೆ ಅವಕಾಶ ಕೊಡಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಇಷ್ಟು ಇಲ್ಲಿ ಹೇಳುವುದಕ್ಕೆ ನನಗೆ ಸಮಯವನ್ನು ಅಧ್ಯಕ್ಷರು ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[Mr. SPEAKER in the Chair]

Mr. SPEAKER.—What time will be required by the Hon'ble Minister for replying to the Debate ? I want to regulate the business and see that the same thing that happened in the General Debate on the Budget does not happen here also

Sri VEERENDRA PATIL (Minister for Public Works).—We will require two hours.

Mr. SPEAKER.—The general Debate on this demand will continue till tea-break tomorrow and thereafter there will be the reply. No member should embarrass me by asking for extension of time.

Sri ANNA RAO GANAMUKHI (Afzalpur).—This is an important demand and therefore some members have to be adjusted.

Mr. SPEAKER.—According to the well-known procedures and conventions, it can be done.

Sri ANNA RAO GANAMUKHI.—Irrigation and General Administration are there.

Mr. SPEAKER.—Are not the members and the Whips aware of it?

Sri ANNARAO GANAMUKHI.—If you become so rigid as not to allow some more members, it becomes difficult.

Mr. SPEAKER.—I know it is difficult and a difficult problem must be solved well in advance. The assistance from the Whips does not redound well to us. Why not the Whips and Members sit together and arrive at something ? I get rivised lists every minute.

Sri ANNA RAO GANAMUKHI.—This morning, the Whips also are not there.

Mr. SPEAKER.—Is that a consolation to me?

Sri ANNA RAO GANAMUKHI.—It becomes difficult to approach you directly. Then you will say we must approach the Whips.

Mr. SPEAKER.—The member must tell the leader of the party if the Whip is not functioning.

Sri ANNA RAO GANAMKUKHI.—Please do not become so rigid as that.

Mr. SPEAKER.—It means that, I have become heartless, cold and rigid.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಸ್ವಾಮೀ, ನಮ್ಮ ಮುಂದೆ ಲೋಕೋಪಯೋಗಿ ಇಲಾಖೆಯವರು ತಮ್ಮ ಶಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಮಂಡಿಸಿರುವುದನ್ನು ನಾನು ಸ್ವಾಗತಿಸುತ್ತೇನೆ. ಈ ಇಲಾಖೆ ಅತಿಮುಖ್ಯವಾದುದು. ರಾಜ್ಯದಲ್ಲಿ ಜನತೆಗೆ ಇದರಿಂದೇನಾದರೂ ಪ್ರತಿಫಲ ಬರಬೇಕು ಎಂದಿದ್ದರೆ ಈ ಇಲಾಖೆ ಚೆನ್ನಾಗಿ ಕೆಲಸ ಮಾಡಬೇಕು. ಅಂತಹ ಇಲಾಖೆಯಲ್ಲಿ ತರುಣ ವಯಸ್ಸಿನಲ್ಲಿರತಕ್ಕ ಶ್ರೀಮಾನ್ ವೀರೇಂದ್ರಪಾಟೀಲ್ ಅವರು ಸಚಿವರಾಗಿ ಈ ಖಾತೆಯನ್ನು ಹೊಂದಿಕೊಂಡ ನಂತರ ಈ ಇಲಾಖೆಯ ಕೆಲಸ ಕಾರ್ಯಗಳನ್ನು ಆದಷ್ಟು ಭರದಿಂದ ಹಾಗೂ ಚಟುವಟಿಕೆಗಳಿಂದ ಮಾಡುತ್ತಾ ಇದ್ದಾರೆ. ಅಲ್ಲದೆ ಅವರ ಸಿಬ್ಬಂದಿಯವರೂ ಕೂಡ ಅವರಷ್ಟೇ ಭರದಿಂದ ಅಲ್ಲಿನ ಕೆಲಸಗಳನ್ನು ಮಾಡಿಕೊಂಡು ಬರುತ್ತಾ ಇದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳಲು ಸಂತೋಷ ಪಡುತ್ತೇನೆ. ಆದರೆ ಬರೀ ಟೀಕೆಗಳನ್ನು ಮಾಡುವುದೇ ಮುಖ್ಯವಲ್ಲ. ಇಡೀ ಇಲಾಖೆಯನ್ನು ನೋಡಿಕೊಳ್ಳುವುದಕ್ಕೆ ಕೆಲಸ ಕಾರ್ಯಗಳು ಎಷ್ಟರಮಟ್ಟಿಗೆ ಅಲ್ಲಿ ಸಾಗಿದೆ, ಅದಕ್ಕಾಗಿ ಅವರು ಎಷ್ಟು ಕಷ್ಟ ಪಡುತ್ತಿದ್ದಾರೆಂಬುದನ್ನು ವಿಚಾರ ಮಾಡಬೇಕಾಗಿದೆ. ಅನೇಕ ಕಾಮಗಾರಿಗಳನ್ನು ಸೇತುವೆ ಕೆಲಸಗಳನ್ನು ಮಾಡಲು ಕೋಟಿಗಟ್ಟಲೆ ಹಣವನ್ನು ಒದಗಿಸಿ ಸರ್ವೆಮಾಡಿ ಬೇಕಾದಷ್ಟು ಉಪಯುಕ್ತ ಕೆಲಸವನ್ನು ಮಾಡುತ್ತಿದ್ದಾರೆ. ಏಕೆಂದರೆ, ಅವರು ಮಾಡಿರತಕ್ಕ ಕೆಲಸಗಳಿಗೆ ಅವರ ಬೆನ್ನನ್ನು ಚಪ್ಪಾಯಿಸಲೇಬೇಕು, ಅವರ ಬೆನ್ನು ತಟ್ಟಬೇಕು. ಆದರೆ ಇನ್ನೂ ಆಗತಕ್ಕ ಕೆಲಸ ಬಹಳ ಇದೆ. ಅದನ್ನು ಮಾಡಿ ಎಂದು ನಾವೆಲ್ಲರೂ ಹೇಳೋಣ. ಆದರೆ ಅವರು ಮಾಡಿರುವ ಕೆಲಸಗಳ ಬಗ್ಗೆ ಪ್ರಶಂಸೆ ಮಾಡದೆಯೇ ನಾವು ಬರೀ ಟೀಕೆ ಮಾಡುವುದು ಅಷ್ಟು ಸಮಂಜಸವಾದುದಲ್ಲವೆಂದು ನಾನು ಹೇಳುತ್ತೇನೆ.

ಸ್ವಾಮೀ, ಈ ಇಲಾಖೆ ಅನೇಕ ಸೇತುವೆಗಳ ಕೆಲಸಗಳನ್ನೂ, ನೀರಾವರಿ ಕೆಲಸ ಕಾರ್ಯಗಳನ್ನೂ ಮತ್ತು ರಸ್ತೆ ಕಾಗಾರಿಗಳನ್ನೂ ಕೂಡ ಸಮರ್ಪಕವಾಗಿ ಮಾಡುತ್ತಾ ಇದೆ. ಆದರೆ ನಾನಾದರೂ ಹೇಳುತ್ತೇನೆ. ಅತಿ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆ ಕೆಲಸ ಕಾರ್ಯಗಳು ಆಗತಕ್ಕದ್ದರಲ್ಲಿ ಈಗ ಈ ಇಲಾಖೆ ಹಿಂದೆ ಬಿದ್ದಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಾನು ಆ ರೀತಿ ಹೇಳಿದ್ದನ್ನು ಮಾನ್ಯ ಸಚಿವರೂ ಕೂಡ ಅದರ ಬಗ್ಗೆ ಒಪ್ಪಿಕೊಳ್ಳುತ್ತಾರೆ. ಅದು ಏನೇ ಇರಲಿ, ನಾವು ಜನತೆಯ ಪ್ರತಿನಿಧಿಗಳಾಗಿ ಇಲ್ಲಿಗೆ ಚುನಾಯಿಸಿ ಬಂದಿದ್ದೇವೆ. ಅದರೆ ಮೊದಲನೆಯದಾಗಿ ಯಾವೊಂದು ಕಾರ್ಯದ ಪ್ರತಿ ಫಲವು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನಗಳಿಗೆ ಮುಟ್ಟಬೇಕಾದುದು ಸರಿ ಮತ್ತು ಅತಿ ಮುಖ್ಯವೆಂದು ನಾನು ಒಪ್ಪಿಕೊಳ್ಳುತ್ತೇನೆ. ಹೀಗಿರುವಾಗ ಸಚಿವರು ದೊಡ್ಡ ದೊಡ್ಡ ಪಟ್ಟಣಗಳಲ್ಲಿರತಕ್ಕ ದೊಡ್ಡ ದೊಡ್ಡ ರಸ್ತೆಗಳಲ್ಲಿ ಟಾರ್ ಮತ್ತು ಸಿಮೆಂಟ್ ರಸೆಗಳನ್ನು ಮಾಡಿಸಿಕೊಂಡು ಹೋಗುತ್ತಿರುವುದನ್ನು ಸ್ವಲ್ಪ ಮಟ್ಟಿಗೆ ಕಡಿಮೆಮಾಡಿ ಅವರ ಗಮನವನ್ನು ಗ್ರಾಮಾಂತರ ಪ್ರದೇಶಗಳ ಕಡೆ ಸೆಳೆಯಬೇಕೆಂದು ನಾನು ಅವರ ಮನಸ್ಸನ್ನು ಈಗ ಸೆಳೆಯಬಯಸುತ್ತೇನೆ.

ಭದ್ರಾ ಪ್ರಾಜೆಕ್ಟ್‌ನಲ್ಲಿ ಇದ್ದ ಸಿಬ್ಬಂದಿಯನ್ನು ಕೂಡ ಸರ್ಕಾರದವರು ಕಡಿಮೆ ಮಾಡಿದ್ದಾರೆ. ಅಲ್ಲಿ ಆ ಕೆಲಸ ನಡೆದ ನಡೆಯುವ ಸಂದರ್ಭದಲ್ಲಿ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿ ವರ್ಗದವರಿಗೋಸ್ಕರ ಕಟ್ಟಿರತಕ್ಕಂಥ ಸಾವಿರಾರು ಮನೆಗಳು ಭದ್ರಾ ಪ್ರಾಜೆಕ್ಟಿನಲ್ಲಿವೆ. ಹಾಗೂ ಅಲ್ಲಿ ವರ್ಕ್‌ಷಾಪ್‌ಗಳು ಕೂಡ ಇವೆ. ಆ ಪ್ರಾಜೆಕ್ಟಿನ ಕೆಲಸ ಪೂರೈಸಿತು ಎಂದು ತಿಳಿದುಕೊಂಡು ಈಗ ಅಲ್ಲಿದ್ದ ಸಿಬ್ಬಂದಿಯನ್ನು ಸರ್ಕಾರದವರು ಬೇರೆ ಕಡೆಗೆ ವರ್ಗ ಮಾಡಿದ್ದಾರೆ. ಆ ಸಿಬ್ಬಂದಿವರ್ಗದವರಿಗೋಸ್ಕರ ಸರ್ಕಾರದವರು ಕಟ್ಟಿಸಿದ್ದಂತಹ ಮನೆಗಳು ಹಾಗೇ ಇವೆ. ಇವೊತ್ತಿನ ದಿವಸ ಆ ಮನೆಗಳನ್ನು ನೋಡಿಕೊಳ್ಳತಕ್ಕವರು ಯಾರೂ ಇಲ್ಲ. ಆದ್ದರಿಂದ ಸರ್ಕಾರದವರು ದಯವಿಟ್ಟು ಈಗ ಅಲ್ಲಿರತಕ್ಕ ವರ್ಕ್‌ಷಾಪುಗಳನ್ನು ತೆಗೆಯದೆ ಹಾಗೆಯೇ ಉಳಿಸಿ ಅಲ್ಲಿ ಯಾವುದಾದರೂ ಒಂದು ಸಣ್ಣ ಕೈಗಾರಿಕೆಯನ್ನು ಸ್ಥಾಪನೆ ಮಾಡಿದರೆ ಒಳ್ಳೆಯದು. ಏತಕ್ಕೆಂದರೆ ಅಲ್ಲಿ ಜನಗಳು ವಾಸ ಮಾಡುವುದಕ್ಕೆ ಬೇಕಾದ ಮನೆಗಳು ದೀಪ, ನಲ್ಲಿ, ರಸ್ತೆ, ಪೋಲೀಸ್ ಸ್ಟೇಷನ್ ಮುಂತಾದ ಎಲ್ಲಾ ಸೌಕರ್ಯಗಳೂ ಇವೆ. ಆದ್ದರಿಂದ ಅಲ್ಲಿ ಒಂದು ಸಣ್ಣ ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ಸಾಮಾನ್ಯ ಆಡಳಿತ ಇಲಾಖೆಯ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತೇನೆ. ಈಗ ಈ ಸಭೆಯಲ್ಲಿ ಮಾನ್ಯ ಹಣಕಾಸಿನ ಸಚಿವರೂ ಇಲ್ಲ, ಮತ್ತು ವ್ಯವಸಾಯ ಶಾಖೆಯ ಸಚಿವರೂ ಇಲ್ಲ. ಆದ್ದರಿಂದ ಈಗ ಈ ಸಭೆಯಲ್ಲಿರತಕ್ಕ ಮಾನ್ಯ ಪಬ್ಲಿಕ್ ವರ್ಕ್ಸ್ ಶಾಖೆಯ ಮಂತ್ರಿಗಳೇ ನಾನು ಹೇಳತಕ್ಕ ವಿಚಾರಗಳನ್ನು ಗುರುತು ಹಾಕಿಕೊಂಡು ಅದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ ಈ ವಿಚಾರದಲ್ಲಿ ಉತ್ತರವನ್ನು ಕೊಡಿಸುವುದಕ್ಕೆ ಸಹಾಯ ಮಾಡುತ್ತಾರೆಂದು ನಾನು ನಂಬಿದ್ದೇನೆ. ಇನಾಮ್ ಅಬಾಲಿಷನ್ ಸಂಬಂಧದಲ್ಲಿ ನಮ್ಮ ರಾಜ್ಯದಲ್ಲಿ ಸ್ಪೆಷಲ್ ಆಗಿ ಜಿಲ್ಲಾಧಿಕಾರಿಗಳನ್ನು

ನೇಮಕ ಮಾಡಿ ಅವರಿಗೆ ಬೇಕಾದ ಸಿಬ್ಬಂದಿ ವರ್ಗವನ್ನೂ ಕೂಡ ಸರ್ಕಾರದವರು ನೇಮಿಸಿದ್ದರು. ಈಗ ಆ ಕೆಲಸ ಮೈಸೂರು ಜಿಲ್ಲೆಯಲ್ಲಿ ಪೂರ್ತಿ ಆಗಿದೆ. ಹಾಸನ ಜಿಲ್ಲೆಯಲ್ಲಿ 9 ಹಳ್ಳಿಗಳು ಮಾತ್ರ ಉಳಿದಿವೆ. ಚಿಕ್ಕಮಗಳೂರು ಜಿಲ್ಲೆ ಪೂರ್ತಿಯಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ 9 ಹಳ್ಳಿಗಳು ಮಾತ್ರ ಇವೆ. ಮತ್ತು ಮಂಡ್ಯ ಜಿಲ್ಲೆಯಲ್ಲಿ 10 ಹಳ್ಳಿಗಳಿವೆ; ಸುಮಾರು 28 ಗ್ರಾಮಗಳಿಗೆ ಇನಾಮ್ ಅಬಾಲಿಷನ್ ಸಂಬಂಧದ ಕೆಲಸವನ್ನು ಮಾಡುವುದಕ್ಕೋಸ್ಕರ ಇಬ್ಬರು ಜಿಲ್ಲಾಧಿಕಾರಿಗಳಿದ್ದಾರೆ. ಮತ್ತು ಸಿಬ್ಬಂದಿ ವರ್ಗ ಇದೆ. ಇದು ಏತಕ್ಕೆ ಬೇಕು, ಇದನ್ನು ಸರ್ಕಾರದವರು ಏತಕ್ಕೆ ತೆಗೆಯಬಾರದು ? ಇವರಿಗಾಗಿ ಇಷ್ಟೊಂದು ಹಣವನ್ನು ಏತಕ್ಕೆ ಖರ್ಚು ಮಾಡಬೇಕು, ಇದು ಸರಿಯಲ್ಲ; ದಯವಿಟ್ಟು ಈ ಹುದ್ದೆಯನ್ನೂ ಮತ್ತು ಅವರಿಗಾಗಿ ಕೊಟ್ಟಿರತಕ್ಕ ಸಿಬ್ಬಂದಿಯನ್ನೂ ತಕ್ಷಣ ತೆಗೆಯಬೇಕು. ಅದರಿಂದ ಕೂಡ ನಮ್ಮ ಸರ್ಕಾರಕ್ಕೆ ಹಣ ಉಳಿತಾಯವಾಗುತ್ತದೆಂದು ನಾನು ಸರ್ಕಾರದವರಿಗೆ ಹೇಳಲು ಅಪೇಕ್ಷೆ ಪಡುತ್ತೇನೆ. ಈಗ ನಮ್ಮ ರಾಜ್ಯದಲ್ಲಿರತಕ್ಕ ಎಲ್ಲಾ ಇಲಾಖೆಗಳಲ್ಲೂ ಕೂಡ ಈಗಿರತಕ್ಕ ಸಿಬ್ಬಂದಿವರ್ಗ ಜಾಸ್ತಿಯಾಗಿದೆ. ನಮ್ಮಲ್ಲಿ ಈಗಿರತಕ್ಕ ಸಿಬ್ಬಂದಿವರ್ಗದಲ್ಲಿ ಶೇಕಡಾ 20-30 ರಷ್ಟು ಕಡಿಮೆ ಮಾಡಬಹುದು. ಇದರ ಬಗ್ಗೆ ತಾವು ಏನು ವಿಚಾರಮಾಡುತ್ತೀರಿ ಎಂಬುದನ್ನು ದಯವಿಟ್ಟು ಹೇಳಬೇಕು.

ಇನ್ನೊಂದು ವಿಚಾರ. ಈಗ ನಮ್ಮ ರಾಜ್ಯದಲ್ಲಿ ಯೂನಿಟ್ ಅಧಿಕಾರಿಗಳು ಅಲ್ಲಲ್ಲೇ ಲೋಕಲ್ ಕ್ಯಾಂಡಿಡೇಟ್ಸ್‌ಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದಾರೆ. ಇದು ತಪ್ಪು. ಇದನ್ನು ಸರ್ಕಾರದವರು ಸ್ವಲ್ಪ ವಿಚಾರಮಾಡಿ ಯೂನಿಟ್ ಅಧಿಕಾರಿಗಳು ಲೋಕಲ್ ಕ್ಯಾಂಡಿಡೇಟ್‌ಗಳನ್ನು ನೇಮಕ ಮಾಡಿಕೊಳ್ಳುವುದನ್ನು ನಿಲ್ಲಿಸಬೇಕು. ಮತ್ತು ಎಲ್ಲಾ ಇಲಾಖೆಗಳಲ್ಲಿಯೂ ನೌಕರರಿಗೆ ಯಾವ ಯಾವ ಕೆಲಸ ಎಷ್ಟೆಷ್ಟು ಇದೆ ಎಂಬುದನ್ನು ಕಂಡು ಹಿಡಿದು ಪ್ರತಿಯೊಬ್ಬ ನೌಕರರಿಗೂ ವರ್ಕ್ ಲೋಡ್ ಫಿಕ್ಸ್ ಮಾಡಬೇಕು. ವರ್ಕ್ ಲೋಡ್ ನೋಡಿಕೊಂಡು ಸಿಬ್ಬಂದಿಯನ್ನು ನೇಮಕ ಮಾಡಬೇಕೇ ಹೊರತು ಸಿಕ್ಕಾಪಟ್ಟೆ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳತಕ್ಕದ್ದು ಸರಿಯಲ್ಲ. ಈ ವಿಷಯವನ್ನೂ ಕೂಡ ಸರ್ಕಾರದವರು ಪರಿಶೀಲನೆ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಆಹಾರ ನಿಯಂತ್ರಣ ಇಲಾಖೆಗೆ ಸಂಬಂಧಪಟ್ಟಹಾಗೆ ಏನು ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿದ್ದಾರೆಯೋ ಅದನ್ನೂ ಸ್ವಲ್ಪ ವಿಚಾರಮಾಡಬೇಕು. ಆಹಾರ ಇಲಾಖೆಗೆ ಸಂಬಂಧಪಟ್ಟ ಹಾಗೆ ತಹಶೀಲ್ದಾರರನ್ನು ನೇಮಕ ಮಾಡಿಕೊಳ್ಳಬೇಕಾದದ್ದು ಅನಾವಶ್ಯಕ. ಈಗಿರತಕ್ಕ ತಹಶೀಲ್ದಾರರಿಗೇ ಒಂದು ಜೀಪು ಕೊಟ್ಟರೆ ಅವರೇ ಆಹಾರದ ಇಲಾಖೆಗೆ ಸಂಬಂಧಪಟ್ಟ ಕೆಲಸ ವನ್ನೂ ಮಾಡುತ್ತಾರೆ. ಈ ವ್ಯವಸಾಯ ಇಲಾಖೆಗೆ ಕೇಂದ್ರ ಸರ್ಕಾರದವರು 1963-64ನೇ ಸಾಲಿನಲ್ಲಿ 25 ಲಕ್ಷ 63 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದರು. ಅದರಲ್ಲಿ ಇವರು ಖರ್ಚು ಮಾಡಿರತಕ್ಕದ್ದು 2 ಲಕ್ಷ 63 ಸಾವಿರ ರೂಪಾಯಿಗಳು. ಆ ಮೇಲೆ ಡೆವಲಪ್‌ಮೆಂಟ್ ಕೆಲಸಕ್ಕಾಗಿ 10 ಲಕ್ಷ 51 ಸಾವಿರ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದರು. ಅದರಲ್ಲಿ ಇವರು ಖರ್ಚು ಮಾಡಿರತಕ್ಕದ್ದು 5 ಲಕ್ಷ 40 ಸಾವಿರ ರೂಪಾಯಿಗಳು. ಈ ವ್ಯವಸಾಯ ಇಲಾಖೆಗೆ ಕೇಂದ್ರ ಸರ್ಕಾರದವರು ಎಷ್ಟು ಹಣವನ್ನು ಕೊಟ್ಟಿದ್ದರೋ ಅಷ್ಟು ಹಣವನ್ನು ಇವರು ಖರ್ಚು ಮಾಡಿಲ್ಲ, ಅದು ಲ್ಯಾಪ್ಸ್ ಆಯಿತು. ಈ ರೀತಿ ಆಗುವುದಕ್ಕೆ ಕಾರಣರು ಯಾರು ? ಎಲ್ಲಿ ಲೋಪ ದೋಷಗಳು ಇವೆಯೆಂಬುದನ್ನು ವಿಚಾರ ಮಾಡಬೇಕು. ಈ ರೀತಿ ಕೇಂದ್ರ ಸರ್ಕಾರದವರು ನಮ್ಮ ಸರ್ಕಾರಕ್ಕೆ ವ್ಯವಸಾಯದ ಇಲಾಖೆಗೆ ಕೊಟ್ಟಂಥಹ ಹಣವನ್ನು ಪೂರ್ತಿಯಾಗಿ ಖರ್ಚು ಮಾಡದೇ ಇರತಕ್ಕದ್ದು ಮಹಾ ದೋಷ. ಇದಕ್ಕೆ ಯಾರು ಕಾರಣರಾಗಿದ್ದಾರೆಯೋ ಅಂಥಾ ಅಧಿಕಾರಿಗಳ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದು ಒಳ್ಳೆಯದು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri N. O. SAMAJI (Belgam II).—[Marathi]

4-00 P.M.

Mr. SPEAKER.—Before I call upon any member to speak, I must say that I am recieving a large number of requests.

Sri G. V. GOWDA (Palya).—Sir, our Whip will be sending the list tomorrow.

Mr. SPEAKER.—I have been telling from the beginning. Nobody seems to have taken it seriously. Either the Leader or the Whip or members must know that they must be present. Members simply criticise and go away. They must be here to receive replies. I find that a large number of members are desirous to participate in the Debate. Shall I drop the Question Hour tomorrow ?

Sri S. NIJALINGAPPA (Chief Minister).—I think we can give up Question Hour tomorrow.

Mr. SPEAKER.—We will drop the Question Hour. Tomorrow, we will meet at 12 noon and there would be no tea break also and no Question Hour. At 3-30 p.m., replies commence and at 6 o'clock I will apply guillotine if anything remains. There is no question of extending time with regard to this matter.

There was a request I believe to the Chief Minister. May I know whether he would like to say anything ?

Sri S. NIJALINGAPPA.—Sir, we may change the work of the House on Saturday so that we can take up this Question the resolution on Goa.

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧಿನಗರ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿಟ್ಟಿರುವ ಈ ಬೇಡಿಕೆಗಳನ್ನು ಅನುಮೋದಿಸುತ್ತಾ ಒಂದೆರಡು ವಿಷಯಗಳನ್ನು ತಮ್ಮ ಮೂಲಕ ಸರಕಾರದ ಮತ್ತು ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ಸರಕಾರದ ಆಡಳಿತ ಎಲ್ಲಾದರೂ ಹದಗೆಟ್ಟಿದೆಯೇ ? ಆರ್ಥಿಕ ಸ್ಥಿತಿ ಏರು ಪೇರಾಗಿದೆಯೇ ? ಎಂಬುದನ್ನು ಸಾಮಾನ್ಯ ಆಡಳಿತದ ಮೂಲಕ ಸುಲಭವಾಗಿ ಕಂಡು ಹಿಡಿಯಬಹುದು. ಸಾಮಾನ್ಯ ಆಡಳಿತವೇ ಸರಕಾರದ ನೈಜ ಆಡಳಿತಕ್ಕೆ ಕನ್ನಡಿ. ಸಾಮಾನ್ಯ ಆಡಳಿತ ಸರಿಯಾಗಿದೆಯೇ ಇಲ್ಲವೇ ಎಂಬುದನ್ನು ಕಂಡುಹಿಡಿಯುವುದು ಹೇಗೆಂದು ಒಬ್ಬ ರಾಜಕಾರಣಿ ಇನ್ನೊಬ್ಬ ರಾಜಕಾರಣಿಯನ್ನು ಕೇಳಿದರು. ಅದೇನೂ ಕಷ್ಟವಲ್ಲ, ಕೆಲವರು ಮಂತ್ರಿಗಳು ಅಸೆಂಬ್ಲಿಯಲ್ಲಿ ಮಾಡುವ ಭಾಷಣ, ಕೊಡುವ ಉತ್ತರ ಹಾಗೂ ಅವರ ಹಾವ ಭಾವಗಳಿಂದ ಸುಲಭವಾಗಿ ಕಂಡುಹಿಡಿಯಬಹುದೆಂದು ಇನ್ನೊಬ್ಬ ರಾಜಕಾರಣಿಗಳು ಹೇಳಿದರು. ಉದಾಹರಣೆಗೆ ಒಬ್ಬ ಮಂತ್ರಿಗಳು ಒಳ್ಳೆಯದು ಏನೂ ಹೇಳಲಿಕ್ಕೆ ಇಲ್ಲದೆ ಇದ್ದಾಗ ಹಲ್ಲಿ ತಿಂದವರಿಗೇನು ಹೇಳುವುದು, ಎಂದು ಪದೇ ಪದೇ ಭಾಷಣದಲ್ಲಿ ಉಪಯೋಗಿಸಿದರೆ ಯಾವುದಾದರೂ ಒಬ್ಬ ಅಧಿಕಾರಿ ಅನ್ಯಾಯ ಮಾಡುತ್ತಾರೆ, ಹೀಗೆ ಮಾಡಿದರು ಎಂದು ಕಂಡದ್ದನ್ನು ಹೇಳಿದರೆ ಅದನ್ನು ನಿಮ್ಮಂಥಹವರೇ ಮಾಡುವುದು ಎಂದು ಉತ್ತರ ಕೊಟ್ಟರೆ ಆದರ ಅರ್ಥ ಇಷ್ಟೇ. ಹಲ್ಲಿ ತಿಂದಂಥಾ ಆಡಳಿತವಿದೆ, ಸುಳ್ಳೇಕೆ ಹೇಳಲಿ, ಎಂದು ಅವರ ಅಭಿಪ್ರಾಯವೇನೋ ಎಂದು ಸದಸ್ಯರಾದ ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನಾನೂ ಸಹ ಸಂಕ್ಷಿಪ್ತವಾಗಿ ಸಾಮಾನ್ಯ ಆಡಳಿತದ ಬಗ್ಗೆ ನನ್ನ ಅಭಿಪ್ರಾಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಿಂದಕರು ಇರಬೇಕಯ್ಯ ಎಂದು ಪುರಂದರ ದಾಸರು ಹೇಳಿದ್ದಾರೆ. ಸ್ತುತಿ ನಿಂದೆಗಳು ಬಂದರೆ, ಕೋಪವ ತಾಳದೆ ಸಮಾಧಾನಿಯಾಗಿರಬೇಕೆಂದು ಬಸವಣ್ಣನವರು ಹೇಳಿದ್ದಾರೆ. ಬೈದವರೆನ್ನ ಬಂಧುಗಳೆನ್ನಿ, ನಿಂದಸಿದವರೆನ್ನ ತಾಯಿ ತಂದೆಗಳೆನ್ನಿ, ಹೊಗಳಿದವರೆನ್ನ ಜನ್ಮದಾ ವೈರಿಗಳೆನ್ನಿ ಎಂದು ಹೇಳಿರುವುದರಿಂದ ನಾನು ಮಾಡುವ ಟೀಕೆಗಳನ್ನು ಸಲಹೆಗಳನ್ನು ಸಮಾಧಾನದಿಂದ ಸ್ವಾಗತಿಸಬೇಕೆಂದು ವಿನಂತಿಸಿ ಒಂದೆರಡು ಟೀಕೆಗಳನ್ನು ಮತ್ತು ಸಲಹೆಗಳನ್ನು ಮಾಡುತ್ತೇನೆ.

ಸ್ವಾಮೀ, ಈ ಆಹಾರ ನೀತಿಯ ಬಗ್ಗೆ ಸರಕಾರ ಅನುಸರಿಸುತ್ತಿರುವ ನೀತಿ ಅಷ್ಟು ಸಮಂಜಸವಾಗಿಲ್ಲವೆಂದು ಅವರ ಹೇಳಿಕೆ-ಕೇಳಿಕೆಗಳಿಂದ ಗೊತ್ತಾಗುತ್ತದೆ. ನಾಡಿನ ವಿಚಾರವಂತ ಟೀಕಾಕಾರರು ಹೀಗೆ ಹೇಳಿದ್ದಾರೆ;

ನಿಮಗೆ ಬೇಕಾಗಿದ್ದರೆ ಅಕ್ಕಿ, ರವೆ, ಗೋದಿ ಮೈದಾ
ನಡೆದು ಬಿಡಿ, ಆಹಾರ ಮಂತ್ರಿಗಳ ಮನೆಗೆ ಸೀದಾ,
ಈ ರಾಜ್ಯದೊಳಗೆ ಸರಕಾರವೆ ಸೆಟ್ಟಿ,
ಹಿಡಿದುಬಿಡಿ, ಆಹಾರ ಮಂತ್ರಿಗಳ ಮೂಗು ಗಟ್ಟಿ. ಎಂದು.

ಒಬ್ಬ ಹಿರಿಯ ದೇಶಪ್ರೇಮಿಗಳು ನನ್ನನ್ನು ಇಷ್ಟೊಂದು ಸಿಬ್ಬಂದಿಗಳಿದ್ದು, ಸೆಕ್ರೆಟರಿಗಳಿದ್ದು, ಇಷ್ಟು ಜನ ಮಂತ್ರಿಗಳೂ ಇದ್ದು ಕೆಲಸ ನಿಧಾನವಾಗುತ್ತಿದೆ. ಯಾವ ಫೈಲೂ ಜಾಗ್ರತೆಯಾಗಿ ಮೂವ್ ಆಗುತ್ತಿಲ್ಲ. ಎಂದು ಹೇಳಿ ಅವರು ಒಂದು ಕವಿತೆಯಲ್ಲಿ ಹೀಗೆ ಹೇಳಿದ್ದಾರೆ :

‘ ನಮ್ಮ ನಾಡು ತುಂಬಾ ರಮಣೀಯದೇಶ
ಜೋಗ ಜಲಪಾತ ನೋಡಿದರೆ ಎಷ್ಟು ಸಂತೋಷ
ದೇಶದಲ್ಲಿ ದೃಶ್ಯಗಳು ನೂರೆಂಟು ಉಂಟು
ಮಂತ್ರಿಗಳಾ ಸಂಖ್ಯೆಯು ಮಿತಿ ಮೀರಿ ಉಂಟು.

ಸುಲಿಗೆಯು ಹೆಚ್ಚಿದರಾಷ್ಟ್ರಂ, ಹಲವರು ನೆರೆದುಂಡು ತಿಂದು ತೇಗುವ ರಾಷ್ಟ್ರಂ।
ಕಲಹಂ ಹೆಚ್ಚಿದ ರಾಷ್ಟ್ರಂ, ಬಲು ಬೇಗ ಕೆಟ್ಟುಪೋಪುದು ಸಹಜಂ ।।

ಇದರ ಬಗ್ಗೆ ಒಂದು ಉದಾಹರಣೆ ಮಾತ್ರ ಇಲ್ಲಿ ಹೇಳುತ್ತೇನೆ, ಅದು ಬಿ.ವಿ. ಕೃಷ್ಣಯ್ಯಂಗಾರ್ ರಸ್ತೆ ಕೆಲಸ ಮಾಡಲು ಅಲ್ಲಿ ಸುಮಾರು ನೂರೆಂಟು ಮನೆಗಳನ್ನು ಪಡೆದಿದ್ದವರು ಅವನ್ನು ಈಗ ಕಳೆದುಕೊಂಡಿದ್ದಾರೆ. ಅವರಿಗೆ ಸರಕಾರದವರು ಇನ್ನೂ ಮನೆಗಳನ್ನು ಕೊಟ್ಟಿಲ್ಲ. ಅದರಿಂದ ಅವರುಗಳು ಸುತ್ತ ಮುತ್ತಲಿನ ಮನೆಗಳ ಜಗಲಿಯ ಮೇಲೆ ಹಾಗೂ ರಸ್ತೆಯ ಮಗ್ಗುಲಲ್ಲಿಯೇ ಕಷ್ಟಪಡುತ್ತಿದ್ದಾರೆ ಹಾಗೂ ಕೆಲವರು ಅಂತರಪಿಶಾಚಿಯಂತೆ ಮೈಮೇಲೆ ಬಟ್ಟೆಇಲ್ಲದೆ ಕಷ್ಟ ಪಡುತ್ತಲಿದ್ದಾರೆ, ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳೂ ಸಹಾನುಭೂತಿ ತೋರಿಸಿ ಈ ಕೆಲಸ ಇನ್ನೂ ಮುಗಿದಿಲ್ಲ ಎಂದು ಇದರ ಬಗ್ಗೆ ಜಾಗ್ರತೆ ಕೆಲಸವಾಗಲಿ ಎಂದು ಸರಕಾರದಲ್ಲಿ ಹೇಳುತ್ತೇನೆ. ಇನ್ನೊಂದು ಉದಾಹರಣೆ ಹೇಳುತ್ತೇನೆ. ವಿಧಾನ ಸೌಧದಲ್ಲಿರುವ ಮೂರನೆ ಹಾಗೂ ನಾಲ್ಕನೇ ವರ್ಗದ ನೌಕರರುಗಳಿಗಾಗಿ ಎಂದು ಹೊಸಹಳ್ಳಿಯಲ್ಲಿ ಸರಕಾರದವರು ಮನೆಗಳನ್ನು ಕಟ್ಟಿಸಿ ಕೊಟ್ಟಿದ್ದಾರೆ, ಅಂತಹ ಮನೆಗಳಿಗೆ ಮೊದಲು ಸರಕಾರದವರು 3649 ರೂಪಾಯಿಗಳನ್ನು ಒಂದೊಂದು ಮನೆಗೆ ಕೊಡಬೇಕೆಂದು ಕೇಳುತ್ತಿದ್ದಾರೆ. ಆದರೆ ಈಚೆಗೆ ಒಂದು ಸರಕಾರದ ಆಜ್ಞೆಯನ್ನು ಹೊರಡಿಸಿ ಹೊಸ ಕಾನೂನು ಬಂದಿದೆ ಎಂದು ಅದಕ್ಕಾಗಿ ಈಗ 5,269 ರೂಪಾಯಿಗಳಷ್ಟನ್ನು ಕೊಡಬೇಕೆಂದು ಹೇಳುತ್ತಿದ್ದಾರೆ. ಮೊದಲೇ ಈ ನೌಕರರುಗಳಿಗೆ ಬರುತ್ತಿರುವ ಸಂಬಳಸಾರಿಗೆಗಳು ಬಹಳ ಕಡಿಮೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಂಬಂಧಪಟ್ಟ ಮಂತ್ರಿಗಳೂ ಬಡ ಜನರ ಕಷ್ಟವನ್ನು ಅರಿತಂತೆ ಕಾಣುವುದಿಲ್ಲ. ಇವರಲ್ಲಿ ಒಬ್ಬೊಬ್ಬರು ಮನೆಯ ಸಾಲಕ್ಕೆ ಕಟ್ಟಿ ಉಳಿಯುವುದು 5 ರೂಪಾಯಿಗಳಷ್ಟು, ಹೀಗಿರುವಾಗ ಮನೆಗಳಿಗಾಗಿಯೇ ಇಷ್ಟು ಹಣ ಕೊಡಬೇಕೆಂದರೆ ಇವರಿಗೆಲ್ಲ ಬಹಳ ಅನ್ಯಾಯವಾಗುತ್ತದೆ. ಹೀಗಾಗದಂತೆ ನೋಡಿಕೊಳ್ಳಬೇಕೆಂದು ವಿನಂತಿಸುತ್ತೇನೆ. ನಮ್ಮಲ್ಲಿ ಸರಕಾರದ ಆಡಳಿತಕ್ಕೆ ಒಳಪಟ್ಟಂತೆ ಕೆಲವು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಲಂಚ ವಂಚನೆಯು ಸರಸವಾಡುತಲಿ ಹಣವನ್ನು ನುಂಗುವ ಕ್ಷೇತ್ರಗಳು। ಆಯವ್ಯಯದಾ ಏರು ಪೇರುಗಳಿಗಾಶ್ರಯ ನೀಡುವ ಠಾಣಗಳು। ಅಪವ್ಯಯದಾ ಪತ್ರಗಳು ಸಹಕಾರಿ ಸಂಘಗಳು.

ಆನೆ ತಿಂದವರು ಉಳಿದುಕೊಳ್ಳುತ್ತಾರೆ, ಆಡು ತಿಂದವರನ್ನು ಹಿಡಿಯುತ್ತಾರೆ, ಇಬ್ಬರಿಗೂ ಶಿಕ್ಷೆಯಾಗಬೇಕು, ಅದು ಎಲ್ಲಾ ತಪಾಸಣೆ ಮುಗಿದರೂ ಯಾವ ಒಂದು ನಿರ್ಧಾರವನ್ನೂ ತೆಗೆದು ಕೊಳ್ಳದ ಎಷ್ಟೋ ಉದಾಹರಣೆಗಳೂ ಇವೆ. ಎಲ್ಲರಿಗೂ ಇದರ ಅನುಭವ ಸಾಕಷ್ಟು ಆಗಿದೆ, ಇನ್ನು ವಿಧಾನ ಸೌಧದ ಒಳಗಡೆಯಲ್ಲಿ ನಡೆಯುತ್ತಿರುವ ವ್ಯವಹಾರಗಳನ್ನು ನೋಡಿದರೆ ಯಾರಿಗೂ ಸಮಾಧಾನವಾಗುತ್ತಿಲ್ಲ. ಇನ್ನೂ ಸರಕಾರದ ಕೈಗಾರಿಕೆಯ ಕಾರ್ಖಾನೆಗಳಲ್ಲಿ ಕೆಲವು ಸಂಸ್ಥೆಗಳಲ್ಲಿ ಅಲ್ಲಿ ಕನ್ನಡಿಗರಿಗೆ ಯಾರಿಗೂ ಕೆಲಸಗಳೇ ಸಿಗುವುದಿಲ್ಲ. ಇದರಿಂದ ಜನಕ್ಕೆ ಬಹಳ ಕಷ್ಟವಾಗಿದೆ. ಇದರ ಬಗ್ಗೆ ಒಬ್ಬ ಮಹಿಳೆ ತಾನು ಅನುಭವಿಸುತ್ತಿರುವ ಕಷ್ಟವನ್ನು ಇನ್ನೊಬ್ಬ ಮಹಿಳೆಗೆ ಈ ರೀತಿ ಹೇಳಿದರಂತೆ ;

‘ ನಿನಗೇಕೆ ವ್ಯಥೆ, ಏನಾಯಿತವ್ವಾ
ನಾನಾದೆ, ದೇಶದಲ್ಲಿ ಅಡವಿಯಾ ದೆವ್ವ
ಬೆಂಗಳೂರಿನಲ್ಲಿ ಪರಕೀಯರೇ ಜಾಸ್ತಿ
ನೌಕರಿ ವ್ಯಾಪಾರ, ಕನ್ನಡಿಗರಿಗೆ ನಾಸ್ತಿ. ಎಂದು.

ಇದರಿಂದ ನನಗನಿಸುತ್ತಿದೆ, ಸರಕಾರದವರು ಕೆಲವು ಇಲಾಖೆಗಳು, ಕೆಲವು ಬೋರ್ಡ್‌ಗಳು ಹಾಗೂ ಕೆಲವು ಸಮಿತಿಗಳನ್ನು ಯಾವ ನಿರೀಕ್ಷಣೆಯಿಂದ ಮಾಡಿದ್ದಿರೋ ಅದರಿಂದ ನಿರೀಕ್ಷಿಸಿದ ಫಲ

(ಶ್ರೀಮತಿ ನಾಗರತ್ನಮ್ಮ ಹಿರೇಮಠ)

ದೊರೆತಿಲ್ಲ, ಜನ ಸಾಮಾನ್ಯರಿಗೆ ಅದರಿಂದ ಉಪಯೋಗವಾಗಿಲ್ಲ, ಅವುಗಳನ್ನು ರದ್ದು ಮಾಡಿದರೆ ಯೋಗ್ಯವಲ್ಲವೇ ಮತ್ತು ಹಾಗೆ ಮಾಡುವುದು ಸೂಕ್ತವೇನೋ, ಅದರಿಂದ ಉಳಿತಾಯವಾದ ಹಣವನ್ನು ಸಣ್ಣ ಸಂಬಳ ಬರುವ ನೌಕರರುಗಳಿಗಾಗಿ ಕೊಟ್ಟರೆ ಸಹಾಯವಾಗುವುದೇನೋ, ಇದನ್ನು ಸರಕಾರದವರು ಯೋಚನೆ ಮಾಡಬೇಕು ಎಂದು ಇಲ್ಲಿ ವಿನಂತಿ ಮಾಡಿಕೊಳ್ಳುತ್ತಲಿದ್ದೇನೆ.

ಇನ್ನು ಸರಕಾರದ ಯೋಜನೆ ಹಿರಿದು, ಖಜಾನೆ ಬರಿದು, ಕೋಟಿಗಟ್ಟಲೆ ಸಾಲ ಸರಕಾರಕ್ಕೆ. ಅಂಕೆ ಇಲ್ಲದ ಬಿಂಕದಮಂತ್ರಿಗಳಿಂದ ಕೊಂಕು ಆಡಳಿತ ಕಟ್ಟಿಟ್ಟದ್ದು. ಪ್ರಜಾ ರಾಜ್ಯದಲ್ಲಿ ಮಜಾಮಾಡಿದವನೇ ಜಾಣ. ವಿಧಾನಸೌಧಕ್ಕೆ ವ್ಯವಹಾರ ನಾಮ ನಿಧಾನಸೌಧ. ''ಲಂಚನಾದದ ಮುಂದೆ ಪಂಚಶೀಲ ಕಿನ್ನರಿ ಬಾರಿಸಿದಂತೆ.'' ಪುಢಾರಿಗಳನ್ನು ಹಿಡಿಯಲು ಮ್ಯಾಡನಿಂದಲೂ ಸಾಧ್ಯವಿಲ್ಲ. ಭ್ರಷ್ಟಾಚಾರ ಸೃಷ್ಟಿಕರ್ತನನ್ನೂ ಮೆಟ್ಟಿ ನಿಂತಿದೆಯಂತೆ.

Mr. SPEAKER.—Which is that demand ?

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಇದು ಸಾಮಾನ್ಯ ಆಡಳಿತ ಬಾಬಿಗೆ ಸಂಬಂಧಪಟ್ಟದ್ದು ಒಟ್ಟಿಗೆ ಎಲ್ಲಾ ಹೇಳುತ್ತಾ ಇದ್ದೇನೆ.

ಭ್ರಷ್ಟಾಚಾರ ಸೃಷ್ಟಿಕರ್ತನನ್ನೂ ಮೆಟ್ಟಿನಿಂತಿದೆಯಂತೆ. ಆಪತ್ತಿಗಾದವ ನೆಂಟ, ಕಳ್ಳ ಭಟ್ಟಿ ಸೆರೆಕೊಟ್ಟವ ಭಂಟ. ರೈತನ ಸಂಪಾದನೆ ದಂಡಕ್ಕೆ, ಕುಡುಕನ ಸಂಪಾದನೆ ಹೆಂಡಕ್ಕೆ.

Sri SANJEEVANTH AIKALA.—'Banta' is a community. So, that word should not be there, Sir.

ಅಧ್ಯಕ್ಷರು.—ಪುರಂದರ ದಾಸರು ಸಹ ಬಂಟ ಯಾರು ಎನ್ನುವುದನ್ನು ಹೇಳಿದ್ದಾರೆ ಅದು ಗೊತ್ತಿದೆಯಲ್ಲವೇ ?

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಮಂತ್ರಿಗಳು ಪ್ರವಾಸಕ್ಕೆ ಹೋಗಬೇಕು ಹಾಗು ಅಲ್ಲಲ್ಲಿ ಜನತೆಯ ಕಷ್ಟ ಸುಖ, ಕಷ್ಟ ನಷ್ಟ ಏನಿದೆ ಎನ್ನುವುದನ್ನು ತಿಳಿದು ಕೊಂಡು ಸರಿಯಾದ ರೀತಿ ಯಲ್ಲಿ ಕೆಲಸ ಮಾಡಬೇಕಾದುದು ಅಗತ್ಯ. ಹಾಗೆ ಟೂರ್ ಮೇಲೆ ಹೊಗುವುದು ಹೀಗೆ ವಾಪಸ್ಸು ಬರುವುದು ಸರಿಯಲ್ಲ. ಜನತೆಯು ಕಷ್ಟ ಏನು ಎಂಬುದನ್ನು ವಿಚಾರಿಸಿ ತಿಳಿದುಕೊಳ್ಳಬೇಕು. ಮಂತ್ರಿಗಳು ಒಂದು ತಿಂಗಳಿನಲ್ಲಿ 30 ದಿವಸ ಪ್ರವಾಸಮಾಡಿದರೂ ಕೆಲಸ ಸರಿಯಾಗಿ ಆಗುವುದಿಲ್ಲ. ನನ್ನ ಸ್ನೇಹಿತರು ಈ ವಿಚಾರದ ಕಾಗದಲ್ಲಿ ಬರೆದಿದ್ದಾರೆ. ''ಒಮ್ಮೆ ವಿಧಾನಸೌಧದಲ್ಲಿ ಎಲ್ಲ ಮಂತ್ರಿ ಗಳೂ ಕೆಲಸದ ಮೇಲೆ ಹಾಜರ ಇದ್ದರೆಂಬ ಸುದ್ದಿ ಅಮೇರಿಕಾದವರನ್ನೂ ಆಶ್ಚರ್ಯಗೊಳಿಸಿ ದೆಯಂತೆ'' ಆದುದರಿಂದ ಮಂತ್ರಿಗಳು ಪ್ರವಾಸಕ್ಕೆ ಹೋದರೂ ಕೂಡ ಜನತೆಗೆ ಅನೂಕೂಲ ವಾಗುವಂತೆ ಅವರ ಕಷ್ಟ ಸಾರ್ವಜನಿಕರಿಂದ ಕೇಳಿಕೊಂಡು ಅವರಿಗೆ ಅನೂಕೂಲ ಮಾಡಿಕೊಡ ಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ರಾಷ್ಟ್ರೀಯ ಚಾಟೂಕ್ತಿ ಮತ್ತು ಗಾದೆಗಳನ್ನು ತಮ್ಮ ಗಮನಕ್ಕೆ ತರುವ ಕಾರಣವಿಷ್ಟೆ: ಸಾಮಾನ್ಯ ಆಡಳಿತ ಎಲ್ಲೆಲ್ಲಿ ಹೇಗೆ ಹದಗೆಟ್ಟಿದೆ ಎಂಬುದನ್ನು ಇವು ತೋರಿಸುತ್ತವೆ. ಸರಕಾರ ಇವುಗಳಕಡೆಗೆ ಗಮನಕೊಟ್ಟು ಸರಿಪಡಿಸಿಕೊಳ್ಳಲೆಂದು ಹೇಳುತ್ತಿದ್ದೇನೆ. ಈ ರೀತಿ ಮಾಡಬೇಕೆಂದು ಅವರನ್ನು ನಾನು ಬೇಡಿ ಕೊಳ್ಳುತ್ತೇನೆ.

ಕೊನೆಯದಾಗಿ ಲಂಚ ಭ್ರಷ್ಟಾಚಾರಗಳ ಪೋಷಕರಾದ ಅಭಿನವ ಠಕ್ಕರ ವಿಚಾರ ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ಹಿಂದೆ ಲಾರ್ಡ್ ವಿಲಿಯಂ ಬೆಂಟಿಂಕನ ಕಾಲದಲ್ಲಿ ಈ ಠಕ್ಕರಿಂದಾದ ಅನಾಹುತ ಏನೆಂಬುದು ಚರಿತ್ರೆ ಓದಿದ ತಮ್ಮೆಲ್ಲರಿಗೂ ಗೊತ್ತಿರುವ ವಿಚಾರ. ಅದೇ ನಮೂನೆ ಅಭಿನವ ಠಕ್ಕರು ಇಂದು ರಾಷ್ಟ್ರದಲ್ಲಿ ಹೆಚ್ಚಿದ್ದಾರೆ. ಇವರು ಅಧಿಕಾರಿ ವರ್ಗದಲ್ಲಿದ್ದಾರೆ. ರಾಜ ಕೀಯ ಸ್ಥಾನಮಾನ ವರ್ಗದಲ್ಲಿಯೂ ಇದ್ದಾರೆ. ವ್ಯವಹಾರ ವ್ಯಾಪಾರ ವರ್ಗದಲ್ಲಿಯೂ ಇದ್ದಾರೆ. ಅಧಿಕಾರ ವರ್ಗದಲ್ಲಿರುವ ಕೆಲವು ಠಕ್ಕರು, ರಾಜಕೀಯ ವರ್ಗದಲ್ಲಿರುವ ಕೆಲವು ಠಕ್ಕರು ಒಂದು ಲಕ್ಷದಿಂದ ಹಿಡಿದು ಕಾಲು ಕೋಟಿ ಅರ್ಧ ಕೋಟಿಗಳಷ್ಟು ಆಸ್ತಿಪಾಸ್ತಿಗಳನ್ನು ಲಂಚ ಭ್ರಷ್ಟಾಚಾರ ಗಳಿಂದ ಗಳಿಸಿದ್ದಾರೆ. ಸರಕಾರ ಮತ್ತು ಸಾರ್ವಜನಿಕರಿಗೆ ಮಂಕುಬೂದಿ ಎರಚಿ ದೊಡ್ಡಸ್ಥಿ ಕೆಯ ಸ್ಥಾನಮಾನ, ಸಿರಿ ಸಂಪತ್ತುಗಳಲ್ಲಿ ಓಲಾಡುತ್ತಿದ್ದಾರೆ. ಶತಾಯ ಗತಾಯ ಇವರನ್ನು ಮಟ್ಟ ಹಾಕಬೇಕು. ಇಲ್ಲವೇ ಕ್ರಿಸ್ತ ಶಕ 193 ರಲ್ಲಿ ರೋಂ ಚಕ್ರಾಧಿಪತ್ಯದ ಶಾಸಕರು, ರೋಂ ಸಾಮ್ರಾಜ್ಯವನ್ನು ಇಂಥಹ ಠಕ್ಕ ಮುಖಂಡನಿಗೆ ಎರಡು ಕೋಟಿ ರೂಪಾಯಿಗೆ ಹರಾಜು ಹಾಕಿದ

ರಂತೆ. ರೊಚ್ಚಿಗೆದ್ದ ಜನತೆ ಆ ಠಕ್ಕ ಮುಖಂಡನನ್ನು ನಿರ್ನಾಮ ಮಾಡಿದರು. ಅದರಂತೆ ವರ್ಷಕ್ಕೆ ಇಂತಿಷ್ಟು ಕೋಟಿ ರೂಪಾಯಿಗಳೆಂದು ನಮ್ಮ ರಾಜ್ಯವನ್ನೂ ಈ ಠಕ್ಕರಿಗೆ ಹರಾಜು ಹಾಕಿದರೆ ಜನತೆ ರೊಚ್ಚಿಗೆದ್ದು ಇವರನ್ನು ಮಟ್ಟ ಹಾಕಬಹುದೇನೋ ಎಂದು ಭಾವಿಸಬೇಕಾಗಿದೆ. ಈ ರೀತಿ ಹೇಳದೆ ನನಗೆ ವಿಧಿ ಇಲ್ಲದಂತಾಗಿದೆ. ಇದರ ಹಾವಳಿ ನೋಡಿ, ಕೇಳಿ ಮನನೊಂದು ಹೇಳುತ್ತಿದ್ದೇನೆ. ಈ ಬಗ್ಗೆ ಸರ್ಕಾರ ಸರ್ವಾಧಿಕಾರಿಗಳಾದರೂ ಚಿಂತೆಯಿಲ್ಲ. ಈ ಸ್ವರಾಜ್ಯ ಠಕ್ಕರನ್ನು ಮಟ್ಟ ಹಾಕುವ ಧೃಢ ಪ್ರತಿಜ್ಞೆ ಮಾಡಿರೆಂದು ವಿನಂತಿಸುತ್ತೇನೆ.

ಇನು ಸೀನಿಯಾರಿಟಿ ಲಿಸ್ಟ್ ಬಗ್ಗೆ ಹೇಳುತ್ತೇನೆ. ಸೀನಿಯಾರಿಟಿ ಲಿಸ್ಟ್ ತಯಾರ್ಮಾಡುವುದು ವಿಳಂಬವಾಗಿದೆ. ಇದರಿಂದ ಸರಕಾರಿ ನೌಕರರಿಗೆ ಅನಾನುಕೂಲವಾಗಿ ಅಸಮಾಧಾನ ಉಂಟು ಮಾಡಿದೆ. ಈಗಾಗಲೇ ಎಷ್ಟೋ ನೌಕರರು ಇಹಲೋಕ ತ್ಯಜಿಸಿದ್ದಾರೆ. ಕೆಲವರು ಇಷ್ಟರಲ್ಲಿಯೇ ಹೋಗುತ್ತಾ ಇದ್ದಾರೆ. ಕೆಲವರು ನಿವೃತ್ತಿಯಾಗುತ್ತಾ ಇದ್ದಾರೆ. ಆದುದರಿಂದ ಆದಷ್ಟು ಜಾಗ್ರತೆ ಲಿಸ್ಟ್ ವಿಮರ್ಶೆ ಮಾಡಬೇಕು ಎಂದು ತಿಳಿಸುತ್ತೇನೆ. ಕಾಲ ವಿಳಂಬವಾಗುವುದರಿಂದ ಏನಾಗಿದೆ ಎಂದರೆ ಸರಕಾರಿ ನೌಕರರಿಗೆ ತಮ್ಮ ತಮ್ಮ ಸ್ಥಾನ ಮಾನಗಳ ಬಗ್ಗೆ ಅನುಮಾನ ಬಂದು ನಿಮ್ಮನ್ನು ಮೇಲೆ ಹಾಕಿದ್ದಾರೆ ನಮ್ಮನ್ನು ಕೆಳಗೆ ಸೀನಿಯಾರಿಟಿ ಲಿಸ್ಟ್‌ನಲ್ಲಿ ಹಾಕಿದ್ದಾರೆ ಎಂದು ಹೇಳುತ್ತಾ ಕೆಲಸದಲ್ಲಿ ಅವರಿಗೆ ಮನಸ್ಸು ಇಲ್ಲ. ಆದುದರಿಂದ ಸರಕಾರದವರು ಆದಷ್ಟು ಜಾಗ್ರತೆ ಇದನ್ನು ಕೊನೆಯದಾಗಿ ನಿರ್ಣಯ ಮಾಡಬೇಕೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳುತ್ತೇನೆ.

ಸ್ವಾಮಿ, ಕೊನೇದಾಗಿ ನಾನು ನಮ್ಮ ಸರಕಾರಕ್ಕೆ ಸೂಚಿಸುವುದು ಇಷ್ಟೇ. ಒಬ್ಬರು ಈ ರೀತಿ ಹೇಳಿದ್ದಾರೆ.

A polilician thinks that the State belongs to him. But a Statesman thinks that he belongs to the State.

ಅಂದರೆ ರಾಜಕಾರಣಿ ರಾಜ್ಯ ತನಗೆ ಸೇರಿದ್ದೆಂದು ಯೋಚಿಸುತ್ತಾನೆ. ಆದರೆ ಮುತ್ಸದ್ದಿ ತಾನು ರಾಜ್ಯಕ್ಕೆ ಸೇರಿದವನೆಂದು ತಿಳಿಯುತ್ತಾನೆ, ಹಾಗೂ ಆ ಭಾವನೆಯಿಂದ ಕೆಲಸ ಮಾಡುತ್ತಾನೆ. ತಾವಾದರೂ ಈ ರೀತಿ ಕೆಲಸ ಮಾಡಬೇಕೆಂದು ಹಾರೈಸುತ್ತೇನೆ.

ಅಸತೋಮ ಸದ್‌ಗಮಯ
ತಮಸೋಮ ಜ್ಯೋತಿರ್ಗಮಯ
ಮೃತ್ಯೋರ್ಮ ಅಮೃತತ್ವಮಯ

ಅಸತ್ಯದಿಂದ ಸತ್ಯದೆಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ, ಮೃತ್ಯುವಿನಿಂದ ಅಮರತ್ವದೆಡೆಗೆ ಸಾಗೋಣ.

ಕೊನೆಯ ವಾಕ್ಯವನ್ನು ಹೇಳುವ ಅಗತ್ಯ ಏನೂ ಇದ್ದದಂತೆ ಕಾಣಲಿಲ್ಲ. ಉಳಿದಿರುವ ಎರಡು ವರ್ಷ ನಮ್ಮ ಮಂತ್ರಿಮಂಡಳಕ್ಕೆ ಯಾವ ಅಪಾಯವೂ ಬರದಿರಲಿ ಎಂದು ಹಾರೈಸಲಿಕ್ಕಾಗಿ ಹೇಳಿದ್ದೇನೆ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತು ಮುಗಿಸುವ ಮೊದಲು ಈ ಬೇಡಿಕೆಗಳನ್ನು ಅನುಮೋದಿಸುತ್ತೇನೆ.

ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಸಭಾಪತಿಗಳವರೇ, ಇವತ್ತು ನಮ್ಮ ಮುಂದೆ ಇರತಕ್ಕಂಥ ಸುಮಾರು 72 ಕೋಟಿ ರೂಪಾಯಿ ಬೇಡಿಕೆಗಳಲ್ಲಿ ಇರತಕ್ಕ ಕೆಲವು ನ್ಯೂನ್ಯಾತಿರಿಕ್ತಗಳನ್ನು ತಮ್ಮ ಮುಂದೆ ಇಡಲು ಬಯಸುತ್ತೇನೆ. ಸ್ವಾಮಿ, ಈ ಬೇಡಿಕೆಗಳಲ್ಲಿ ಸುಮಾರು 68 ಕೋಟಿ ರೂಪಾಯಿ ಪಿ. ಡಬ್ಲ್ಯೂ. ಡಿ. ಬೇಡಿಕೆ ಏನು ಇದೆಯೋ ಅದರಲ್ಲಿ ಸರಕಾರ ಅನೇಕ ರೀತಿಯ ಯೋಜನೆಗಳನ್ನು ಮಾಡಲು ಅವಕಾಶ ಮಾಡಿಕೊಟ್ಟಿದೆ. ಇಂದು ನಮ್ಮ ಸ್ಥಿತಿ ಸರಿಯಾದ ರೀತಿಯಲ್ಲಿ ಮುಂದುವರಿಯಬೇಕಾದರೆ ಈ ಲೋಕೋಪಯೋಗಿ ಇಲಾಖೆ ಬಹುಮಟ್ಟಿಗೆ ಮುಖ್ಯ ಪಾತ್ರ ವಹಿಸಬೇಕಾಗಿದೆ. ಇಂಥ ಸಂದರ್ಭದಲ್ಲಿ ಈ ಇಲಾಖೆಯ ಕೆಲಸ ಕಾರ್ಯಗಳು ನಿರೀಕ್ಷಿಸಿದಷ್ಟು ತೀವ್ರಗತಿಯಲ್ಲಿ ಮುಂದೆ ಹೋಗುತ್ತಿಲ್ಲ. ಬಹಳ ಹಿಂದೆ ಬಿದ್ದಿದೆ. ಇದರ ಮುನ್ನಡೆ ತೀವ್ರವಾಗಬೇಕೆಂದು ಹೇಳಲು ಇಷ್ಟಪಡುತ್ತೇನೆ. ಸ್ವಾಮೀ, ಮೈನರ್ ಇರಿಗೇಷನ್ ಅಂದರೆ ಸಣ್ಣ ನೀರಾವರಿ ಯೋಜನೆ ಏನು ಇದೆಯೋ ಅದು ನಮ್ಮ ದೇಶದಲ್ಲಿ ಬಹಳ ಹೆಚ್ಚಿನ ತೀವ್ರ ಗತಿಯಿಂದ ಮುಂದೆ ಹೋಗಬೇಕಾಗಿದೆ. ಈ ಸಮಯದಲ್ಲಿ ಈ ಕಾರ್ಯ ನಡೆಯುತ್ತಿರುವ ರೀತಿ ನೋಡಿದರೆ ಇದರಲ್ಲಿ ಸರಕಾರಕ್ಕೆ ಅನೇಕ ಅಡ್ಡಿ ಆತಂಕಗಳು ಬಂದಿವೆ ಎಂದು ಕಂಡು ಬರುತ್ತದೆ. ಇದಕ್ಕೆ ಕಾರಣ ಗೊತ್ತಾ

(ಶ್ರೀ ಬಿ. ಬೈರಪ್ಪಾಜಿ)

ಗಿಲ್ಲ, ಕೇಂದ್ರದ ಪ್ಲಾನಿಂಗ್ ಕಮಿಷನ್ ಅವರು ಏನೇನೋ ಪ್ಲಾನುಗಳನ್ನು ಮಾಡಿದ್ದಾರೆ. ಈ ಸಭೆಯಲ್ಲಿ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಕೆಲಸ ಕಾರ್ಯಗಳ ವಿವರ ತಿಳಿಸಬೇಕು. ಯಾಕೆಂದರೆ ಅನೇಕ ಕೆಲಸಗಳು ತಿರುಪತಿ ಕ್ಷೌರ ಮಾಡಿದ ಹಾಗೆ ಅಲ್ಲಿ ಅಷ್ಟು, ಇಲ್ಲಿ ಇಷ್ಟು ಕೆಲಸ ಮಾಡುವುದು ಸರಿಯಲ್ಲ. ಸರಿಯಾದ ರೀತಿಯಲ್ಲಿ ನಡೆಯಬೇಕು. ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದೇ ರೀತಿ ನಾನು ಸ್ವಲ್ಪ ಮುಂದೆ ಹೋಗಿ ಹೇಳುವುದೆಂದರೆ ಸಣ್ಣ ನೀರಾವರಿ ಯೋಜನೆ ಕೆಲಸಕಾರ್ಯಗಳು ಕುರುಡ ಕೋಲು ಆಡಿಸಿದ ರೀತಿಯಲ್ಲಿ ಅಲ್ಲಷ್ಟು ಇಲ್ಲಷ್ಟು ನಡೆದಿದೆ. ಸರಿಯಾದ ರೀತಿಯಲ್ಲಿ ನಿರೀಕ್ಷಿಸಿದ ರೀತಿಯಲ್ಲಿ ಅಂಥ ಮಟ್ಟದಲ್ಲಿ ಒಂದೂ ಕೆಲಸ ನಡೆಯುತ್ತಾ ಇಲ್ಲ. ಅಲ್ಲದೆ ಅನೇಕ ಲೋಪದೋಷಗಳು ಈ ಇಲಾಖೆ ಹೊಂದಿದೆ ಎಂದೂ ಹೇಳಲು ಬಯಸುತ್ತೇನೆ. ಈ ರೀತಿ ಕೆಲಸ ಕಾರ್ಯಗಳು ನಡಯುತ್ತಾ ಇರುವುದಕ್ಕೆ ಮುಖ್ಯಕಾರಣ ಅಂದರೆ ದೊಡ್ಡದೊಡ್ಡ ಕಂಟ್ರಾಕ್ಟರರು ಸುಮಾರು ಹತ್ತು ವರ್ಷ ಅಗುವಷ್ಟು ಕೆಲಸಗಳನ್ನು ತಮ್ಮದನ್ನಾಗಿ ಮಾಡಿಕೊಂಡು ಕೆಲಸ ಕಾರ್ಯಗಳು ನಿಧಾನವಾಗುವುದಕ್ಕೆ ಕಾರಣರಾಗಿದ್ದಾರೆ.

4-30 P. M.

ಈ ಬಗ್ಗೆ ಸರ್ಕಾರದವರೇನು ಒಂದು ಕಂಡೀಷನ್ನನ್ನು ಹಾಕಿ ಆ ಕೆಲಸವನ್ನು ಆ ಕಂಟ್ರಾಕ್ಟರಿಗೆ ಕೊಟ್ಟಿದ್ದರೋ ಆ ಕಂಡೀಷನ್‌ಗಳನ್ನು ಆತನ ಟೆಂಡರಿನಲ್ಲಿ ಹೇಳಿರತಕ್ಕ ಪ್ರಕಾರ ಆ ಕೆಲಸವನ್ನು ಆತ ಮಾಡಿದಿರತಕ್ಕ ಬಗ್ಗ ಇಲಾಖೆಯವರು ಸರಿಯಾದ ಶಿಸ್ತಿನ ಕ್ರಮವನ್ನು ಕೈಗೊಳ್ಳದಿರುವುದರಿಂದ ಈ ರೀತಿ ಕೆಲಸಗಳು ಸರಿಯಾಗಿ ನಡೆಯದೇ ಇರುವುದಕ್ಕೆ ಸರ್ಕಾರದವರೇ ಕಾರಣರಾಗಿದ್ದಾರೆಂದು ನಾನು ಹೇಳಬೇಕಾಗಿದೆ. ಕಂಟ್ರಾಕ್ಟುದಾರರು ತಮ್ಮ ಒಂದು ಟೆಂಡರೇನಿದೆ ಅಥವಾ ಏನು ಒಂದು ಕೊಟೇಷನ್ ಕೊಟ್ಟಿರುತ್ತಾರೋ ಅದರಲ್ಲ ಇಂತಿಂಥ ಕೆಲಸವನ್ನು ಇಂತಿಷ್ಟೇ ದಿನಗಳಲ್ಲಿ ಮಾಡಿ ಮುಗಿಸಬೇಕೆಂಬ ಕಂಡೀಷನ್ ಇರುತ್ತೆ. ಅದರ ಪ್ರಕಾರ ಕೆಲಸಗಳಾಗದಿದ್ದರೆ ಅಂಥ ಕಂಟ್ರಾಕ್ಟರಿಗೆ ಇಲಾಖೆಯವರು ಫೈನ್ ಹಾಕುವುದಕ್ಕೆ ಅಥವಾ ಅವರ ಲೈಸೆನ್ಸನ್ನೇ ರದ್ದು ಮಾಡುವುದಕ್ಕೂ ಸಹಾ ಅವಕಾಶವಿದೆ. ಆದರೆ ಅದಕ್ಕೆಲ್ಲಾ ಈ ದಿವಸ ಯಾವುದೋ ಒಂದು ದಾಕ್ಷಿಣ್ಯಕ್ಕೆ ಇಲ್ಲವೇ ಇನ್ನಾವುದೋ ಒಂದು ಕೆಟ್ಟ ಪದ್ಧತಿಗೆ ಒಳಗಾಗಿರುವುದರಿಂದ ಸರಿಯಾದ ಕಾರ್ಯಕ್ರಮಗಳನ್ನು ಇಲಾಖೆಯವರು ಕೈಗೊಳ್ಳುತ್ತಿಲ್ಲ. ಹೀಗೆಲ್ಲಾ ಇರುವುದರಿಂದ ಈ ದಿವಸ ಕೆಲಸಗಳು ಸಕಾಲಕ್ಕೆ ಆಗದೆ ನಿಧಾನವಾಗಿ ಆಗುತ್ತಿವೆ. ಇದೇ ವಿಚಾರವನ್ನು ಆ ಪ್ಲಾನಿಂಗ್ ಕಮಿಷನ್ನಿನವರೂ ಕೂಡ ಹೇಳಿರುತ್ತಾರೆ. ನಮ್ಮ ರಾಜ್ಯ ಸರ್ಕಾರದವರು ಕೈಗೊಂಡಿದ್ದ 5,400 ಸಣ್ಣ ನೀರಾವರಿ ಕಾಂಗಾರಿಗಳನ್ನು ಅನೇಕ ವರ್ಷಗಳಾದರೂ ಇವರು ಮುಗಿಸದಿರುವುದರಿಂದ ಇದು ನಮ್ಮ ರಾಜ್ಯ ಸರ್ಕಾರದವರ ಅದಕ್ಷತೆಯನ್ನು ಸೂಚಿಸುತ್ತಿದೆ, ಎಂಬುದಾಗಿ ಅವರು ಪತ್ರವನ್ನೇ ಬರೆದಿದ್ದಾರೆ. ಈ ಒಂದು ಕಾರಣದಿಂದ ಅವರು ಮೈಸೂರು ರಾಜ್ಯಕ್ಕೆ ಕೊಡಬೇಕಾಗಿದ್ದ ಹಣವನ್ನೂ ಸಹಾ ಕೊಡದೆ ತಡೆಹಿಡಿದಿದ್ದಾರೆ. ಮೇಲಾಗಿ ಈಗ ಪ್ರಾರಂಭಿಸಿರತಕ್ಕ ಕೆಲಸಗಳು ಪೂರ್ಣವಾಗುವತನಕ ಇವರು ಬೇರೆ ಯಾವ ಹೊಸ ಕೆಲಸಗಳನ್ನು ಕೈಗೊಳ್ಳಬಾರದಂತೆ ಸಹಾ ಅವರು ತಿಳುವಳಿಕೆಯನ್ನು ಕೊಟ್ಟಿದ್ದಾರೆ. ಒಂದು ಆದೇಶವನ್ನು ಕಳುಹಿಸಿದ್ದಾರೆಂದು ನಾವು ತಿಳಿಯುತ್ತಿದ್ದೇವೆ. ಈ ಒಂದು ಆದೇಶವನ್ನು ಇಲ್ಲಿ ಇವರು ಆಧಾರವಾಗಿಟ್ಟುಕೊಂಡು ಇಲಾಖಾ ಅಧಿಕಾರಿಗಳಿಗೆ ಯಾವ ಹೊಸ ನೀರಾವರಿ ಯೋಜನೆಗಳನ್ನೂ ಕೈಗೊಳ್ಳಕೂಡದೆಂದು ತಿಳಿಸಿರುತ್ತಾರೆ. ಹೀಗೆ ಯಾರೋ ಒಬ್ಬ ಕಂಟ್ರಾಕ್ಟರ ದೋಷದಿಂದ ಇಲ್ಲವೇ ಸರ್ಕಾರದವರ ಅಜಾಗರೂಕತೆಗಾಗಿ ದೇಶಾಭಿವೃದ್ಧಿಯ ಕೆಲಸಕಾರ್ಯಗಳನ್ನು ಕುಂಠಿತಗೊಳಿಸುವುದು ಸರಿಯಾದ ನೀತಿಯಲ್ಲ. ಇದನ್ನು ಮಾನ್ಯ ಲೋಕೋಪಯೋಗಿ ಶಾಖೆಯ ಸಚಿವರು ಇನ್ನೊಮ್ಮೆ ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರದವರು ಯಾವತ್ತೂ ಯಾವ ಕೆಲಸವನ್ನು ನಿಲ್ಲಿಸಿದರೂ ಚಿಂತೆಯಿಲ್ಲ, ಈ ಮೈನರ್ ಇರಿಗೇಷನ್ ಕಾಮಗಾರಿಗಳನ್ನು ಮಾತ್ರ ನಿಲ್ಲಿಸಬಾರದೆಂದು ನಾನು ಕೇಳಿಕೊಳ್ಳುತ್ತೇನೆ. ಇದನ್ನು ನಿರಂತರವೂ ನಡೆಸುತ್ತಿದ್ದರೆ ಇದರಿಂದ ಅನೇಕ ಸಮಸ್ಯೆಗಳು ಬಗೆಹರಿಯುತ್ತವೆ. ಆದುದರಿಂದ ಸರ್ಕಾರದವರು ಹೊರಡಿಸಿದ್ದ ಆಜ್ಞೆಯನ್ನು ಕೂಡಲೇ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾನು ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ : ನಮ್ಮ ಜಿಲ್ಲೆಗೂ ಮತ್ತು ಹಾಸನ ಜಿಲ್ಲೆಗೂ ಬೃಹತ್ಪ್ರಮಾಣದಲ್ಲಿ ಅನುಕೂಲವಾಗುತ್ತಿದ್ದ ಆ ಹೇಮಾವತಿ ಯೋಜನೆಯನ್ನು ಸರ್ಕಾರದವರು ಆದಷ್ಟು ಬೇಗ ಕಾರ್ಯಗತ ಮಾಡುತ್ತೇವೆಂದು ಹೇಳಿಕೊಂಡು ಬರುತ್ತಲೇ ಇದ್ದಾರೆ. ಅಂದಾಜನ್ನೂ ಸಹಾ ಮಂಜೂರು ಮಾಡಿ ಕೊಂಚ ಕೆಲಸವನ್ನೂ ಸಹಾ ಪ್ರಾರಂಭಮಾಡಿದ್ದರು. ಈ ಒಂದು ಪ್ರಾಜೆಕ್ಟನ್ನು ನಿರ್ಮಾಣ

ಮಾಡಿದರೆ ಇದರಿಂದ ನಮ್ಮ ತುಮಕೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಸುಮಾರು ಒಂದು ಲಕ್ಷ ಎಕರೆ ಸಾಗುವಳಿಗೆ ಬರುತ್ತದೆ. ಇದಕ್ಕಾಗಿರತಕ್ಕ ವೆಚ್ಚದ ಅಂದಾಜು 13 ಕೋಟಿ ರೂಪಾಯಿಗಳು. ಆದರೆ ಯಾವುದೋ ಒಂದು ರಾಜಕೀಯದ ಕೈವಾಡಕ್ಕೆ ಸರ್ಕಾರದವರು ಒಳಗಾಗಿ ಇದರ ಅಂದಾಜನ್ನು ಮಂಜೂರುಮಾಡದೆ ಹಾಗೇ ತಡೆಹಿಡಿದಿದ್ದಾರೆ. ಈ ಕೆಲಸವನ್ನು ನಿಲ್ಲಿಸಿದ್ದಾರೆ. ಇದನ್ನು ಏತಕ್ಕೆ ಮುಂದುವರಿಸುತ್ತಿಲ್ಲಾ ಎಂಬುದೇ ನನಗೆ ತಿಳಿಯುತ್ತಿಲ್ಲ. ಅಂತೂ ಈ ದಿನ ತುಮಕೂರು ಮತ್ತು ಹಾಸನ ಜಿಲ್ಲೆಗಳಲ್ಲಿ ನೀರಾವರಿಯಾಗತಕ್ಕ ಒಂದು ಲಕ್ಷ ಎಕರೆ ಜಮೀನು ಹಾಗೇ ಉಳಿದಿದೆ. ದೇಶದಲ್ಲಿ ಇಂದು ಉದ್ಭವವಾಗಿರತಕ್ಕ ಆಹಾರದ ಕೊರತೆಯನ್ನು ನೀಗತಕ್ಕ ದೃಷ್ಟಿಯಿಂದಲಾದರೂ ಈ ಯೋಜನೆಯನ್ನು ಸರ್ಕಾರದವರು ತಮ್ಮ ರಾಜಕೀಯವನ್ನು ಬದಿಗೊತ್ತಿ ಕೂಡಲೇ ಕೈಗೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇದನ್ನು ನಾನು ಈ ದಿವಸ ನಮ್ಮ ತುಮಕೂರು ಮತ್ತು ಹಾಸನ ಜಿಲ್ಲೆಗಳ ಜನರ ಪರವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಈ ದಿವಸ ಈ ಯೋಜನೆಯನ್ನು ಕಾರ್ಯಗತಮಾಡುವುದಕ್ಕೆ ಸರ್ಕಾರದವರಲ್ಲಿ ದುಡ್ಡಿಲ್ಲವೆನ್ನುವುದಾದರೆ—ಈ ಯೋಜನೆಯಿಂದ ಯಾವ ಯಾವ ತಾಲ್ಲೂಕಿನ ರೈತರುಗಳು ಅನುಕೂಲವನ್ನು ಪಡೆಯುತ್ತಾರೋ ಅವರೆಲ್ಲರೂ ಅವರವರ ಭಾಗದ ಕಾಂಟ್ರಿಬೂಷನ್ ಮೊಬಲಗನ್ನು ಅಡ್ವಾನ್ಸಾಗಿ ಕೊಡುವುದಕ್ಕೆ ತಯಾರಾಗಿದ್ದಾರೆ. ಈ ಮೊಬಲಗನ್ನು ಮುಂಗಡವಾಗಿ ಕೊಡುವುದಕ್ಕೆ ನಾವೆಲ್ಲರೂ ಸಿದ್ಧರಾಗಿದ್ದೇವೆ. ಈ ದಿವಸ ಇಂಥ ಒಂದು ಆಶ್ವಾಸನೆಯನ್ನು ನಾನು ಸರ್ಕಾರದವರಿಗೆ ಕೊಡಬಯಸುತ್ತೇನೆ. ನಾವೇ ಮುಂದೆ ನಿಂತು ಈ ಮುಂಗಡ ಕಾಂಟ್ರಿಬ್ಯೂಷನ್ನನ್ನು ವಸೂಲ್ಮಾಡಿ ಕೊಡುತ್ತೇವೆ. ಆದ್ದರಿಂದ ಇದನ್ನು ಆದಷ್ಟು ಬೇಗ ಕಾರ್ಯರೂಪಕ್ಕೆ ತರಬೇಕೆಂದು ಸರ್ಕಾರದವರಲ್ಲಿ ನಾನು ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಇನ್ನು ರಸ್ತೆಗಳ ವಿಚಾರದಲ್ಲಿ ನಾನು ಒಂದೆರೆಡು ಮಾತುಗಳನ್ನು ಆಡಬಯಸುತ್ತೇನೆ. ಈ ಹಿಂದೆ ದೇಶದಲ್ಲಿ ಕ್ಷಾಮ ತಲೆದೋರಿದ್ದ ಕಾಲಕ್ಕೆ ರಾಜ್ಯದ ನಾನಾ ಭಾಗಗಳಲ್ಲಿ ಜನರಿಗೆ ಉದ್ಯೋಗ ಕಲ್ಪಿಸತಕ್ಕ ಬಗ್ಗೆ ಸರ್ಕಾರದವರು ಕೆಲವು ರಸ್ತೆಗಳನ್ನು ಇಂಟರ್‌ವಿಲೇಜ್ ಕಮ್ಯೂನಿಕೇಷನ್ ಅಂತ ಮಾಡಿರುತ್ತಾರೆ. ಹೀಗೆ ಅನೇಕ ಮೈಲಿಗಳ ರಸ್ತೆಯನ್ನು ನಿರ್ಮಾಣಮಾಡಿದ್ದಾರೆ. ಇದಕ್ಕೆ ಸಹಸ್ರಾರು ರೂಪಾಯಿಗಳನ್ನೂ ಖರ್ಚುಮಾಡಿದ್ದಾರೆ. ಆದರೆ ಈ ರಸ್ತೆಗಳೆಲ್ಲಾ ಇಲ್ಲಿಗೆ 3-4 ವರ್ಷಗಳಿಂದ ಮಳೆಯಿಂದ ಕೊಚ್ಚಿಹೋಗಿ ಅವುಗಳ ಸಾಕ್ಷಿ ಸಹಾ ಕೆಲವು ಕಡೆ ಕಾಣದಂತಾಗಿದೆ. ಈ ರಸ್ತೆಗಳ ಉಪಯೋಗ ಗ್ರಾಮಾಂತರ ಪ್ರದೇಶಗಳವರಿಗೆ ಬಹಳ ಅತ್ಯಗತ್ಯ, ಆದುದರಿಂದ ಸರ್ಕಾರದವರು ಈ ರಸ್ತೆಗಳನ್ನು ಕೂಡಲೇ ರಿಪೇರಿಮಾಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅಲ್ಲದೆ ಈ ರಸ್ತೆಯ ಕೆಲವು ಭಾಗಗಳಲ್ಲಿ ಒಂದೊಂದು ಕಾಜ್‌ವೇ ಅಥವಾ ಒಂದು ಸೇತುವೆಯನ್ನು ಹಾಕಬೇಕಾಗಿದ್ದುದರಿಂದ ಈ ರಸ್ತೆಗಳನ್ನು ಅಲ್ಲಲ್ಲೇ ಒಂದೆರೆಡು ಫರ್‌ಲಾಂಗ್ ಕೆಲಸವನ್ನು ಹಾಗೇ ನಿಲ್ಲಿಸಿಬಿಟ್ಟಿದ್ದಾರೆ. ಈ ಮಿಸ್ಸಿಂಗ್ ಲಿಂಕುಗಳಿಗೆ ಹಣವಿಲ್ಲವೆಂದು ಇವುಗಳನ್ನು ಹಾಗೇ ನಿಲ್ಲಿಸಿದ್ದಾರೆ. ಆಗಿನ ಬಡ್ಜೆಟ್ಟಿನಲ್ಲೇ ಇವುಗಳಿಗೆ ಸಾಕಾಗುವಷ್ಟು ಹಣವನ್ನು ಒದಗಿಸಬೇಕಾಗಿತ್ತು. ಈಗಲಾದರೂ ಮಂತ್ರಿಗಳು ಇಲಾಖೆಯ ಅಧಿಕಾರಿಗಳಿಗೊಂದು ಆಜ್ಞೆಯನ್ನು ಕೊಟ್ಟು ಇವುಗಳನ್ನು ಕೂಡಲೇ ರಿಪೇರಿಮಾಡಬೇಕೆಂದು ತಿಳಿಸಬೇಕು. ಇಲ್ಲವಾದರೆ ಸರ್ಕಾರದವರು ಈವರೆಗೆ ಖರ್ಚುಮಾಡಿರತಕ್ಕ ಕೋಟ್ಯಾಂತರ ರೂಪಾಯಿಗಳು ಹಾಳಾದಂತೆ ಆಗುವುದು. ಆದುದರಿಂದ ಈ ರಸ್ತೆಗಳ ದುರಸ್ತಿಯನ್ನು ಕೂಡಲೇ ಕೈಗೊಳ್ಳಬೇಕೆಂದು ನಾನು ಸರ್ಕಾರದವರಲ್ಲಿ ಒತ್ತಾಯಮಾಡುತ್ತೇನೆ. ಇಲ್ಲಿ ಕೆಲವು ಸೇತುಗಳಾಗದಿರುವುದರಿಂದ ಈ ರಸ್ತೆಗಳು ಅನುಪಯುಕ್ತವಾಗಿವೆ. ಆದುದರಿಂದ ಅವುಗಳನ್ನೂ ಸಹಾ ಕೂಡಲೇ ಕೈಗೊಳ್ಳಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಇದರಿಂದ ದೇಶದ ಜನರಿಗೆ ತುಂಬಾ ಅನುಕೂಲವಾಗುವುದು. ಜನರ ಪರಿಸ್ಥಿತಿ ಕೂಡ ಉತ್ತಮಗೊಳ್ಳುತ್ತದೆ ಎಂದು ನಾನು ಹೇಳಬಯಸುತ್ತೇನೆ. ಹೀಗೆ ಎಂದೂ ಈ ಒಂದು ಇಲಾಖೆಯ ಪ್ರಗತಿ ಕುಂಠಿತವಾಗಬಾರದು. ಹೀಗೇ ಆ ಸಣ್ಣ ನೀರಾವರಿ ಯೋಜನೆಗಳ ಬಗ್ಗೆಯೂ ಸರ್ಕಾರದವರು ಕೂಡಲೇ ಒಂದು ಆಜ್ಞೆಯನ್ನು ಹೊರಡಿಸಿ ಹೊಸ ಕಾಮಗಾರಿಗಳನ್ನೂ ಸಹಾ ಮಂಜೂರು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಕೆಲಸಗಳನ್ನು ಕಂಟ್ರಾಕ್ಟುದಾರ ಸಕಾಲಕ್ಕೆ ಮುಗಿಸದಿದ್ದರೆ ಆತನಮೇಲೆ ಇಲಾಖೆಯವರು ಕ್ರಮ ಕೈಗೊಳ್ಳಬೇಕು. ಆ ಕಂಟ್ರಾಕ್ಟರುಗಳಿಗಾದರೋ ಇಲಾಖೆಯವರು 10—12 ವರ್ಷಗಳಿಗೆ ಆಗುವಷ್ಟು ಕೆಲಸಗಳನ್ನು ಕಂಟ್ರಾಕ್ಟು ಕೊಡುತ್ತಿರುವುದರಿಂದ ಅವರ ಕೆಲಸಗಳೆಲ್ಲಾ ಹೀಗೆ ನಿಧಾನವಾಗುವುದಕ್ಕೆ ಅವಕಾಶವಾಗಿದೆ. ಯಾವ ಒಬ್ಬ ಕಂಟ್ರಾಕ್ಟರಾಗಲೀ ಟೆಂಡರಿನ ಕಂಡೀಷನ್ನಿಗೆ ಅನುಸರಿಸಿ ಕೆಲಸಮಾಡದಿದ್ದರೆ ಇಲಾಖೆಯ ಅಧಿಕಾರಿಗಳು ಆತನ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳುವಂತೆ ಅಧಿಕಾರಿಗಳಿಗೆ ಎಚ್ಚರಿಕೆ ಕೊಡಬೇಕೆಂದು ಹೇಳುತ್ತೇನೆ, ನಮ್ಮ ಲೋಕೋಪಯೋಗಿ ಶಾಖೆಯ ಸಚಿವರಾದರೋ ಇನ್ನೂ ತರುಣರು, ಬಹಳ ಉತ್ಸಾಹಶಾಲಿಗಳು, ಬುದ್ಧಿವಂತರು. ಇವರು ದೇಶದ ಸರ್ವತೋಮುಖನಾದ ಏಳಿಗೆಗೆ ಗಮನಕೊಟ್ಟು ದೇಶದ ಸಮಸ್ಯೆಗಳನ್ನು ಆದಷ್ಟುಬೇಗ ಬಗೆಹರಿಸುತ್ತಾರೆಂದು ನಾನು ನಂಬಿದ್ದೇನೆ. ಹೀಗೆ ಮಾಡಿದರೆ ದೇಶ ಏಳಿಗೆಗೆ ಬರುತ್ತದೆ.

(ಶ್ರೀ ಬಿ. ಭೈರಪ್ಪಾಜಿ)

ಈ ಒಂದು ಇಲಾಖೆ ಕುಂಠಿತವಾಗಿದೆ. ಇದರ ಕಾರ್ಯವನ್ನು ಸರಿಯಾದ ರೀತಿಯಲ್ಲಿ ನಡೆಸುವುದಕ್ಕೆ ಹಿಂದೆ ಬಿದ್ದರೆ ದೇಶದ ಪ್ರಗತಿಯೂ ಕೂಡ ಹಿಂದೆ ಬೀಳುತ್ತದೆ ಎಂದು ಸರ್ಕಾರದವರಲ್ಲಿ ಒತ್ತಾಯ ಪೂರ್ವಕವಾಗಿ ಹೇಳಿ ಶ್ರೀಮಾನ್ ವೀರೇಂದ್ರ ಪಾಟೀಲ್ ಅವರು ಈ ಬಗ್ಗೆ ಹೆಚ್ಚು ಗಮನ ಕೊಟ್ಟು ಈ ಕಾರ್ಯಗಳನ್ನು ಮಾಡಿಸುವುದಕ್ಕೆ ಅವರು ಶಕ್ತರಾಗುತ್ತಾರೆ ಎಂದು ಈ ಮೂಲಕ ಅವರಲ್ಲಿ ಬಿನ್ನೈಸಿಕೊಳ್ಳುತ್ತೇನೆ.

ಇನ್ನು ಜನರಲ್ ಆಡ್ಮಿನ್‌ಸ್ಟ್ರೇಷನ್ ವಿಚಾರ. ಸುಮಾರು 3 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೀರಿ. ದೇಶದ ಎಲ್ಲಾ ಹೊರೆಯನ್ನೂ ಹೊತ್ತಿರತಕ್ಕ ಈ ಒಂದು ಇಲಾಖೆಯಲ್ಲಿ ಇರುವ ಅನೇಕ ಲೋಪದೋಷಗಳನ್ನು ನಾನಾದರೂ ಕೂಡ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮೀ, ತಾವು ಈ ಇಲಾಖೆಯಲ್ಲಿ ಬೇಕಾದಷ್ಟು ಹಣವನ್ನ ಖರ್ಚು ಮಾಡುತ್ತಾ ಇದ್ದೀರಿ. ಆದರೂ ಕೂಡ ಜನತೆಗೆ ಅದರಲ್ಲೂ ರೈತಾಪಿ ವರ್ಗಕ್ಕೆ ಯಾವ ವಿಧವಾದ ಅನುಕೂಲಗಳೂ ದೊರೆಯುತ್ತಾ ಇಲ್ಲ. ತಾಲ್ಲೂಕು ಆಫೀಸನ್ನು ನೋಡಿದರೆ ನಮ್ಮ ತಾಲ್ಲೂಕು ಆಫೀಸಿನ ಒಂದು ವಿಚಿತ್ರ ಸಂಗತಿಯನ್ನು ಸರ್ಕಾರದ ಮುಂದೆ ಇಡಬಯಸುತ್ತೇನೆ. 1937ನೇ ಇಸವಿಯಲ್ಲಿ ತುರುವೇಕೆರೆ ತಾಲ್ಲೂಕು ಒಂದು ಸಬ್ ತಾಲ್ಲೂಕ್ ಆಗಿತ್ತು. ಆಗ 4 ಜನ ಗುಮಾಸ್ತರು ಇದ್ದರು. ಒಬ್ಬ ತಹಸಿಲ್‌ದಾರರು, ಒಬ್ಬ ಶಿರಸ್ತೇದಾರರು; ಒಬ್ಬ ಹೆಡ್ ಗುಮಾಸ್ತರು ಇದ್ದರು. ಈಗ 1965ನೇ ಇಸವಿ ಬಂದರೂ ಕೂಡ ಅಷ್ಟೇ ಇದೆ. ಕೆಲಸದ ಪರಿಮಿತಿ ಮಾತ್ರ ಎಷ್ಟೋ ಹೆಚ್ಚಾಗಿದೆ. ಕೆಲಸಕ್ಕೆ ತಕ್ಕಂತೆ ಸಿಬ್ಬಂದಿಯನ್ನು ಹೆಚ್ಚು ಮಾಡುವುದು ಸರ್ಕಾರದ ಕರ್ತವ್ಯವಲ್ಲವೇ? ಸಿಬ್ಬಂದಿ ಹೆಚ್ಚಾಗಿಲ್ಲದೇ ಇರುವುದರಿಂದ ಜನತೆಗೆ ಸರಿಯಾದಂತಹ ಕಾಲದಲ್ಲಿ ಆಗಬೇಕಾದ ಕೆಲಸಗಳು ಆಗದೇ ಇರುವುದಕ್ಕೆ ಸರ್ಕಾರದವರ ಈ ನೀತಿಯೇ ಕಾರಣವಲ್ಲವೆ ಎಂದು ನಾನಾದರೂ ಕೂಡ ಸರ್ಕಾರದವರನ್ನು ಕೇಳಬಯಸುತ್ತೇನೆ. ಇದೇ ರೀತಿ ಅನೇಕ ಆಫೀಸುಗಳಲ್ಲಿ ನಡೆಯುತ್ತಾ ಇದೆ. ದಕ್ಷತೆಯ ಅಭಾವ ಹೆಚ್ಚಾಗಿದೆ ಎಂದರೆ ಅದಕ್ಕೂ ಕೂಡ ಇದೇ ಒಂದು ಮುಖ್ಯ ಕಾರಣವಾಗುತ್ತದೆ. ಎಷ್ಟು ಸಿಬ್ಬಂದಿ ಬೇಕೋ ಅಷ್ಟು ಸಿಬ್ಬಂದಿ ಇಲ್ಲದೇ ಇರುವುದರಿಂದ ಅದಕ್ಷತೆ, ಲಂಚಕೋರತನ ಇವೆಲ್ಲವೂ ಪ್ರಾರಂಭವಾಗುತ್ತವೆ. ಆದ್ದರಿಂದ ವರ್ಕ್‌ಲೋಡಿಗೆ ತಕ್ಕಂತೆ ಸಿಬ್ಬಂದಿಯನ್ನು ಒದಗಿಸುವುದು ಸರ್ಕಾರದವರ ಕರ್ತವ್ಯ. ಈ ಕಡೆಗೆ ಸರ್ಕಾರದವರು ಗಮನ ಕೊಡಬೇಕು. ಆಂಟಿ-ಕರಪ್‌ಷನ್ ಇಲಾಖೆಗೆ ಸುಮಾರು ಹತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೀರಿ. ಅಲ್ಲೂ ಕೂಡ ಬೇರೆ ಇಲಾಖೆಯಲ್ಲಿದ್ದಂಥ ಅಧಿಕಾರಿಗಳನ್ನೇ ನೇಮಕ ಮಾಡಿದ್ದೀರಿ. ಆ ಒಂದು ಇಲಾಖೆ ಎಷ್ಟು ದಕ್ಷತೆಯಿಂದ, ನಿರ್ವಂಚನೆಯಿಂದ, ನಿಸ್ಪೃಹತೆಯಿಂದ ಕೆಲಸ ಮಾಡುತ್ತಾ ಇದೆ ಎಂಬುದನ್ನು ನೋಡಿದರೆ ಆ ಇಲಾಖೆಯಿಂದ ಯಾವ ವಿಧವಾದ ಲಂಚಕೋರತನವನ್ನೂ ಕೂಡ ನಿಲ್ಲಿಸುವುದಕ್ಕೆ ಸಾಧ್ಯವಾಗಿಲ್ಲ, ಆಗುವುದೂ ಇಲ್ಲ ಎಂದು ಕಾಣುತ್ತದೆ. ಕಾಂಗ್ರೆಸ್ ಸರ್ಕಾರದವರ ಆಡಳಿತದ ವೈಖರಿ ಎಲ್ಲಿಯತನಕ ಇದೇ ರೀತಿ ಮುಂದುವರಿಯುತ್ತದೆ ಅಲ್ಲಿಯವರೆಗೂ ಕೂಡ ಲಂಚನಿರೋಧವನ್ನು ಅಥವಾ ಲಂಚವನ್ನು ನಿಲ್ಲಿಸುವಂತಹ ಒಂದು ಕಾರ್ಯವನ್ನು ಸಾಧನೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿ ನಾನು ಈ ದಿವಸ ಕಡಾಖಂಡಿತವಾಗಿ ಹೇಳುತ್ತೇನೆ.

ಇದೇ ರೀತಿಯಲ್ಲಿ ಇನಾಂ ರದ್ದಿಯಾತಿ ಆಫೀಸಿನಲ್ಲೂ ಕೂಡ ಸರಿಯಾದ ರೀತಿಯಲ್ಲಿ ಕೆಲಸ ಆಗುತ್ತಾ ಇಲ್ಲ. ಅಧಿಕಾರಿಗಳಲ್ಲಿ ಅದ್ಯಕ್ಷತೆ ಮೂಡಿದೆ. ಒಂದು ರೀತಿಯಿಂದ ಈ ಇಲಾಖೆಗಳನ್ನು ಪುನರ್ವಿಂಗಡಿಸಿ ಎಲ್ಲಿ ಲೋಪದೋಷಗಳು ಇವೆ, ಎಲ್ಲಿ ರೈತಾಪಿ ಜನರಿಗೆ ಬಹಳ ತೊಂದರೆಯಾಗುತ್ತಾ ಇದೆ, ಅದನ್ನೆಲ್ಲಾ ಸರಿಪಡಿಸಿ, ಆದಷ್ಟು ವ್ಯವಸ್ಥಿತವಾದ ರೀತಿಯಲ್ಲಿ ರೈತನ ಕೆಲಸಕಾರ್ಯಗಳು ಆಗುವುದಕ್ಕೆ ನೆರವಾಗಬೇಕೆಂದು ಈ ಮೂಲಕ ಸರ್ಕಾರದವರಿಗೆ ಸಲಹೆ ಮಾಡಿ ಅಧ್ಯಕ್ಷರು ಇಷ್ಟು ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ್).—ಅಧ್ಯಕ್ಷರೇ, ನಮ್ಮ ಮುಂದೆ ಇರುವಂತಹ ಈ ಬೇಡಿಕೆಗಳನ್ನು ಅನುಮೋದಿಸುತ್ತ ಕೆಲವೊಂದು ವಿಷಯದ ಮೇಲೆ ಒಂದೆರಡು ಮಾತುಗಳನ್ನು ಹೇಳಲು ಬಯಸುತ್ತೇನೆ. ಸಾಮಾನ್ಯ ಆಡಳಿತ. ಇದರ ಸಲುವಾಗಿ ಈ ಮನೆಯಲ್ಲಿ ಸಾಕಾದಷ್ಟು ಚರ್ಚೆಯಾಗಿದೆ. ನಮ್ಮ ರಾಜ್ಯಕ್ಕೆ ಕೆಟ್ಟ ಹೆಸರು ಅಥವಾ ಒಳ್ಳೆಯ ಹೆಸರು ತರುವಂತಹದು ಎಂದರೆ ಈ ಒಂದು ಆಡಳಿತ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಸಾಮಾನ್ಯ ಆಡಳಿತ ಸಾಮಾನ್ಯವಾಗಿಯೇ ನಡೆದಿದೆ

ಎನ್ನುವಂತಹದು ಪ್ರತಿಯೊಬ್ಬರಿಗೂ ಗೊತ್ತಿದೆ. ಆದರೆ ಅದನ್ನು ಸುಧಾರಿಸುವಂತಹ ಯೋಗ್ಯತೆ ಯಾರಲ್ಲಿದೆ. ಎನ್ನುವಂತಹ ಪ್ರಶ್ನೆ ಇವತ್ತು ನಮ್ಮ ಮುಂದೆ ಇದೆ. ಪ್ರಜಾಪ್ರಭುತ್ವದಲ್ಲಿ ಕೇವಲ ಸರ್ಕಾರರಚಿಸಿಕೊಂಡಂಥ ಅಧಿಕಾರರೂಢವಾದ ಒಂದು ಪಾರ್ಟಿಯ ಕೈಯಲ್ಲೇ ಎಲ್ಲವೂ ಇದೆ ಎನ್ನುವಂತಹ ಮಾತು ಎಳ್ಳಷ್ಟು ನಿಜವಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಸಾಮಾನ್ಯ ಆಡಳಿತ ಸುಧಾರಿಸಬೇಕಾದರೆ, ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಪ್ರತಿಯೊಬ್ಬರ ಕರ್ತವ್ಯ ಜವಾಬ್ದಾರಿ ಕೂಡ ಅದರಲ್ಲಿ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ನನಗೆ ತಿಳಿದ ಮಟ್ಟಿಗೆ ಪ್ರಜಾಪ್ರಭುತ್ವದಲ್ಲಿ ಅಧಿಕಾರ ದುರುಪಯೋಗ ಮಾಡಿಕೊಂಡು, ಅಧಿಕಾರಿಸ್ಥರನ್ನು ನಮ್ಮ ಕೈಯಲ್ಲಿ ಹಿಡಿದುಕೊಂಡು ಅವರು ನಾವು ಹೇಳಿದಂತೆ ಕೇಳಲಿ ಎಂಬ ಮನೋಭಾವ ಇವತ್ತು ಕಾಣುತ್ತಾ ಇಲ್ಲ. ನಾವು ಇವತ್ತು ಬೇರೊಂದು ರಾಷ್ಟ್ರಕ್ಕೆ ಹೋಲಿಸಬೇಕಾದರೆ ಯಾವುದಕ್ಕೆ ಹೋಲಿಸುತ್ತೇವೆ ಎಂದರೆ ಮುಂದುವರಿದ ರಾಷ್ಟ್ರಗಳ ಜೊತೆಗೆ ಆದರಲ್ಲಿ ಪ್ರಜಾಪ್ರಭುತ್ವದಲ್ಲಿ ಯಶಸ್ಸು ಪಡೆದಂತಹ ರಾಷ್ಟ್ರಗಳೊಡನೆ ನಮ್ಮ ರಾಜಕೀಯವನ್ನು ಹೋಲಿಸುತ್ತೇವೆ. ಆ ರೀತಿ ಹೋಲಿಸಿದಾಗ ನಮ್ಮ ಆಡಳಿತ ಸರಿಯಿಲ್ಲ ಎಂಬ ಭಾವನೆ ಬರುತ್ತಾ ಇದೆ. ಆದರೆ ನಿಜವಾಗಿ ನೋಡಿದರೆ ಸಾಮಾನ್ಯ ಆಡಳಿತದಲ್ಲಿ ನಾವು ತಿಳಿದುಕೊಂಡಷ್ಟು ಮಟ್ಟಕ್ಕೆ ಆದು ಅಧೋಗತಿಗೆ ಹೋಗಿಲ್ಲ ಎಂಬುದನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳಬೇಕು. ಹಿಂದೆ ಬ್ರಿಟಿಷರ ಕಾಲದಲ್ಲಿ ಎಂದರೆ ಸ್ವಾತಂತ್ರ್ಯಪೂರ್ವದಲ್ಲಿ ಯಾವ ಅಧಿಕಾರಸ್ಥರ ಮನೋವೃತ್ತಿ ಇತ್ತೋ ಅದು ಇವತ್ತು ಇಲ್ಲ. ಅವರೂ ಕೂಡ ತಿಳಿದುಕೊಂಡಿದ್ದಾರೆ ನಾವು ಅಧಿಕಾರ ನಡೆಸುವಂತ ಸಮಯವಿದಲ್ಲ. ನಾವೂ ಕೂಡ ಜನರ ಸೇವೆ, ದೇಶಸೇವೆ, ಮಾಡಬೇಕೆಂಬ ಭಾವನೆ ಹೊಂದಿದ್ದೇವೆ. ಅಂತಹ ಮನೋವೃತ್ತಿ ಬಹಳವಾಗಿ ಎಲ್ಲರಲ್ಲೂ ಹುಟ್ಟಲಿಕ್ಕೆ ಹತ್ತಿದೆ ವಿನಹ ಅಧಿಕಾರ ಬಂದಿದೆ ಆದ್ದರಿಂದ ಅದನ್ನು ದುರುಪಯೋಗ ಮಾಡಬೇಕೆಂಬ ವೃತ್ತಿ ಆದರಲ್ಲಿ ಕಡಿಮೆಯಾಗಲಿಕ್ಕೆ ಹತ್ತಿದೆ. ಒಂದು ವೇಳೆ ಇದ್ದರೂ ಅಧಿಕಾರಿಗಳಲ್ಲಿ ಆ ಮನೋವೃತ್ತಿ ಹೋಗಲಿ ಎಂದು ಕೇಳಿಕೊಳ್ಳುತ್ತಾ ಇದ್ದೇನೆ. ಇನ್ನು ಒಂದೆರಡು ವಿಷಯಗಳನ್ನು ಸಾಮಾನ್ಯ ಆಡಳಿತದ ಮೇಲೆ ಹೇಳದೇ ಗತ್ಯಂತರವಿಲ್ಲ. ಸಾಮಾನ್ಯ ಆಡಳಿತದಲ್ಲಿ ಫೈಲ್‍ಗಳು ಮೂವ್ ಆಗುವುದಿಲ್ಲ ಎಂಬ ಕೂಗು ಇದೆ. ಅದು ನಿಜ. ಈ ಸಾಮಾನ್ಯ ಆಡಳಿತವನ್ನು ವಹಿಸಿಕೊಂಡಿರುವಂತಹ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ : ಮೂರು ದಿವಸಕ್ಕಿಂತ ಹೆಚ್ಚಾಗಿ ಒಂದು ಫೈಲು ಯಾವ ಒಂದು ಟೇಬಲ್ ಮೇಲೂ ಇರಕೂಡದು ಎಂದು ಹೇಳಿ ಕಟ್ಟುನಿಟ್ಟಾಗಿ ಒಂದು ಕಾಲ ನಿಗದಿ ಮಾಡಿ ಆದನ್ನು ಮೀರಿದ ಪಕ್ಷದಲ್ಲಿ ಕಠಿಣವಾದಂತಹ ಒಂದು ಕ್ರಮವನ್ನು ತೆಗೆದುಕೊಳ್ಳಿ. ಸಿಬ್ಬಂದಿ ಹೆಚ್ಚಾಗಿದೆ ಎಂದು ಮಾನ್ಯ ಜತ್ತಿ ಸಾಹೇಬರು ಹೇಳಿದರು ಮತ್ತು ಶೇಕಡ 20-30 ರಷ್ಟು ಜನರನ್ನು ತೆಗೆಯಬಹುದು ಎಂದು ಹೇಳಿದರು. 30 ಪರ್ಸೆಂಟ್ ಹೆಚ್ಚಾಗಿದೆ ಅದನ್ನು ಹೇಗೆ ಕಡಿಮೆ ಮಾಡಬಹುದು ಎಂದರೆ ಹೊಸದಾಗಿ ರಿಕ್ರೂಟ್ ಮಾಡದೆ ಇದ್ದ ಸಿಬ್ಬಂದಿಯಲ್ಲೇ ಸುಧಾರಿಸಬಹುದು ಎಂದು ಅವರು ಹೇಳಿದರು. ಹೀಗೆ ಅವರು ಹೇಳುತ್ತಾ ಇರುವಾಗಲೇ ಸೆಕ್ರೆಟೇರಿಯೇಟ್‍ನಲ್ಲಿ ಡೆಪ್ಯೂಟಿ ಚೀಫ್ ಸೆಕ್ರೆಟೆರಿಯವರು ಲೋಕಲ್ ಕ್ಯಾಂಡಿಡೇಟ್ಸನ್ನು ರೆಕ್ರೂಟ್ ಮಾಡುತ್ತಾ ಇದ್ದಾರೆ. ಹೀಗೆ ಮಾಡಿದರೆ ಹೇಗೆ 30 ಪರ್ಸೆಂಟ್ ಜನರನ್ನು ತೆಗೆಯಲಿಕ್ಕೆ ಸಾಧ್ಯವಾದೀತು ? ಡೆಪ್ಯೂಟಿ ಚೀಫ್ ಸೆಕ್ರೆಟೆರಿಗಳು ಕೆಲಸಕ್ಕೆ ತೆಗೆದುಕೊಳ್ಳುತ್ತಾ ಇದ್ದಾರೆ, ಮತ್ತು ತಾವು ಅದಕ್ಕೆ ಮಂಜೂರಾತಿಯನ್ನು ಕೊಡುತ್ತಾ ಇದ್ದೀರಿ, ನೀವು ಅವರಿಗೆ ಮಂಜೂರಿಯನ್ನಾಗಲಿ, ಹಣವನ್ನಾಗಲಿ ಕೊಡದಿದ್ದರೆ ಅವರು ತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ. ಎಂದಮೇಲೆ ಒಂದಲ್ಲ ಒಂದು ರೀತಿಯಲ್ಲಿ ನೀವು ಇದನ್ನೆಲ್ಲಾ ಬಂದ್ ಮಾಡಿ ಸಿಬ್ಬಂದಿಯಲ್ಲಿ ಖೋತಾ ಮಾಡಬೇಕೆಂದು ಹೊರಟಿರುವಾಗ ನಿಮ್ಮ ಸೆಕ್ರೆಟೆರಿಯವರು ನಿಮ್ಮ ನೀತಿಯನ್ನು ಅನುಸರಿಸದೇ ಹೋದರೆ ನಿಮ್ಮ ಆಡಳಿತವನ್ನು ಸುಧಾರಿಸುವುದಕ್ಕೆ ಸಾಧ್ಯವೇ ? ಆದ್ದರಿಂದ ಎಲ್ಲಿ ಹೆಚ್ಚು ಸಿಬ್ಬಂದಿ ಇದೆ ಅಲ್ಲಿ ತೆಗೆಯಿರಿ ಮತ್ತು ಎಲ್ಲಿ ಸಿಬ್ಬಂದಿ ಕಡಿಮೆ ಇದೆ. ಅಲ್ಲಿಗೆ ಸಿಬ್ಬಂದಿಯನ್ನು ಕೊಡಿ ಇಂತಹ ಒಂದು ಗುರಿಯನ್ನು ಸಾಧಿಸಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ.

ಇನ್ನು ಇರಿಗೇಷನ್ ಸಲುವಾಗಿ ಒಂದೆರಡು ಮಾತು. ಈಗ ದೊಡ್ಡ ದೊಡ್ಡ ಯೋಜನೆಗಳಿಂದ ನಿರೀಕ್ಷಿಸಿದಷ್ಟು ಪ್ರತಿಫಲ ಬರುತ್ತಿಲ್ಲ. ಸಣ್ಣ ನೀರಾವರಿ ಯೋಜನೆಗಳಿಗೆ ಹೆಚ್ಚು ಗಮನ ಕೊಡಬೇಕು. ಇದನ್ನು ಮಂತ್ರಿಗಳು ಕೂಲಂಕಷವಾಗಿ ವಿಚಾರ ಮಾಡಿ ಹೆಚ್ಚು ಪ್ರೋತ್ಸಾಹ ಸಣ್ಣ ನೀರಾವರಿ ಯೋಜನೆಗಳಿಗೆ ಕೊಡುತ್ತಾರೆಂದು ನಂಬಿದ್ದೇನೆ. ಏಕೆಂದರೆ ಅಕ್ಕಪಕ್ಕದ ರಾಜ್ಯಗಳಲ್ಲಿ ನೀರಾವರಿ ಬಹಳ ಹೆಚ್ಚಾಗಿದೆ ನಮ್ಮಲ್ಲಿ ಬಹಳ ಕಡಮೆಯಿದೆ. ಇತರರ ಮಟ್ಟಕ್ಕೆ ನಮ್ಮ ದೇಶದ ನೀರಾವರಿಯನ್ನು ತರಲು ಹೆಚ್ಚು ಪ್ರಯತ್ನ ಮಾಡಬೇಕು. ಮತ್ತು ಕೇಂದ್ರವನ್ನು ಹೆಚ್ಚು ಸಹಾಯ ಒದಗಿಸುವಂತೆ ಕೇಳಬೇಕೆಂದು ಸೂಚಿಸುತ್ತೇನೆ.

(ಶ್ರೀ ಎಸ್. ಎಂ. ಗುರೆಡ್ಡಿ)

[MR. DEPUTY SPEAKER in the Chair.]

ನಾರಾಯಣಪುರ ಮತ್ತು ಆಲಮಟ್ಟಿ ಯೋಜನೆಗಳ ಸಲುವಾಗಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ನಮಗೆ ನ್ಯಾಯವಾಗಿ ಬರಬೇಕಾದ ಕೃಷ್ಣಾ ನದಿಯ ನೀರಿನ ಪಾಲನ್ನು ಕೇಳುತ್ತಿದ್ದೇವೆಂದು ಮುಖ್ಯ ಮಂತ್ರಿಗಳು ಹೇಳಿದರು. ಆದರೆ ಗುಲ್ಹಾಟಿ ವರದಿ ಬಂದಮೇಲೆ ಮತ್ತು ಮುಖ್ಯ ಮಂತ್ರಿಗಳ ಸಮ್ಮೇಳನವಾದಮೇಲೆ ಕೃಷ್ಣಾನದಿ ನೀರಿನ ವಿಚಾರ ಇನ್ನೂ ಇತ್ಯರ್ಥ ವಾಗಿಲ್ಲ. ತೀವ್ರವಾಗಿ ಮಾಡಬೇಕು. ಈಗ ಆಲಮಟ್ಟಿ ಮತ್ತು ಸಿದ್ದಾಪುರದ ಹತ್ತಿರ ಅಣೆಕಟ್ಟು ಕಟ್ಟುವುದಕ್ಕೆ ಹೊರಟಿದ್ದೇವೆ. ಆದರೆ ನೀರು ಎಷ್ಟು ನಮಗೆ ದೊರೆಯಬಹುದೆಂಬುದನ್ನು ಖಚಿತವಾಗಿ ತಿಳಿಯದೆ ಅವನ್ನು ಕಟ್ಟುವುದು ಬುನಾದಿ ಹಾಕುವುದು ಎಷ್ಟುಮಟ್ಟಿಗೆ ಸಮಂಜಸ ವಾದುದೆಂಬುದನ್ನು ಆಲೋಚನೆ ಮಾಡಬೇಕಾದ್ದು ಅವಶ್ಯಕ. ಇನ್ನೊಂದು ಸಲಹೆ! ರೊಕ್ಕವಿಲ್ಲ ಎಂಬುದನ್ನು ಒಪ್ಪೋಣ. ಆದರೆ ಅದಕ್ಕೋಸ್ಕರ ದಾಮೋದರ ವ್ಯಾಲಿ ಕಾರ್ಪೊರೇಷನ್ ಮಾಡಿರುವ ಹಾಗೆ ಕೃಷ್ಣಾ ವ್ಯಾಲಿ ಕಾರ್ಪೊರೇಷನ್ ಮಾಡಿದರೆ ಜನರಿಂದ ಹಣ ಬರಮಾಡಿಕೊಳ್ಳಲು ಸಾಧ್ಯವಿದೆ. ಇವು ಬಹಳ ಮಹತ್ವದ ಯೋಜನೆಗಳಾದ್ದರಿಂದ ರೊಕ್ಕದ ಸಲುವಾಗಿ ಅವನ್ನು ಮುಂದುವರಿಸಿದರೆ ಪ್ರಗತಿಯಾಗುವುದಿಲ್ಲ. ಅದುದರಿಂದ ನೀರಾವರಿಗೆ ಹೆಚ್ಚು ಗಮನ ಕೊಡಬೇಕು.

ಇನ್ನೊಂದು: ಒಂದು ಕಡೆ ಒಂದು ಕಡೆ ನೀರಾವರಿ ಹೆಚ್ಚಾಗಬೇಕೆಂಬ ಕೂಗಿದೆ. ಮತ್ತು ರೈತರು ಕೊಟ್ಟ ನೀರನ್ನು ಉಪಯೋಗಮಾಡಿಕೊಳ್ಳುವುದಿಲ್ಲವೆಂಬ ದೂರೂ ಸಹ ಇದೆ. ಅದಕ್ಕೆ ಎಲ್ಲಿ ದೋಷವಿದೆ ಎಂದು ನೋಡಬೇಕು. ನೀರಾವರಿ ಮಾಡಿದ ಕ್ಷಣದಲ್ಲೇ ನಾವು ಬೆಟರ್‌ಮೆಂಟ್ ಲೆವಿ ಹಾಕಿದ್ದೇವೆ. ನಿನ್ನೆ ಆರ್ಥಿಕ ಮಂತ್ರಿಗಳು ದೊಡ್ಡ ಪ್ರಾಜೆಕ್ಟುಗಳಿಂದ ನಮಗೆ ಬರಬೇಕಾದ ರಿಟರ್ನ್ ಸರಿಯಾಗಿ ಬರುತ್ತಿಲ್ಲ, ಇದರಿಂದ ನಾವು ಕೊಡಬೇಕಾದ ಕಂತು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಆದರೆ ಎಕರೆಗೆ 500 ರೂಪಾಯಿಗಳನ್ನು ಕೊಡಬೇಕೆಂದರೆ ರೈತರಿಗೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕು. ಬೆಟರ್‌ಮೆಂಟ್ ಲೆವಿ ರೈತರಿಗೆ ಬಹಳ ದುಬಾರಿಯಾಗಿದೆ. ರೈತ ಪ್ರತಿ ಎಕರೆಗೆ 500 ರೂಪಾಯಿಗಳನ್ನು ಕೊಟ್ಟು ನೀರಾವರಿ ವ್ಯವಸಾಯ ಮಾಡುವುದಕ್ಕೆ ಬದಲಾಗಿ ಸರಕಾರಕ್ಕೆ ಜಮೀನನ್ನು ಬಿಡಲು ತಯಾರಾಗಿದ್ದಾನೆ. ಹೀಗೆ ಫ್ಲಾಟ್‌ರೇಟ್ ಬೆಟರ್ ಮೆಂಟ್ ಲೆವಿ ಎಲ್ಲ ತರದ ಭೂಮಿಗಳಿಗೂ ಹಾಕುವುದು ಅಷ್ಟು ಸೈಂಟಿಫಿಕ್ಕಾಗಿಲ್ಲ. ಇದನ್ನು ಪರ್ಯಾಲೋಚನೆ ಮಾಡಿ, ರೈತರಿಗೆ ಬಹಳ ತೊಂದರೆಯಾಗಿದೆ. ಹೀಗೆ ಲೆವಿ ಮಾಡಿದರೆ ರೈತರಿಗೆ ನೀರನ್ನು ಉಪಯೋಗ ಮಾಡಲು ಸಾಧ್ಯವಾಗುವುದಿಲ್ಲ. ಜಮೀನು ಅಭಿವೃದ್ಧಿಯಾಗಿ ರೈತನಿಗೆ ಭೂಮಿಯಿಂದ ಉತ್ಪನ್ನ ಬಂದಮೇಲೆ ಬೆಟರ್‌ಮೆಂಟ್ ಲೆವಿ ಕೇಳಿದರೆ ರೈತ ಕೊಡಬಲ್ಲ, ಇದನ್ನು ಯೋಚನೆಮಾಡಬೇಕು.

ಲೋಕೋಪಯೋಗಿ ಖಾತೆ ಮಹತ್ವವಾದಂತಹ ಖಾತೆ. ಅದರಲ್ಲಿ ಕೋಟ್ಯಾಂತರ ರೂಪಾಯಿ ಖರ್ಚಾಗಿದೆ. ಆದರೆ ಪ್ಲಾನ್ ಪ್ರಕಾರ ಪ್ರೈಯಾರಿಟಿ ಪ್ರಕಾರ ಖರ್ಚುಮಾಡಿದ್ದಾರೆಯೇ ಎಂಬ ಸಂಶಯವಿದೆ. ಪ್ರಯಾರಿಟಿ ಬೇಸಿಸ್‌ಮೇಲೆ ಯಾವುದನ್ನೂ ನೋಡಿ ಮಾಡಿಲ್ಲ ಎಂದು ನಾನು ತಿಳಿದು ಕೊಂಡಿರುವೆ, ನಾನು ಇದಕ್ಕಾಗಿ ಈಗಿನವರನ್ನು ಯಾರನ್ನೂ ದೂರುತ್ತಿಲ್ಲ. ಎಲ್ಲಿ ಒತ್ತಾಯವಿತ್ತೋ ಅಲ್ಲಿಗೆ ಸಿಕ್ಕಾಪಟ್ಟೆ ಹಣ ಕೊಟ್ಟಿದ್ದಾರೆ. ಈಗಲಾದರೂ ಯಾವ ಪ್ರದೇಶ ಮರೆಯಲಾಗಿದೆ ಎಂಬು ದನ್ನು ಮತ್ತು ಯಾವುದಕ್ಕೆ ಪ್ರಾಶಸ್ತ್ಯ ಕೊಡಬೇಕು ಎಂಬುದನ್ನು ನೋಡಿ ಇರುವ ಹಣದಲ್ಲಿಯೇ ಹಿಂದುಳಿದ ಪ್ರದೇಶ ಮೊದಲು ಮುಂದುವರೆಯಲು ಅವಕಾಶ ಮಾಡಿ ಉಳಿದ ಪ್ರದೇಶದ ಜೊತೆಗೆ ಅದೂ ಸಹ ಬರುವ ಹಾಗೆ ಪ್ರಯತ್ನ ಮಾಡುತ್ತಾರೆಂದು ನಂಬಿದ್ದೇನೆ. ವಿಜಾಪುರ ಜಿಲ್ಲೆಯಲ್ಲಿ ತಾಲ್ಲೂಕಿನ ಸ್ಥಳಗಳಿಂದ ಜಿಲ್ಲೆಗೆ ಬರಬೇಕಾದರೆ ಸರ್ವಋತು ರಸ್ತೆಯಿಲ್ಲ. ನಮ್ಮ ತಾಲ್ಲೂಕಿನಲ್ಲಿ ಮುದ್ದೆಬಿಹಾಳ ತಾಲ್ಲೂಕಿನಲ್ಲಿ ಹೋದ ಸಲ ಮಳೆ ಬಂದಾಗ ಅಲ್ಲಿಂದ ಬೇರೆ ಕಡೆಗಳಿಗೆ ಹೋಗಿ ಬರಬೇಕಾದರೆ 15 ದಿವಸಗಳವರೆಗೆ ಕಾಯಬೇಕಾಯಿತು. ಅದಕ್ಕಾಗಿ ಆ ತಾಲ್ಲೂಕಿನ ರಸ್ತೆಗಳ ದುರಸ್ತಿಗಾಗಿ ಶೀಘ್ರವಾಗಿ ಗಮನ ಕೊಡುವುದು ಅವಶ್ಯಕವೆಂದು ವಿನಂತಿಮಾಡುತ್ತೇನೆ. ಇನ್ನು ವಿದ್ಯುಚ್ಛಕ್ತಿ ಸಲುವಾಗಿ ಒಂದೆರಡು ಮಾತು ಹೇಳಬೇಕಾಗಿದೆ. ವಿಜಾಪುರ ಜಿಲ್ಲೆಯ ವಿಚಾರವನ್ನು ಬಹಳ ವ್ಯಥೆಯಿಂದ ಹೇಳಬೇಕಾಗಿದೆ, ಅಲ್ಲಿ ನೀರಾವರಿ ಕೊರತೆ, ವಿದ್ಯುಚ್ಛಕ್ತಿ ಕೊರತೆ ಒಟ್ಟಿನಮೇಲೆ ಅದು ಎಲ್ಲದರಲ್ಲಿಯೂ ಬರಗಾಲಪೀಡಿತ ಜಿಲ್ಲೆಯಾಗಿದೆ. ಮುಖ್ಯ ಮಂತ್ರಿಗಳು ಪ್ರಶ್ನೆಗೆ ಉತ್ತರ ಕೊಡುತ್ತಾ 64ರಲ್ಲಿ ವಿಜಾಪುರಕ್ಕೆ ವಿದ್ಯುಚ್ಛಕ್ತಿಯನ್ನೊದಗಿಸುವುದಾಗಿ ಹೇಳಿದ್ದರು. ಆದರೆ 65ನೆಯ ಇಸವಿ ಮುಗಿಯುವುದರೊಳಗಾಗಿಯಾದರೂ ಅದು ಸಾಧ್ಯವಾಗುತ್ತದೆಯೋ ಇಲ್ಲವೋ

ತಿಳಿಯದು. ನೀರಾವರಿಗೆ ಮೊದಲು ವಿಜಾಪುರಕ್ಕೆ ವಿದ್ಯುಚ್ಛಕ್ತಿ ಬೇಕಾಗಿದೆ. ಈಗ ಲಿಫ್ಟ್ ಇರಿಗೇಷನ್‌ನಿಂದ ಮಾತ್ರ ವಿಜಾಪುರದಲ್ಲಿ ನೀರಾವರಿ ಮಾಡಲು ಸೌಲಭ್ಯವಿದೆ. ಅದಕ್ಕೆ ಪವರ್ ಬೇಕು. ನಾವು ವಿಜಾಪುರ ಜಿಲ್ಲೆಯ ಜನತೆ ಎರಡನೆಯವರ ಸಲುವಾಗಿ ತ್ಯಾಗಿಗಳಾಗಿದ್ದೇವೆ. ವಿಜಾಪುರಕ್ಕೆ ಯಾವ ಲಾಭವೂ ಆಗಿಲ್ಲ. ಆಲಮಟ್ಟಿ ಯೋಜನೆಯ ಜೊತೆಗೆ ಬಿಜಾಪುರ ಲಿಫ್ಟ್ ಇರಿಗೇಷನ್ ಕೂಡ ಷುರು ಮಾಡಿರಿ, ಲಿಫ್ಟ್ ಇರಿಗೇಷನ್ನಿಗೆ ಬೇಕಾದಷ್ಟು ವಿದ್ಯುಚ್ಛಕ್ತಿಯನ್ನು ಮೊದಲು ಒದಗಿಸಿ ಕಾವೇರಿಸಿ ನಂತರ ಬೇಕಾದ ರಾಜ್ಯಗಳಿಗೆ ಕೊಡಲು ನಮ್ಮ ಅಭ್ಯಂತರವೇನೂ ಇಲ್ಲ. ನಮ್ಮಲ್ಲಿ ಭೀಮಾ, ಡೋಣಿ, ಕೃಷ್ಣಾ, ಘಟಪ್ರಭಾ, ಮಲಪ್ರಭಾ ನದಿಗಳಿರುವುದರಿಂದ ಬೇಕಾದಷ್ಟು ನೀರಾವರಿ ಮಾಡಿಕೊಳ್ಳಲು ಲಿಫ್ಟ್ ಇರಿಗೇಷನ್‌ನಿಂದ ಅವಕಾಶವಿದೆ. ಹಾಗೆ ಮಾಡಿ ಬೇಕಾದರೆ ನಮಗೆ ಸಾಕಾಗುವಷ್ಟು ಪವರನ್ನು ಒದಗಿಸಿ ಇತರ ರಾಜ್ಯಗಳಿಗೆ ನಂತರ ಒದಗಿಸಬಹುದು. ನಮ್ಮನ್ನು ಮಾತ್ರ ಮರೆಯಬೇಡಿ. ವಿದ್ಯುಚ್ಛಕ್ತಿ, ವಿಜಾಪುರ ಜಿಲ್ಲೆಗೆ ಬಹಳ ಅವಶ್ಯವಿದೆ. ಎಲ್ಲ ನದಿಗಳ ಗುಂಟ ಈಗ ಲೈನ್ ಎಳೆಯಿರಿ. ಇದರಿಂದ ರೈತರು ನೀರನ್ನು ನದಿಗಳಿಂದ ಲಿಫ್ಟ್ ಇರಿಗೇಷನ್ ಮಾಡಲಿಕ್ಕೆ ಸಾಧ್ಯವಿದೆ. ಕಾರಣ ಅವರಿಗೆ ವಿದ್ಯುಚ್ಛಕ್ತಿಯನ್ನು ಮೊದಲು ಒದಗಿಸಿರಿ.

ಶ್ರೀ ಎನ್. ನಂಜೇಗೌಡ (ಕೃಷ್ಣರಾಜಪೇಟೆ).—ಸ್ವಾಮಿ, ಈ ದಿವಸ ನಮ್ಮ ಮುಂದೆ 22 ಕೋಟಿ 83 ಲಕ್ಷ 31 ಸಾವಿರ ರೂಪಾಯಿಗಳ ಡಿಮ್ಯಾಂಡನ್ನು ಮಂಡಿಸಿದ್ದಾರೆ. ಆದರೆ ಅದು ಯಾವುದಕ್ಕೂ ಸಾಲುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದು ಇವತ್ತು ದೇಶಕ್ಕೆ ಬಹಳ ಮುಖ್ಯವಾದ ಇಲಾಖೆ. ಇದಕ್ಕೆ ಎಷ್ಟು ಖರ್ಚುಮಾಡಿದರೂ ಸಾಲದು. ವ್ಯವಸಾಯವು ಸಂಪೂರ್ಣವಾಗಿ ಅಭಿವೃದ್ಧಿಯಾಗಿ ಸಾಕಾದಷ್ಟು ಆಹಾರ ಬೆಳೆಯಬೇಕಾದರೆ ಮನುಷ್ಯನಿಗೆ ಬೇಕಾದ ಸೌಕರ್ಯ ಕಲ್ಪಿಸಬೇಕಾದರೆ ಕಲ್ಪವೃಕ್ಷದಂತಿರುವ ಈ ಇಲಾಖೆಗೆ ಸಾಕಾದಷ್ಟು ಹಣ ಬೇಕು. ಹಾಗಿರುವಾಗ ಇದಕ್ಕೆ ಬಹಳ ಕಡಮೆ ಹಣ ಕೊಟ್ಟಿರುವುದನ್ನು ನೋಡಿ ವಿಷಾದವಾಗುತ್ತಿದೆ. ಅಲ್ಲದೆ ಕೆಲಸ ಮಾಡುವುದರಲ್ಲಿ ಕಾಲವಿಳಂಬ ಮಾಡುವುದರಿಂದ ಅಂದಾಜಿನ ಬೆಲೆಗೆ ಕೆಲಸಮಾಡುವುದಕ್ಕಾಗದೆ ನಾಲ್ಕು ವರ್ಷಗಳಲ್ಲಿ ಒಂದು ಲಕ್ಷ ರೂಪಾಯಿಗೆ ಮಾಡಿದ ಅಂದಾಜು ಒಂದು ಲಕ್ಷ 60 ಸಾವಿರವೋ ಏನೋ ಆಗುತ್ತದೆ, ನಿಧಾನ ಮಾಡಿದ ಹಾಗೆಲ್ಲಾ ಬೆಲೆ ಹೆಚ್ಚಿ ಅಂದಾಜು ತಿದ್ದುಪಡಿಯಾಗಬೇಕಾಗಿ ಕೆಲಸ ಸಲೀಸಾಗಿ ನಡೆಯುವುದೇ ದುಸ್ತರವಾಗುತ್ತಿದೆ. ಆದುದರಿಂದ ಧೈರ್ಯದಿಂದ, ನಿಧಾನಮಾಡದೆ ನೀರಾವರಿ ಕೆಲಸಗಳನ್ನು ಬೇಗ ಮುಂದುವರೆಸಬೇಕು. ಹಣ ಸಾಲದ್ದರಿಂದ ಇತರೆ ಇಲಾಖೆಗಳ ಖರ್ಚನ್ನು ಕಡಮೆಮಾಡಬಹುದು, ಎನ್. ಇ. ಎಸ್. ಮುಂತಾದ ಅನಾವಶ್ಯಕವಾದ ಇಲಾಖೆಗಳನ್ನು ತೆಗೆದು ಅದಕ್ಕೆ ವಿನಿಯೋಗವಾಗುವ ಹಣವನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಂಡು ಹೆಚ್ಚು ನೀರಾವರಿ ಕೆಲಸಮಾಡಬೇಕು.

ರಸ್ತೆ ವಿಷಯದಲ್ಲಿ ಒಂದು ಸಲಹೆ. ಸಣ್ಣ ಸೇತುವೆ ಕಟ್ಟಬೇಕಾದರೆ ಕಲ್ಲು ಕಟ್ಟಡಕ್ಕೆ ಒಂದೂವರೆ ಸಾವಿರದಿಂದ ಮೂರು ಸಾವಿರ ರೂಪಾಯಿಗಳವರೆಗೆ ಖರ್ಚು ಬರುವುದರಿಂದ ಸಿಮೆಂಟ್ ಪೈಪು ಉಪಯೋಗಿಸಿ 500-600 ರೂಪಾಯಿಗಳಲ್ಲಿ ಕೆಲಸ ಮುಗಿಸುವುದು ಒಳ್ಳೆಯದು. ಎಲ್ಲಿ 9 ಅಂಗುಲದ ಪೈಪನ್ನು 3 ಅಡಿ ವರೆಗೆ ಹಾಕಿದರೆ ಸಾಕೋ ಅಂಥ ಕಡೆ ಪೈಪನ್ನು ಉಪಯೋಗಿಸಿ ಕೆಲಸಮಾಡಿದರೆ ಎರಡೂವರೆ ಸಾವಿರ ರೂಪಾಯಿಗಳ ಅಂದಾಜುಮಾಡಿ ಹಣ ವ್ಯರ್ಥಮಾಡುವುದು ತಪ್ಪುತ್ತದೆ. ಸಿಮೆಂಟ್ ಪೈಪುಗಳನ್ನು ಹಾಕುವುದರಿಂದ ಕೇವಲ 600 ರೂಪಾಯಿಗಳಿಗೆ ಒಂದು ಸೇತುವೆ ಆಗುತ್ತದೆ. ಇದರಿಂದ ಹೆಚ್ಚಿನ ಸೇತುವೆಗಳನ್ನು ಕಟ್ಟುವುದಕ್ಕೆ ನೆರವಾಗುತ್ತದೆ.

5-00 P.M.

ವಿದ್ಯುಚ್ಛಕ್ತಿಯು ಜನತೆಗೆ ಜೀವನಾಡಿ ಇದ್ದ ಹಾಗೆ. ಇದನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಿಲ್ಲ. ನೀರಾವರಿಗೆ ಸಾಕಷ್ಟು ಪ್ರಾಧಾನ್ಯತೆಯನ್ನು ಕೊಡುತ್ತಿಲ್ಲ. ಒಂದು ಊರಿಗೆ ದೀಪ ಬೇಕು, ಬೀದಿ ದೀಪ ಬೇಕು ಎನ್ನುವುದರ ಕಡೆಗೆ ಗಮನ ಸೆಳೆಯುತ್ತಿದೆ. ನೀರಾವರಿ ಕಾರ್ಯಗಳಿಗೆ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಂಡರೆ ಹೆಚ್ಚಿನ ಪ್ರಯೋಜನವನ್ನು ಪಡದುಕೊಳ್ಳಬಹುದು ಎನ್ನುವ ಭಾವನೆ ಕಡಮೆಯಾಗಿದೆ. ಸರ್ಕಾರದವರು ಪ್ರಚಾರ ಮತ್ತು ಅಲ್ಲಲ್ಲಿ ಮಾರ್ಗದರ್ಶನ ಮಾಡಿ ರೈತನಿಗೆ ಆಹಾರದ ವಿಚಾರದಲ್ಲಿ ಕಣ್ಣು ತೆರೆಸುವ ಪಕ್ಷದಲ್ಲಿ, ಲಿಫ್ಟ್ ಇರಿಗೇಷನ್‌ನಿಂದ ದೇಶದಲ್ಲಿರುವ ಆಹಾರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಒಂದು ಮಾರ್ಗವಾಗುತ್ತದೆ. ವಿದ್ಯುಚ್ಛಕ್ತಿಯನ್ನು ಕೊಡುವುದರಲ್ಲಿ ಹಿಡಿದಿರುವ ಬಿಗಿ ಮುಷ್ಟಿಯನ್ನು ಸ್ವಲ್ಪ ಸಡಿಲಿಸಬೇಕು. ಈಗ ಡೆವಲಪ್‌ಮೆಂಟ್ ಲೈನ್ ಹಾಕಬೇಕಾದರೆ 90 ರೂಪಾಯಿ ಕಟ್ಟಬೇಕು, ಅಪ್ಲಿಕೇಷನ್ ಹಾಕಬೇಕು, ಬಾವಿಯನ್ನು ತೋಡಿಸಿರಬೇಕು, ಪಪ್‌ಸೆಟ್ ತೆಗೆದುಕೊಂಡು ಇಟ್ಟುಕೊಳ್ಳಬೇಕು. ಆ ಮೇಲೆ ಲೈನ್

(ಶ್ರೀ ಎನ್. ನಂಜೇಗೌಡ)

ಹಾಕುತ್ತೇವೆ ಎನ್ನುವ ನಿರ್ಬಂಧವಿದೆ. ಲೈನ್ ಹಾಕದೆ ಇದ್ದ ಪಕ್ಷದಲ್ಲಿ ಬಡತನದಲ್ಲಿರುವವರು ಪಂಪ್ ಸೆಟ್ ತೆಗೆದಿಟ್ಟುಕೊಂಡು, ಅದಕ್ಕೆ ಮನೆಯನ್ನು ಕಟ್ಟಿ 90 ರೂಪಾಯಿಗಳನ್ನು ಅಪ್ಲಿಕೇಷನ್ ಜೊತೆಯಲ್ಲಿ ಕೊಡುವುದು ಕಷ್ಟವಾಗುತ್ತದೆ. ಈ ನಿರ್ಬಂಧದಿಂದ ಕೆಲಸಗಳಿಗೆ ಅಡ್ಡಿಯಾಗುತ್ತದೆ. ಡೆವಲಪ್‌ಮೆಂಟ್ ಲೈನ್ ಹಾಕಲು ಈಗ ಜಾರಿಯಲ್ಲಿರುವ ನಿಯಮಗಳನ್ನು ಸಡಿಲಮಾಡಿ ನೀರಾವರಿಗೆ ಹೆಚ್ಚಿನ ಸೌಕರ್ಯಗಳನ್ನು ಕೊಡಬೇಕು. ಇದರಿಂದ ಆಹಾರ ಉತ್ಪತ್ತಿಯನ್ನು ಹೆಚ್ಚು ಮಾಡುವುದಕ್ಕೂ ಅವಕಾಶವಾಗುತ್ತದೆ.

ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಹೇಮಗಿರಿ ಎಡನಾಲೆ ಮತ್ತು ಬಲನಾಲೆ, ಮಂದಗೆರೆ ನಾಲೆ· ಶ್ರೀರಾಮ ದೇವರ ನಾಲೆ ಈ ನಾಲೆಗಳಲ್ಲಿ ಏನಾಗಿದೆ ಎಂದರೆ, ಹೇಮಗಿರಿ ನಾಲೆಯಲ್ಲಿ ಒಂದು ಕ್ಯೂಸೆಕ್ ನೀರಿಗೆ 12 ಎಕರೆ, ಮಂದಗೆರೆ ನಾಲೆಯಲ್ಲಿ 16 ಎಕರೆ, ಹೀಗೆ ನೀರು ಉಪಯೋಗವಾಗುತ್ತದೆ. ವಿಶ್ವೇಶ್ವರಯ್ಯ ನಾಲೆಯಲ್ಲಿ 40 ಎಕರೆಗೆ ನೀರು ಉಪಯೋಗವಾಗುತ್ತದೆ. ಈ ನಾಲೆಗಳಲ್ಲಿ ಇಷ್ಟು ಹೆಚ್ಚು ಪ್ರಮಾಣದಲ್ಲಿ ನೀರನ್ನು ಉಪಯೋಗಿಸದೆ ಬಿಡುವುದು ಸರಿಯಲ್ಲ. ಈಗಿನ ಆಹಾರಾಭಾವದ ಕಾಲದಲ್ಲಿ ನೀರನ್ನು ಬಹಳ ಬಂದೋಬಸ್ತಾಗಿ, ಬಿಗಿ ಮುಷ್ಟಿಯಿಂದ ಹಿಡಿದು ಉಪಯೋಗಿಸಿದಲ್ಲಿ ಈಗ ಆಗಿರುವುದಕ್ಕಿಂತ ಮೂರರಷ್ಟು ಜಮೀನು ನೀರಾವರಿಯಾಗುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ನಾಲೆಯನ್ನು ಅಭಿವೃದ್ಧಿ ಮಾಡಿದರೆ ಒಂದು ಎಕರೆಗೆ 400 ರೂಪಾಯಿಗಳಿಗಿಂತ ಕಡಮೆ ವೆಚ್ಚದಲ್ಲಿ ಹೆಚ್ಚು ಭೂಮಿಗೆ ನೀರಾವರಿ ಸೌಕರ್ಯವನ್ನು ಒದಗಿಸಬಹುದು. ಇಂಥ ಯೋಜನೆಯನ್ನು ಆದಷ್ಟು ಜಾಗ್ರತೆ ತೆಗೆದುಕೊಂಡು ನೀರಾವರಿ ಕೆಲಸಗಳನ್ನು ಹೆಚ್ಚು ಮಾಡಬೇಕೆಂದು ಹೇಳುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಹಿಂದೆ ಸರ್ವೆ ಮಾಡಿರುವ ಪ್ರಕಾರ 45 ಸಾವಿರ ಎಕರೆಯನ್ನು ತರೀ ಮಾಡುವುದಕ್ಕೆ ಅವಕಾಶವಿದೆ. ಈಗ 16 ಸಾವಿರ ಎಕರೆ ತರಿಯಾಗಿದೆ. ಉಳಿದ 29 ಸಾವಿರ ಎಕರೆಯನ್ನು ತರಿ ಮಾಡುವುದಕ್ಕೆ ಅವಕಾಶವಾದೀತು. ಯಾವ ರೀತಿ ಮಾಡಿದರೆ ನೀರಿನ ವಸತಿ ಸೌಕರ್ಯ ಜಾಸ್ತಿಯಾಗಿ ಸಿಕ್ಕುತ್ತದೆ ಎನ್ನುವುದಕ್ಕೆ ಪ್ರಾಧಾನ್ಯತೆಯನ್ನು ಕೊಟ್ಟು ಕೆಲಸವನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳುವ ಹಾಗೆ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ (ಬಾಗೇವಾಡಿ).—ಮಾನ್ಯ ಸಭಾಪತಿಯವರೇ, ನಮ್ಮ ಮುಂದೆ ಇರುವ ಬೇಡಿಕೆಗಳನ್ನು ಅನುಮೋದಿಸುತ್ತ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಲೋಕೋಪಯೋಗಿ ಇಲಾಖೆ ಎಂದರೆ ದೇಶದಲ್ಲಿ ಕಲ್ಪವೃಕ್ಷ ಇದ್ದ ಹಾಗೆ. ಅದಕ್ಕೆ ಸರ್ಕಾರ ಹೆಚ್ಚಿನ ಹಣವನ್ನು ಕೊಟ್ಟು ನಮ್ಮ ರಾಜ್ಯದ ಅಭಿವೃದ್ಧಿಯಾಗುವುದಕ್ಕೆ ಹೆಚ್ಚಿನ ಗಮನಕೊಡಬೇಕು ಎಂದು ಹೇಳುತ್ತೇನೆ.

ಹೆದ್ದಾರಿ ನಂಬರ್ 13—ಬಿಜಾಪುರ-ಚಿತ್ರದುರ್ಗ-ಬೆಂಗಳೂರು ರಸ್ತೆ ಮುಖ್ಯವಾದುದು. ನಾಲ್ಕು ವರ್ಷಗಳಿಂದಲೂ ಹೇಳಿದರೂ ಇದರ ಕಡೆ ಸರ್ಕಾರ ಗಮನಕೊಡುತ್ತಿಲ್ಲ. ಈ ರಸ್ತೆಯನ್ನು ಪೂರ್ತಿ ಮಾಡಿದರೆ ಬಿಜಾಪುರದಿಂದ 80 ಮೈಲಿ ದೂರ ಕಡಮೆ ಆಗಿ ಲಗು ಮುಟ್ಟುತ್ತೇವೆ ಎನ್ನುವ ಆಲೋಚನೆ ಇತ್ತು. ಮೂರನೆಯ ಪಂಚವಾರ್ಷಿಕ ಯೋಜನೆ ಮುಗಿಯುತ್ತ ಬಂದರೂ ಕೆಲಸವಾಗಿಲ್ಲ, ಎಲ್ಲಿ ನಿಂತಿದೆ ಎನ್ನುವುದು ತಿಳಿಯುವುದಿಲ್ಲ. ಈ ಮಾರ್ಗದಿಂದ 80 ಮೈಲು ಕಡಮೆ ಆಗುವುದರಿಂದ ಮಾನ್ಯಮಂತ್ರಿಗಳು ಇತ್ತಕಡೆ ಹೆಚ್ಚಿನ ಮನಸ್ಸು ಕೊಟ್ಟು ಬಿಜಾಪುರದಿಂದ ಬೆಂಗಳೂರಿಗೆ ಲಗು ಬರುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಈಗ ಎಲ್ಲ ಜಿಲ್ಲೆಗಳಿಂದಲೂ ಬೆಂಗಳೂರಿಗೆ ನೇರವಾಗಿ ಬಸ್ ಇದೆ. ಬಿಜಾಪುರದಿಂದ ಬರಲಿಕ್ಕೆ ಬಸ್ ಇಲ್ಲ. ರಾಷ್ಟ್ರೀಕರಣವಾದ ಮೇಲೆ ನಮಗೆ ಬಸ್ ಅನುಕೂಲ ಮಾಡಿಕೊಡುತ್ತೇವೆ ಎಂದೂ, ಅಲ್ಲಿಂದ ರಾತ್ರಿ ಹೊರಟರೆ ಇಲ್ಲಿಗೆ ಎರಡನೆ ದಿನ 11-12 ಗಂಟೆಗೆ ಬರುವಂತೆ ಮಾಡಿಕೊಡುತ್ತೇವೆಂದೂ ಮಾನ್ಯ ಸಾರಿಗೆ ಮಂತ್ರಿಗಳು ಹೇಳಿರುವುದರ ಕಡೆಗೆ ಹೆಚ್ಚಿನ ಲಕ್ಷ್ಯಕೊಟ್ಟು ಕೇಂದ್ರದಿಂದ ಹಣವನ್ನು ಪಡೆದು ಕೆಲಸವನ್ನು ಮಾಡಿಕೊಡಬೇಕು ಎಂದು ಹೇಳುತ್ತೇನೆ.

ನಮ್ಮ ಕಡೆ ಬರಗಾಲ ರಸ್ತೆಗಳನ್ನು ತೆಗೆದುಕೊಂಡರು. ಈಗ ಅದಕ್ಕೆ ತಂದೆ ತಾಯಿ ಇಲ್ಲ ಎನ್ನುವಂತಾಗಿದೆ. 25 ಮೈಲು ರಸ್ತೆಯನ್ನು ಮಾಡಿ ಎರಡು ವರ್ಷ ಆಯಿತು. ಆ ರೋಡ್‌ಗಳು ತಾಲ್ಲೂಕು ಬೋರ್ಡ್‌ನವರ ವತಿಯಿಂದ ಆಗಬೇಕು, ಪಿ.ಡಬ್ಲ್ಯು.ಡಿ. ಆಗಬೇಕು ಎಂದು ಹೇಳುತ್ತಾರೆ. ತಾಲ್ಲೂಕು ಬೋರ್ಡ್ ಆಗಲಿ ಪಿ.ಡಬ್ಲ್ಯು.ಡಿ. ಆಗಲೀ ಅವುಗಳನ್ನು ನೋಡಲಿಕ್ಕೆ ಸಾಧ್ಯವಿಲ್ಲ.

ಮುಳುವಾಡಿ—ಆಲಮಟ್ಟಿ ರೋಡ್ ಇದೆ. ಅದು ಮುಂದೆ ಹತ್ತು ಮೈಲಿ ಮಾಡುವುದು ಉಳಿದಿದೆ. ಹೋದ ವರ್ಷ ಐದು ಮೈಲಿ ತೆಗೆದುಕೊಂಡರು. ಇನ್ನು ಉಳಿದಿರುವ ಐದು ಮೈಲಿಯನ್ನು ತೆಗೆದುಕೊಂಡು ಮುಗಿಸಬೇಕು. ಇದು ಒಂದು ದೊಡ್ಡ ರಸ್ತೆ. ಆಲಮಟ್ಟಿ ಪ್ರಾಜೆಕ್ಟಿಗೆ ಇದರಿಂದ ಅನುಕೂಲವಾಗುತ್ತದೆ.

ನಮ್ಮ ಜಿಲ್ಲೆಯಲ್ಲಿ ಮಲಘಾನ ಆಲಮಟ್ಟಿ ರಸ್ತೆಯನ್ನು ಮಾಡಲು ಲೋಕೋಪಯೋಗಿ ಇಲಾಖೆಯವರು ತೆಗೆದುಕೊಂಡಿದ್ದಾರೆ. ಈಗ ಎರಡು ಫರ್ಲಾಂಗ್ ಚಿಕ್ಕ ಅಸಂಗಿ ಹತ್ತಿರ ನಡುವೆ ಉಳಿದಿದೆ. 20 ಮೈಲಿ ರಸ್ತೆ ಆಗಿದೆ. ಇದನ್ನು ಮುಗಿಸಿದರೆ 22 ಮೈಲು ರಸ್ತೆ ಆಗುತ್ತದೆ ಮತ್ತು ಆಲಮಟ್ಟಿಗೆ ಹೋಗಲು ಅನುಕೂಲವಾಗುತ್ತದೆ. ಇದಕ್ಕೆ ಟಾರ್ ಕೂಡ ಮಾಡಬೇಕೆಂದು ಹೇಳುತ್ತೇನೆ.

ನೀರಾವರಿ ವಿಷಯ ಹೇಳಬೇಕಾದರೆ ಆಲಮಟ್ಟಿ ಯೋಜನೆ ಆದರೂ ಬಿಜಾಪುರ ಮತ್ತು ಬಾಗೇವಾಡಿಗೆ ನೀರು ಬರುವುದಕ್ಕೆ ಶಕ್ಯವಿಲ್ಲ. ಅದರ ದೆಸೆಯಿಂದ ಸಿಂದಗಿ, ಇಂದಗಿ, ತಾಲ್ಲೂಕುಗಳಿಗೆ ನೀರು ಹೋಗುತ್ತದೆ. ಆದುದರಿಂದ ಕೆರೆ ಕೆಲಸವನ್ನು ಹೆಚ್ಚಾಗಿ ಬಾಗೇವಾಡಿ ಮತ್ತು ಬಿಜಾಪುರ ತಾಲ್ಲೂಕುಗಳಲ್ಲಿ ಮಾಡಬೇಕು. ನಮ್ಮದು ಒಳ್ಳೆಯ ಭೂಮಿ, ಸ್ವರ್ಣಭೂಮಿ ಇದೆ. ಅಲ್ಲಿ ಕರೀ ಮಣ್ಣು ಭೂಮಿ ಇರುವುದರಿಂದ ಮಳೆ ಬಂದರೆ ಒಂದು ಸಲ ಬೆಳೆದರೆ ಇಡೀ ಮೈಸೂರು ರಾಜ್ಯದಲ್ಲಿ ಬರಗಾಲವನ್ನು ಹೋಗಲಾಡಿಸುವಂಥ ಭೂಮಿ ಇದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಎಂಟು ವರ್ಷಗಳಿಂದಲೂ ಹೀಗೆಯೇ ಹೇಳುತ್ತಿದ್ದಾರೆ. ಅವರು ಬೆಳೆಯಲಿಲ್ಲ, ನಮಗೆ ಕೊಡಲಿಲ್ಲ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ನಮ್ಮಲ್ಲಿ ನೀರಾವರಿ ಬಹಳ ಕಡಮೆ ಇದೆ. ನಮ್ಮ ಕಡೆ ಮಳೆ ಕಡಮೆ. ಅಲ್ಲಿ ಬರಗಾಲ ಹೋಗಬೇಕು ಎಂದರೆ ಚಿಕ್ಕ ನೀರಾವರಿ ಕೆಲಸಗಳನ್ನು ಮಾಡಿದರೆ ಒಳ್ಳೆಯದಾಗುತ್ತದೆ. ಸಣ್ಣ ಸಣ್ಣ ಕೆರೆಗಳನ್ನು ಕಟ್ಟಬೇಕು, ಮತ್ತು ಇತರ ನೀರಾವರಿ ಕೆಲಸಗಳಿಗೆ ಗಮನಕೊಡಬೇಕು. ನಮ್ಮಲ್ಲಿ ಕೆರೆಗಳು ಬಹಳ ಕಡಮೆ. 20 ಮೈಲಿಗೆ ಒಂದು ಕೆರೆಯೂ ಇಲ್ಲ. ಬಿಜಾಪುರ ಜಿಲ್ಲೆಗೆ ಸಣ್ಣ ನೀರಾವರಿ ವಿಚಾರದಲ್ಲಿ ಹೆಚ್ಚು ಗಮನಕೊಡಬೇಕು. ಬಾಗೇವಾಡಿ, ಮತ್ತಗಿ, ಯರ್ನಾ, ಕುಪಕಟ್ಟಿ, ಮಸೂಲೆ, ಹೋನ್ನಾಳ, ಈ ಕೆರೆಗಳಿಗೆ ಎಸ್ಟಿಮೇಟಾಗಿದೆ. ಅವುಗಳನ್ನು ತೆಗೆದುಕೊಳ್ಳಬೇಕು ಮತ್ತು ಬಾಗೇವಾಡಿ ತಾಲ್ಲೂಕಿಗೆ ಅನುಕೂಲ ಮಾಡಿಕೊಡಬೇಕು.

ಕೊಲ್ಹಾರದಲ್ಲಿ ಒಂದು ದೊಡ್ಡ ಕೆರೆ ಇದೆ. ಆ ಕೆರೆಯ ಕಾಮಗಾರಿ ಪೂರೈಕೆ ಬಗ್ಗೆ ಹಿಂದೆ ಲೋಕೋಪಯೋಗಿ ಶಾಖಾ ಸಚಿವರಾಗಿದ್ದಂಥ ಶ್ರೀಮಾನ್ ಚನ್ನಬಸಪ್ಪನವರು ಒಂದು ಆಶ್ವಾಸನೆ ಕೊಟ್ಟಿದ್ದರು. ಅದರಿಂದ 1,500 ಎಕರೆ ಭೂಮಿ ನೀರಾವರಿಗೆ ಬರುವುದಾಗಿದೆ. ಅದು ಒಂದು ದೊಡ್ಡಕೆರೆ. ಅದನ್ನು ಈಗಲಾದರೂ ವಿಚಾರಮಾಡಿ ಜಾಗ್ರತೆ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ರಹದಾರಿ ವಿಚಾರ. ಬಾಗಲಕೋಟೆ-ಬಿಜಾಪುರ ರಹದಾರಿ ಮಳೆಗಾಲದಲ್ಲಿ ಬಂದ್ ಆಗುತ್ತದೆ. ಅಲ್ಲಿ ಒಂದು ಸೇತುವೆಯೂ ಇಲ್ಲ. ಅಲ್ಲೊಂದು ಸೇತುವೆಯನ್ನು ಮಾಡಿಕೊಟ್ಟರೆ ರಾಜಧಾನಿಯಾದ ಬೆಂಗಳೂರಿಗೆ ಬಿಜಾಪುರದಿಂದ ಬಸ್ ಸಂಚಾರಕ್ಕೆ ಅನುಕೂಲ ಮಾಡಿದಂತಾಗುತ್ತದೆ. ಕೋಲಾರ ನಡುವೆ ಆ ಸೇತುವೆಯನ್ನು ಮಂಜೂರು ಮಾಡಬೇಕು.

ಇನ್ನು ವಿದ್ಯುಚ್ಛಕ್ತಿ ವಿಚಾರ. ನಮ್ಮ ಕಡೆಗಳಲ್ಲಿ ಇದುವರೆಗೆ ಖಾಸಗೀ ವಿದ್ಯುಚ್ಛಕ್ತಿ ವ್ಯವಸ್ಥೆ ಇತ್ತು. ಎಲ್ಲಿ ನೋಡಿದರೂ ಅಂತಹ ದೀಪಗಳೇ. ಇತ್ತೀಚೆಗೆ ಸರ್ಕಾರದವರು ದೀಪದ ವ್ಯವಸ್ಥೆಯನ್ನು ಕೈಗೊಂಡರು. ಆದರೂ ಇನ್ನೂ ಅದೇ ಪರಿಸ್ಥಿತಿ ಇದೆ. ಮೆಷಿನರಿಗಳನ್ನು ತಂದು ಕುಂಡಿರಿಸಿದ್ದಾರೆ. ಏನೂ ಪ್ರಯೋಜನವಿಲ್ಲ. ದೊಡ್ಡ ದೊಡ್ಡ ಮೆಷಿನನ್ನು ತಂದು ವಿದ್ಯುಚ್ಛಕ್ತಿ ವ್ಯವಸ್ಥೆ ಮಾಡಿದ್ದಾರೆ. ಅಂತಹ ವಿದ್ಯುಚ್ಛಕ್ತಿಯಿಂದ ರಾತ್ರಿ ಹೊತ್ತು ಪುಸ್ತಕ ಓದುವುದಕ್ಕೇ ಶಕ್ಯವಿಲ್ಲ. ತಂತಿಗಳಲ್ಲಿ ಎಷ್ಟೋ ವಿಧವಾದುವು ಬಂದಿವೆ. ಅವುಗಳಲ್ಲಿ ಉತ್ತಮವಾದುದನ್ನು ನಮ್ಮ ತಾಲ್ಲೂಕಿನಲ್ಲಿ ಹಾಕಬೇಕು. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ತಿಯಾಗಿ ನಮ್ಮ ತಾಲ್ಲೂಕಿಗೆ ಕೊಡುತ್ತೇವೆಂದು ಹೇಳಿದ್ದಾರೆ. ಈಗಾಗಲೇ ಬಾಗೇವಾಡಿಯಲ್ಲಿ ಕೆಲಸ ನಡೆಯುತ್ತಾ ಇದೆ. ಮೊದಲು ಬಿಜಾಪುರ ಜಿಲ್ಲೆಗೆ ಸಾಕಷ್ಟು ವಿದ್ಯುಚ್ಛಕ್ತಿಯನ್ನು ಕೊಟ್ಟು ನಂತರ ಬೇರೆ ಕಡೆಗಳಿಗೆ ಕೊಡಬೇಕು. ಒಟ್ಟಿನಲ್ಲಿ ವಿದ್ಯುಚ್ಛಕ್ತಿಯನ್ನು ಮೊದಲು ಬಿಜಾಪುರದ ಜಿಲ್ಲೆಗೆ ಕೊಡಿ. ನಂತರ ಗೋವಾ ಮತ್ತು ಇತರ ಸ್ಥಳಗಳಿಗೆ ಅದನ್ನು ಕೊಡಿ.

ಇನ್ನು ಆಡಳಿತದ ವಿಷಯ. ಇದರಲ್ಲಿ ನಮಗೆ ಬಹಳ ತೊಂದರೆ ಇದೆ. ಮಂತ್ರಿಗಳು ಎಲ್ಲಾ ಕಡೆಗಳಿಗೂ ಬರುತ್ತಾರೆ. ಭೇಟಿ ಮಾಡುತ್ತಾರೆ. ಅನೇಕ ಆಫೀಸರುಗಳನ್ನು ಕಾಣುತ್ತಾರೆ.

(ಶ್ರೀಮತಿ ಸುಶೀಲಾಬಾಯಿ ಹೀರಾಚಂದ ಷಾ)

ಆದರೆ ನಾವು ಫೋನ್ ಮಾಡಿದರೆ ಅಧಿಕಾರಿಗಳೂ ಸಹ ಸಿಕ್ಕದೆ ಅವರು ಕಾಫಿಗೆ ಹೋಗಿದ್ದಾರೆಂದು ತಿಳಿಸುತ್ತಾರೆ. ಆಫೀಸರುಗಳನ್ನು ಕೇಳೋಣವೆಂದರೆ ಅವರು ವಿಧಾನಸೌಧಕ್ಕೆ ಹೋಗಿದ್ದಾರೆಂದು ಹೇಳಿಬಿಡುತ್ತಾರೆ. ಅಲ್ಲಿ ಯಾವುದೋ ಒಂದು ಮೀಟಿಂಗ್‌ನಲ್ಲಿ ಹಾಜರಾಗುವುದಕ್ಕೆ ಹೋಗಿದ್ದಾರೆಂದು ಹೇಳುತ್ತಾರೆ. ಹೀಗಾದರೆ ಹೆಣ್ಣು ಮಕ್ಕಳು ಒಬ್ಬೊಬ್ಬ ಆಫೀಸರನ್ನು ಭೇಟಿಯಾಗುವುದು ಹೇಗೆ? ಆದ್ದರಿಂದ ಇದಕ್ಕಾಗಿ ಒಬ್ಬ ಸ್ಪೆಷಲ್ ಆಫೀಸರನ್ನು ಏರ್ಪಾಡು ಮಾಡಿ. ಆಫೀಸರುಗಳು ಆಫೀಸಿನಲ್ಲಿ ಯಾವ್ಯಾವ ಟೈಂನಲ್ಲಿರುತ್ತಾರೆ, ಕಾಫಿಗೆ ಯಾವಾಗ ಹೋಗುತ್ತಾರೆ, ಮತ್ತೆ ಇನ್ನು ಎಲ್ಲೆಲ್ಲಿಗೆ ಯಾವ್ಯಾವ ಕಾಲದಲ್ಲಿ ಹೋಗುತ್ತಾರೆಂಬುದನ್ನು ತಿಳಿಸುವುದಕ್ಕಾಗಿ ಅವರನ್ನು ನೇಮಕ ಮಾಡಬೇಕು. ಆಡಳಿತದ ವಿಷಯದಲ್ಲಿ ಸ್ವಲ್ಪವೂ ಸಡಿಲ ಆಗದ ಹಾಗೆ ಸರ್ಕಾರದವರು ಸರಿ ಮಾಡಬೇಕು.

ಶ್ರೀ ಸಂಜೀವನಾಥ ಐಕಳ.—ಹೆಣ್ಣು ಮಕ್ಕಳು ತಿರುಗಾಡಲಿಕ್ಕೆ ಹತ್ತಿದ್ದಾರೆಯೇ ?

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಅವೆಲ್ಲವನ್ನೂ ನನ್ನ ಭಾಷಣವಾದ ಮೇಲೆ ಕೇಳಲಿ.

ಇನ್ನು ಪಬ್ಲಿಕ್ ಸರ್ವಿಸ್ ಕಮೀಷನ್ ಎಂದು ಮಾಡಿದ್ದಾರೆ. ಹಿಂದೆ ನಾನು ಭಾಷಣ ಮಾಡಿದಾಗಲೂ ಈ ಕಮಿಟಿಯೊಳಗೆ ಒಬ್ಬ ಹೆಣ್ಣು ಮಗಳಿಗೂ ಛಾನ್ಸ್ ಕೊಟ್ಟಿಲ್ಲವೆಂದು ಹೇಳಿದ್ದೆ. ಈ ಸಾರಿಯೂ ಅದಕ್ಕೆ ಹೆಣ್ಣುಮಕ್ಕಳಿಗೆ ಛಾನ್ಸ್‌ಕೊಟ್ಟಿಲ್ಲ. ಮೈಸೂರು ಸಂಸ್ಥಾನದಲ್ಲಿ ಇನ್ನು ಮುಂದೆ ರಾಜ್ಯಾಡಳಿತವನ್ನು ನಮ್ಮ ಕೈಲಿ ಕೊಡುತ್ತೇವೆ. ಅದಕ್ಕೆ ತಕ್ಕ ವ್ಯವಸ್ಥೆ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಅದಾದರೂ ಸರಿಯೇ ಅಥವಾ ಇಲ್ಲದಿದ್ದರೆ ನಮ್ಮ ಮಟ್ಟವೇನೂ ಹೋಗುವುದಿಲ್ಲ. ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಶೇ. 51ರಷ್ಟಾದರೂ ಹೆಣ್ಣುಮಕ್ಕಳಿಗೆ ಅವಕಾಶವಿರಬೇಕು. ಆ ಒಂದು ಕಮಿಟಿಯೊಳಗೆ ಒಬ್ಬ ಹೆಣ್ಣುಮಗಳನ್ನು ಹಾಕದೇ ಇದ್ದರೆ ಹೇಗೆ ನ್ಯಾಯ ? ಆದ್ದರಿಂದ ಮುಂದಿನ ಸಾರಿಯಾದರೂ ಆ ಕಮಿಟಿಯೊಳಗೆ ಅರ್ಧ ಭಾಗವಾದರೂ ಹೆಣ್ಣು ಮಕ್ಕಳಿಗೆ ಅವಕಾಶ ಮಾಡಿಕೊಡಬೇಕೆಂದೂ ಅದರಲ್ಲಿ ಅವರಿಗೆ ಪೂರ್ಣಾಡಳಿತ ಅಧಿಕಾರವಿರಬೇಕೆಂದೂ ಸರ್ಕಾರದವರಿಗೆ ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಅಧ್ಯಕ್ಷರೇ, ನಮ್ಮ ಮುಂದಿರತಕ್ಕ ಬೇಡಿಕೆಗಳ ವಿಚಾರದಲ್ಲಿ ಕೆಲವು ಮಾತುಗಳನ್ನಾಡುವುದಕ್ಕೆ ಅವಕಾಶವನ್ನು ಬೇಡುತ್ತೇನೆ. ಸಾಮಾನ್ಯವಾಗಿ ಆಡಳಿತದ ವಿಚಾರದಲ್ಲಿ ಲೆಕ್ಕಕ್ಕೇನೇ ಎಲ್ಲಾ ಕಡೆಯೂ ಬಹಳ ಸಿಬ್ಬಂದಿಯನ್ನು ಇಟ್ಟುಕೊಂಡಿದ್ದಾರೆ. ಆದರೆ ನಮಗೆ ಅನುಕೂಲವಾದಂಥ ರೀತಿ ನೀತಿಯಲ್ಲಿ ಈ ಸಿಬ್ಬಂದಿ ಕೆಲಸ ಮಾಡುತ್ತಾ ಇಲ್ಲ. ಇದಕ್ಕೆ ನಾನಾ ಕಾರಣಗಳಿವೆ. ಅದರಲ್ಲಿ ರಾಜಕೀಯ ಕಾರಣಗಳಿಗಾಗಿ ಸುಸೂತ್ರವಾಗಿ ಅಧಿಕಾರ ನಡೆಸಿಕೊಂಡು ಹೋಗತಕ್ಕ ಅಧಿಕಾರಿಗಳ ಒಂದು ಭಯಕ್ಕೋಸ್ಕರವಾಗಿ ಆಡಳಿತ ಪಕ್ಷದ ಸದಸ್ಯರ ಮಾತಿಗೆ ಗಮನ ಕೊಟ್ಟು ಅನೇಕ ಅನ್ಯಾಯ ಪರಂಪರೆಗಳಾಗಿರತಕ್ಕದ್ದು ಬಹಳವಾಗಿವೆ. ಇದೆಲ್ಲಾ ಈ ದೇಶದ ಪ್ರತಿಯೊಬ್ಬ ಪ್ರಜೆಗೂ ಗೊತ್ತಿದೆ. ಸರ್ಕಾರ ಇದನ್ನು ಸೂಕ್ಷ್ಮವಾಗಿ ವಿಚಾರ ಮಾಡಿದರೆ ಅವರಿಗೂ ಇದು ಅರ್ಥವಾಗಿರಬೇಕೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಮೊನ್ನೆ ತಾನೆ ಆರ್ಥಿಕ ಮಂತ್ರಿಗಳು ಉತ್ತರ ಕೊಡುತ್ತಾ ಈಗಿರತಕ್ಕ ಸಿಬ್ಬಂದಿವರ್ಗ ಬಹಳ ಜಾಸ್ತಿ ಇದೆ. ಇದನ್ನು ಕಡಿಮೆ ಮಾಡುವ ಏರ್ಪಾಡು ಮಾಡುತ್ತೇವೆಂದು ಹೇಳಿದರು. ಅದನ್ನು ಅವರು ಹೇಗೆ ಮಾಡುತ್ತಾರೋ ಎಂಬುದನ್ನು ನಾವು ಕಾದು ನೋಡೋಣ. ಪ್ರತಿಯೊಂದು ಜಿಲ್ಲಾ ಮುಖ್ಯ ಸ್ಥಳಗಳಲ್ಲಿ ಜಿಲ್ಲಾಧಿಕಾರಿಗಳಿರುತ್ತಾರೆ. ಅವರಿಗೆ ಐದಾರು ಜನ ಅಸಿಸ್ಟೆಂಟ್ಸ್. ಇಷ್ಟು ಜನರು ಇದ್ದರೂ ಕೂಡ ತಾಲ್ಲೂಕು ಕಛೇರಿಗಳಲ್ಲಿ ನಡೆಯುವ ಕೆಲಸಕಾರ್ಯಗಳು ಸ್ವಲ್ಪಮಟ್ಟಿಗೂ ಉತ್ತಮವಾಗಿಲ್ಲ. ಯಾವ ಕಾಗದಪತ್ರಗಳೂ ಬಹಳ ಬೇಗ ವಿಲೇವಾರಿಯಾಗುತ್ತಾ ಇಲ್ಲ. ಪ್ರತಿಯೊಂದಕ್ಕೂ ಲಂಚರುಷುವತ್ತಿಗಾಗಿ ಆಶೆಪಟ್ಟುಕೊಂಡು ಆಯಾ ಕಾಗದಗಳಿಗೆ ಸಂಬಂಧಪಟ್ಟ ಪಾರ್ಟಿಗಳು ಬರುವವರೆಗೂ ಅವು ಹೊರಗೆ ಹೋಗದೆ ಉಳಿದುಕೊಂಡಿರುತ್ತವೆ. ಹಿಂದೆ ನಾವು ಬಡ್ಜೆಟ್ ಭಾಷಣ ಮಾಡುವಾಗ ರೆವಿನ್ಯೂ ಮಂತ್ರಿಗಳಿಗೆ ಒಂದು ಮಾತನ್ನು ಹೇಳಿದ್ದೆ. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ರೆವಿನ್ಯೂ ಸಚಿವರಾಗಿದ್ದ ಕಾಲದಲ್ಲಿ ಮಾಡುತ್ತಿದ್ದಂಥ ಕ್ರಮವನ್ನು ತಿಳಿಸಿದೆ. ಅವರು ಪ್ರತಿಯೊಂದು ತಾಲ್ಲೂಕ್ ಆಫೀಸಿಗೂ ಹೋಗಿ ಅಲ್ಲಿರತಕ್ಕ ರಿಕಾರ್ಡ್‌ಗಳನ್ನು ತೆಗೆಸಿನೋಡಿ ಅವು ವಿಲೇವಾರಿ ಆಗದಿದ್ದುದಕ್ಕೆ ಕಾರಣಗಳೇನು ಎಂಬುದಾಗಿ ಹುಡುಕುತ್ತಿದ್ದರು. ಆ ಪದ್ಧತಿ ಈಗ ಇಲ್ಲದೇ ಹೋಗಿದೆ. ಮತ್ತೆ ಆ ಒಂದು ಪದ್ಧತಿಯನ್ನು ಈಗಿನ ರೆವಿನ್ಯೂ ಸಚಿವರು ಜಾರಿಗೆ ತಂದರೆ ಬಹಳ ಒಳ್ಳೆಯದಾಗುತ್ತದೆಂದು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಜಾತೀಯತೆ ಎಂಬುದು ಈ ದೇಶ

ದಲ್ಲಿ ಅದರೂಸಲ್ಲೂ ಸ್ವತಂತ್ರವಾದ ನಂತರ ತುಂಬಿ ತುಳುಕಾಡುತ್ತಿದೆ. ಜಾತ್ಯಾತೀತ ರಾಷ್ಟ್ರವಾಗಿ ಈ ದೇಶವನ್ನು ಮಾಡುತ್ತೇವೆಂದು ಹೇಳುತ್ತಾ ಬಂದವರು ಈಗ ಈ ವಿಚಾರದಲ್ಲಿ ಪ್ರಭಾವಶಾಲಿಗಳಾದ ರಾಜಕಾರಿಣಿಗಳು ಕೈ ಹಾಕಿ ಅವರ ಒಂದು ಸ್ವಾರ್ಥಕ್ಕಾಗಿ ಅದನ್ನು ಉಪಯೋಗಿಸಿದ್ದಾರೆಂಬುದಾಗಿ ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಪಿ.ಡಬ್ಲ್ಯು.ಡಿ.ಇಲಾಖೆ, ಮತ್ತೊಂದು ವಿದ್ಯಾಭ್ಯಾಸ ಇಲಾಖೆ, ಮೊಗದೊಂದು ಕೈಗಾರಿಕೆ ಇಲಾಖೆ- ಇವು ಮೂರು ಇಲಾಖೆಗಳನ್ನು ಬುದ್ಧಿ ಇರುವವರು, ತಿಳುವಳಿಕೆ ಇರುವವರು ಒಂದು ಕಡೆ ವಿಹಂಗಮವಾಗಿ ಅಲ್ಲಿ ನಡೆಯತಕ್ಕ ಕೆಲಸಕಾರ್ಯಗಳ ರೀತಿ ನೀತಿಗಳನ್ನು ನೋಡಿದರೆ ಎಷ್ಟರಮಟ್ಟಿಗೆ ಜಾತೀಯತೆ ಪ್ರಾಬಲ್ಯ ಈ ದೇಶದಲ್ಲಿ ಹರಡಿಕೊಂಡಿದೆಯೆಂಬುದು ಪ್ರತಿಯೊಬ್ಬರಿಗೂ ಮನದಟ್ಟಾಗುತ್ತದೆ. ಹಿಂದೆ ಮಾತನಾಡಿದಂಥ ನನ್ನ ಕೆಲವು ಮಿತ್ರರು ಅನೇಕ ಮಾತುಗಳನ್ನು ಬಹಳ ಸೂಕ್ಷ್ಮವಾಗಿ ಹೇಳಿದರು. ಶ್ರೀಮಾರ್ಕ ಅಂದಾನಯ್ಯನವರೂ ಸಹ ಮಾತನಾಡುತ್ತಾ ಕೆಲವು ನಿದರ್ಶನಗಳನ್ನು ಬೇರೆ ಕೊಟ್ಟರು. ಇನ್ನು ಸೆಕ್ಯುಲರ್ ಸ್ಟೇಟ್ ಆಗಿ ಈ ರಾಜ್ಯವನ್ನು ಮಾಡಬೇಕೆಂಬ ಒಂದು ವ್ಯಾಮೋಹಕ್ಕೆ ಇವರು ಹೇಗೆ ಸಿಕ್ಕಿಕೊಂಡಿದ್ದಾರೆಂಬುದನ್ನು ನಾನು ಈ ಸಭೆ ಗಮನಕ್ಕೆ ಹಾಗೂ ದೇಶದ ಪ್ರಜೆಗಳ ಗಮನಕ್ಕೆ ತರದೇಹೋದರೆ ಒಂದು ದೊಡ್ಡ ಅನ್ಯಾಯವನ್ನು ನಮ್ಮ ಜನಗಳಿಗೆ ಮತ್ತು ಸಮಾಜಕ್ಕೆ ಮಾಡಿದಂತಾಗುತ್ತದೆಂದು ನಾನಾದರೂ ಹೇಳುತ್ತೇನೆ. ಅಲ್ಲದೆ ಯಾವನಾದರೂ ಒಬ್ಬನಿಗೆ ಪ್ರೊಮೋಷನ್ ಸಿಕ್ಕುವ ಕಾಲದಲ್ಲಿ ಅವನಿಗೆ ಮೂಲೆಗೆ ಕುಳ್ಳಿರಿಸುವ ಏರ್ಪಾಡು ಮಾಡುತ್ತಿದ್ದಾರೆ. ಹಿಂದೆ ಮಹಾರಾಜರ ಕಾಲಕ್ಕೆ ಒಂದು ಜವಾಬ್ದಾರಿ ಸ್ಥಾನದ ಹುದ್ದೆಯಲ್ಲಿ ಒಬ್ಬ ಒಕ್ಕಲಿಗ ಅಧಿಕಾರಿ ಇದ್ದರೆ ಅವನ ಕೈಕೆಳಗೆ ಇನ್‌ಫೀರಿಯರ್ ಆಫೀಸರ್ಸ್ ಬೇರೆ ಜಾತಿಯವರು ಇರುತ್ತಿದ್ದರು. ಅಂದಮೇಲೆ ಇವರು ಜಾತ್ಯಾತೀತ ರಾಷ್ಟ್ರ ಮಾಡುತ್ತಿದ್ದೇವೆಂದು ಹೇಳುತ್ತಿರುವುದು ಒಂದು ಭ್ರಮೆ ಮಾತು. ಅದು ಪ್ರತಿಯೊಬ್ಬನಲ್ಲೂ ರಕ್ತಗತವಾಗಿ ಬಂದಿದೆ. ಆದರೆ ಆ ರೀತಿ ಭ್ರಮೆ ಇವರಿಗಿಲ್ಲವೆಂದು ಹೇಳಿಕೊಂಡು ಕಣ್ಣಿಗೆ ಮಣ್ಣು ಎರಚುವ ಹಾಗೆ ಮಾಡುವುದು, ಹೇಳುವುದು ಸಾಧುವಲ್ಲ; ಧರ್ಮವೂ ಅಲ್ಲ.

ಈಗ ಇಂಜಿನಿಯರಿಂಗ್ ಇಲಾಖೆಯನ್ನೇ ತೆಗೆದುಕೊಳ್ಳಿ. ಆ ಇಲಾಖೆಯಲ್ಲಿ ಮೊನ್ನೆತಾನೆ ಒಬ್ಬರು ಹೈಕೋರ್ಟಿಗೆ ರಿಟ್ ಹೋಗಿದ್ದಾರೆ. 200 ನೇ ಜಾಗದಲ್ಲಿದ್ದವರೊಬ್ಬರಿಗೆ 5ನೇ ಜಾಗಕ್ಕೆ ಪ್ರಮೋಷನ್ ಕೊಟ್ಟಿದ್ದಾರೆ. ಅವರು ಮಾಡಿದ್ದು ತಪ್ಪು ಎಂದು ಕೋರ್ಟಿನಲ್ಲಿ ಹೇಳಿದ್ದಾರೆ. ಇಂಥಾದ್ದು ಹತ್ತಾರು ನಡೆದಿವೆ. ಈ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಮೊದಲನಿಂದಲೂ ಕೊನೆಯವರೆಗೆ ಒಂದೇ ಜಾತಿಯವರಿದ್ದಾರೆ. ಹೀಗಾದರೆ ಬೇರೆ ಜಾತಿಯವರಿಗೆ ನ್ಯಾಯ ಹೇಗೆ ಸಿಕ್ಕುತ್ತದೆ? ಚಿಕ್ಕಮಗಳೂರಿನಲ್ಲಿ ಒಬ್ಬರು ಎಗ್ಸಿಕ್ಯುಟೀವ್ ಇಂಜಿನಿಯರು ಇದ್ದರು, ಅವರು ಒಳ್ಳೆಯ ಕೆಲಸಗಾರರೆಂದು ನಾವು ಕೇಳಿದ್ದೇವೆ. ಅವರಿಗೆ ಪ್ರಮೋಷನ್ ಬರತಕ್ಕ ಕಾಲದಲ್ಲಿ ಯಾವುದೋ ತಾತನಕಾಲದ ಒಂದು ಆಕ್ಷೇಪಣೆಯನ್ನು ಅವರ ಮೇಲೆ ಹೊರಿಸಿ ಅದಕ್ಕೆ ಹೇಳಿಕೆ ಕೊಡಿ, ವಿವವರಣೆ ಕೊಡಿ ಎಂದು ಅವರನ್ನು ಕೇಳುತ್ತಾ ಅವರಿಗೆ ಪ್ರಮೋಷನ್ ಸಿಕ್ಕುವುದಕ್ಕೆ ಧಕ್ಕೆಯನ್ನು ತಂದಿದ್ದಾರೆ. ಮೊನ್ನೆ ಈ ಸಭೆಯಲ್ಲಿ ಯಾವುದೋ ಒಂದು ಪ್ರಶ್ನೆಗೆ ನಾವು ಕೆಲವು ಅಂಕಿ ಅಂಶಗಳನ್ನು ಕೇಳಿದಾಗ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಜಾತೀವಾರು ನಾವು ಅಂಕಿ ಅಂಶಗಳನ್ನು ಹೇಳುವುದಕ್ಕಾಗುವುದಿಲ್ಲ. ಜಾತಿವಾರು ಅಂಕಿ ಅಂಶಗಳನ್ನು ನಾವು ಇಟ್ಟಿಲ್ಲ ಎಂದು ಹೇಳಿದರು. ಮಾನ್ಯ ಮಂತ್ರಿಗಳಾದ ವೀರೇಂದ್ರ ಪಾಟೀಲರಲ್ಲಿ ಬಹಳ ವಿನಯದಿಂದ ಒಂದು ಮಾತನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಇವರೇನು ಜಾತಿಯ ದೋಷದ ಮಾತನ್ನು ಆಡುತ್ತಿದ್ದಾರೆ, ಈ ದೇಶದಲ್ಲಿ ಇಲ್ಲದೇ ಇರತಕ್ಕಂಥ ಒಂದು ಅಲ್ಲೋಲಕಲ್ಲೋಲವನ್ನುಂಟುಮಾಡುತ್ತಾರೆ ಎಂದು ಭಾವಿಸಬಾರದು. ಇರತಕ್ಕ ವಾಸ್ತವವಾದ ಸಂಗತಿಗಳ ಕಡೆ ಗಮನ ಕೊಡಬೇಕು. ಈಗ ನೌಕರರಿಗೆ ಪ್ರಮೋಷನ್ ಕೊಡುವಾಗ ಅವರನ್ನು ಸ್ಕ್ರೀನಿಂಗ್ ಕಮಿಟಿಯವರು ಸ್ಕ್ರೀನ್ ಮಾಡಿ ಯಾರು ಪ್ರಮೋಷನ್ನ ಕೊಡುವುದಕ್ಕೆ ಯೋಗ್ಯರು ಎಂಬುದನ್ನು ಶಿಫಾರಸ್ಸು ಮಾಡತಕ್ಕಂಥ ಒಂದು ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ ಈ ಸ್ಕ್ರೀನಿಂಗ್ ಕಮಿಟಿಯಲ್ಲಿ ಯಾರೋ ಒಬ್ಬರು ಸೂಪರಿಂಟೆಂಡೆಂಟರೋ ಅಥವಾ ಮ್ಯಾನೇಜರೋ ಇರುತ್ತಾರೆ, ಮತ್ತು ಇನ್ನಿಬ್ಬರು ಬೇರೆಯಾರನ್ನಾದರೂ ಹಾಕಿರುತ್ತಾರೆ. ಅವರು ಕುಳಿತುಕೊಂಡು 25—28 ವರ್ಷ ಸರ್ವೀಸ್ ಆಗಿರತಕ್ಕ ನೌಕರರನ್ನು 2 ನಿಮಿಷಗಳಲ್ಲಿ ಸ್ಕ್ರೀನ್ ಮಾಡುತ್ತಾರೆ. ಹಾಗೆ ಸ್ಕ್ರೀನ್ ಮಾಡುವಾಗ ಕೆಲವರು 25—28 ವರ್ಷ ಸರ್ವೀಸ್ ಆಗಿದ್ದರೂ ಅವರನ್ನು ಮೂಲೆಗೆ ಹಾಕುತ್ತಾರೆ. ಈ ರೀತಿ ಮಾಡಿದರೆ ಕೆಲಸಗಾರರಲ್ಲಿ ಏನು ನಂಬಿಕೆ ಇರುತ್ತದೆ? ಇದರಲ್ಲಿ ಏನಾದರೂ ಒಂದು ನ್ಯಾಯ ನೀತಿ ಧರ್ಮ ಇದೆಯೇ ಎಂದು ನಾನು ಕೇಳುತ್ತೇನೆ. ಆ ಜಾಗದಲ್ಲಿರತಕ್ಕವರು ಏನಾದರೂ ಕಂಪ್ಲೇಂಟ್ ಕೊಟ್ಟರೆ ಅವರು ಮನೆಗೆ ಹೋಗಬೇಕಾಗುತ್ತದೆ, ಅಂಥಾ ಪರಿಸ್ಥಿತಿ ಬರುತ್ತದೆ. ಈ ಇಲಾಖೆಯಲ್ಲಿ ಜಾತೀಯತೆ ತಾಂಡವವಾಡುತ್ತಿದೆ. ಈಗ ಹೊಸದಾಗಿ ಒಬ್ಬರು ಚೀಫ್ ಇಂಜಿನಿಯರು ಬಂದಿದ್ದಾರೆ. ಅವರು ಎಷ್ಟರಮಟ್ಟಿಗೆ ಕೆಲಸಮಾಡುತ್ತಾರೆ ಎನ್ನುವ ವಿಷಯದಲ್ಲಿ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ನನ್ನ ತಾಲ್ಲೂಕಿನಲ್ಲಿ ಸಾಮಾನ್ಯವಾಗಿ

(ಶ್ರೀ ಟಿ. ಎನ್. ಮಾದಪ್ಪ ಗೌಡ)

ಸುಮಾರು 20-25 ಇಂಚು ಮಳೆ ಆಗುತ್ತದೆ. ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಅಲ್ಲಿ ಮಳೆಯೇ ಇರುವುದಿಲ್ಲ. ಅಂಥಾ ಕಡೆ ಸರ್ಕಾರಕ್ಕೆ ಎಷ್ಟು ಖರ್ಚು ಬಂದರೂ ಕೂಡ ಅಲ್ಲಿ ಕೆಲಸ ಕಾರ್ಯಗಳನ್ನು ಮಾಡಬೇಕು. ಅಲ್ಲಿ ಒಂದು ಕೆಲಸಕ್ಕೆ ಎಸ್ಟಿಮೇಟ್ ಅಪ್ರೂವ್ ಆಗಿದೆ. ಹೀಗಿದ್ದರೂ ಕೂಡ ಇಂಜಿನಿಯರುಗಳಿಗೆ ಅಲ್ಲಿ ಬರಬೇಕಾದ ಒಂದೆರಡು ಪರ್ಸೆಂಟ್ ಗಿಟ್ಟದೆ ಇರುವುದರಿಂದ ಕೆಲಸವನ್ನೇ ನಿಲ್ಲಿಸಿದ್ದಾರೆ. ಆ ಕೆಲಸವನ್ನು ಮಾಡಬೇಕೆಂದು ಮುಖ್ಯ ಮಂತ್ರಿಗಳೂ ಕೂಡ ಅಪ್ಪಣೆ ಕೊಡಿಸಿದ್ದಾರೆ. ಆದರೂ ಸಹ ಆ ಕೆಲಸವನ್ನು ಮಾಡದೆ ಆ ಕೆಲಸಕ್ಕೆ ಸಂಬಂಧಪಟ್ಟ ರೆಕಾರ್ಡ್ ವಾಪಸ್ಸು ಬಂದಿದೆ. ಹೀಗಾದರೆ ಬಡವರು ಹೇಗೆ ಬದುಕಬೇಕು ? ಹಳೆಯ ಮೈಸೂರಿಗೆ ಹೊಸ ಪ್ರದೇಶಗಳು ಬಂದವು. ಅದೇನು ನಮ್ಮ ಗ್ರಹಚಾರವೋ ಏನೋ ಹಿಂದಿನವರು ಇದನ್ನು ಏತಕ್ಕೆ ಒಪ್ಪಿಕೊಂಡರೋ ಗೊತ್ತಿಲ್ಲ. ಕನ್ನಡ ಜನಗಳೆಲ್ಲರೂ ಒಂದಾಗಿ ಒಂದು ಕಡೆ ಬಾಳಬೇಕು ಎಂದು ಮಾಡಿದರು. ಆದರೆ ಈಗ ಹಳೆಯ ಮೈಸೂರಿಗೆ ಸರಿಯಾದ ನ್ಯಾಯ ದೊರಕುತ್ತಾ ಇಲ್ಲ. ಕೆಲವರು ಗುಂಪು ಕಟ್ಟಿಕೊಂಡು ಬಲಹೀನರಾದವರನ್ನು ತುಳಿಯತಕ್ಕ ಏರ್ಪಾಡು ಮಾಡತಕ್ಕಂಥಾದ್ದನ್ನು ನಾವು ಖಂಡಿತ ಸಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇವೊತ್ತಲ್ಲ ನಾಳೆ ಮೈಸೂರು ಎರಡು ಭಾಗ ಆಗಿಯೇ ತೀರಬೇಕು. ಇನ್ನು ಮುಂದಾದರೂ ಕೂಡ ಇಂಥಾ ತಪ್ಪುಗಳು ಆಗದ ರೀತಿಯಲ್ಲಿ ಮಾಡಬೇಕು. ದೊಡ್ಡ ದೊಡ್ಡ ಹುದ್ದೆಗಳಲ್ಲಿ ಸಾಮಾನ್ಯವಾಗಿ ಒಬ್ಬರು ಲಿಂಗಾಯತರು ಇದ್ದರೆ. ಇನ್ನೊಬ್ಬರು ಒಕ್ಕಲಿಗರು ಅಥವಾ ಬೇರೆ ಮತಸ್ಥರು ಇರಬೇಕು. ಆ ರೀತಿ ವ್ಯವಸ್ಥೆ ಮಾಡಬೇಕು. ಮತ್ತು ಆಫೀಸಿನಲ್ಲಿ ದೊಡ್ಡ ದೊಡ್ಡ ಆಫೀಸರುಗಳು ಸಾಮಾನ್ಯವಾಗಿ ಒಬ್ಬರಿಗೊಬ್ಬರು ಕಾಂಟ್ರಾಕ್ಟ್ ಮಾಡದ ರೀತಿಯಲ್ಲಿ ಅವರನ್ನು ಇಡಬೇಕು. ಚೀಫ್ ಇಂಜಿನಿಯರ್ ಆಫೀಸಿನಲ್ಲಿ 8 ಜನ ಚೀಫ್ ಇಂಜಿನಿಯರುಗಳೂ ಒಬ್ಬೊಬ್ಬರೂ ಬೇರೆ ಬೇರೆಯಾಗಿರಬೇಕು. ಮತ್ತು ಇನ್ನೊಂದು ಏನೆಂದರೆ ಒಂದೇ ಕಡೆ ದೊಡ್ಡ ದೊಡ್ಡ ಹುದ್ದೆಗಳಲ್ಲಿ ಒಂದೇ ಜಾತಿಯವರು 4—5 ಜನ ಇರುವುದು ನಮಗೆ ಸಹಿಸುವುದಕ್ಕೆ ಸಾಧ್ಯವಿಲ್ಲ. ಇದರಿಂದ ಒಂದೇ ಕೋಮಿನವರಿಗೆ ಉಪಯೋಗವಾಗಿ ಇತರರಿಗೆ ಅನ್ಯಾಯ ವಾಗುತ್ತದೆ. ಇಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† **Smt. MURARI KAMALAMMA** (Hospet).—[Telugu].

Sri C. J. MUCKANNAPPA.—Sir, when members cannot speak either in Kannada or English, there must be some arrangement to record such speeches. The hon'ble lady member has spoken very well but nothing has gone into records. May I request the Chair to at least taperecord such speeches. Otherwise what is the good of making such good speeches,

Mr. DEPUTY SPEAKER.—We will get the speech from her and record it.

5-30 P.M.

Sri V. S. PATIL (Belgaum I).—Sir, there is a common complaint which I have also made about making arrangements in the House for recording speeches made other than in Kannada or English. That is a long standing grievance of non-Kannada people and I hope the Government will make arrangements to record such speeches.

Sir, there are before us a dozen Demands totalling about Rs. 72,27,61,000. Perhaps this is the biggest amount that will be discussed on the floor of the House on any day. These Demands include amongst other things, General Administration and Public Works. These are two important Demands which are most extravagant in expenditure. Before independence the Public Works Department was known as Public Waste Department. After independence we were expecting that more

work would take place and this Department would become more useful department. We still maintain that wastage in this department must be stopped and it must really become Public Works Department. According to the speech of the hon'ble Finance Minister the coming year is a deficit year. He has clearly stated at several places in his speech that the economy will have to be resorted to and wastage stopped. These are the two departments wherein a major portion of our budget is spent. If we look to the works that have been mentioned in the budget as well as in the Memorandum, it has absolutely no trace of any curtailment in these departments. There is not even an indication to show that some curtailment in the expenditure will be effected in these two departments.

Sir, when we look to the deficiency in the money Market and the wording used by the Hon'ble Finance Minister in his speech at page 23, he has said it is obvious that if Government which invests money does not get back returns in stages, either by taxes or otherwise, then it is no more than bleeding the Treasury and landing ourselves in trouble." The Hon'ble Minister himself has stated like this. Then what the is remedy he has suggested? He has stated that from 20 to 30 per cent of the staff could be retrenched and so much expenditure could be saved. But if we look to the administrative side of these Departments, there is not a single pie that could be saved or the expenditure could be lessened. May I remark that the words expressed by the Hon'ble Finance Minister in his Address in this House are simply meant to get the votes of this House. That is a problem before us. Sir, so far as the general administration is concerned on page 169 to 170 of the Budget, there are provisions for District Development Councils. Sir, we know for the last 4 years how this District Development councils are working. The Deputy Commissioners, Presidents of Taluk Boards and Secretaries, some District Officers and M.L.As. of the Districts are members of the Council. But what is the work turned out by these District Development Councils? The members simply go there when the meetings are called—the Deputy Commissioner give some sermen, read some letters and orders from Government and ask his Officers what work has been turned out and finally the meeting will be ended with a cup of Tea or Coffee or without that sometimes. This is the way in which these Development Councils are working. They are not Councils—they are merely some sort of bogus Councils doing nothing. We are tired of it. I have decided not to attend. They are wasting public money. I submit Sir, that those District Development Councils must be scraped at least from 1st April 1965 and thereby we can save Rs. 2,67,000 per year, because there is no use of keeping them. They are doing nothing. No member from the public can take part. Even if he takes part, no proposal or amendment can be made—nothing at all. So, we cannot spare our time to attend such Council meetings. It is merely a waste of time. So, I request the Minister in-charge to scrap this kind of body which is in existence only on paper.

Sir, there is another thing I would like to suggest that since we are short of funds, it is better that the construction of buildings by the

(SRI V. S. PATIL)

Public Works Department must be postponed to some other date till our finances are improved. For the buildings constructed during the last 8 to 10 years, I think, the amount spent on them is more than 50 crores. I do not know why this Department is so much bent upon constructing new buildings. In my place, that is in Belgaum, they have constructed so many buildings. The work of the Collector's Office and Division offices were conducted by the then Bombay Government without these buildings. After the integration of this part to this State, the work which is done by this Government is construction of buildings. They have added a huge building to the Divisional Commissioner's Office. They have added so many buildings for District and Session's Court. Then they have constructed other buildings relating to the Education Department. Even the play-ground which was quite essential for the Government High School is practically wiped out by construction of the buildings. I do not understand why this Government is having this building mania. This action of the Government tend to suspecion that they wants to give a substantial profit—I do not know whether to Officers or to Contractors. That aepears to be the main reason why the Government is pushing with the erection of these buildings. Whether these buildings are useful or not, they go ahead with the work. Some persons must have earned some lakhs of rupees. Therefore, I request the Hon'ble Minister in-charge of this Department to drop these works, *i.e.*, new building works.

If we can make a survey, we can find out so many other works which could be curtailed. Especially in these big irrigation projects, we are pouring money like anything. Even according to the admission of the Hon'ble Minister in charge of Public Works, we are running into heavy debts for these big projects, and what is the return? The return is not commensurate even with the interest, even though eight or ten years have elapsed since the completion of these big projects. Hence, I should like to submit that before we take up these big projects of irrigation, it is our first and foremost duty to educate the people as to how and in what why the irrigation crops can be raised and must be raised, how and in what season what crops are to be taken up and how the water for this irrigation is to be utilised. Unless we educate the people, who are to use this water, it will be merely a waste and that is the experience of eight or ten years. That is why, before we take up these big projects, it is quite essential in the interest of our State that the people must be educated for this purpose.

I should like to say one more thing because it refers to both the Departments of General Administration as well as Public Works. Sir, there is one Executive Engineer in our Belgaum District in Chikodi Division. There are complaints against him. I do not know what the Government have done. I have got to record to show......

MR. DEPUTY SPEAKER.—Complaints against individuals should not be brought on the Floor of the House.

Sri V. S. PATIL.—I am merely designating the Officer.

Mr. DEPUTY SPEAKER.--Complaints even against idividuals officers should not be bought before the House.

Sri V. S. PATIL.—I want to bring to the notice of the Government how public money is wasted. Sir, that particular officer has spent and given Fifty thousand rupees towards hire charges to bring articles worth fifteen thousand rupees for a distance of 43 miles. Can you imagine such a thing ? These things are there on paper. Even complaints have been filed against that particular officer to the Government have done absolutely nothing.

Sri VEERENDRA PATIL.—How do you say that Government is keeping mum and they are not taking any action ? Our Audit Cell people had been there and they have submitted a report and Government is considering that report.

Sri V. S. PATIL.—This is a case wherein the officer ought to have been removed at least from that place. But the Government have done nothing. That is why I am charging the Government. If you do not want to suspend him, at least remove him from that place and keep him somewhere else and enquire. I do not know whether it is due to the cause which my friend Sri N. Madappa Gowda stated a few minutes back, *i.e.*, casteism or communalism or something of the sort- I am not going to touch it. I have simply brought to the notice of the Government that people should not think that a particular community is ruling the State and that if a man belongs to a particular community he is immuned from everything. It is harmful not only to the State, but to the whole of our country. That is why I am placing this matter before this House. Sir, there is one small matter which refers to this Department. In our Taluk Development Board a scheme is taken up for drinking water supply. The matter was referred by the Taluk Development Board to the Supply Officer to supply Cement in January. We enquired about it. The Supply Officer says that he has not received any correspondence at all. What is this chaotic condition ? How people can improve their lot under these circumstances ? We will come and shout here, but we will not approach and request those officers by giving something. The water supply scheme is practically held up. Even though the records of the local office show that they have sent the correspondence in January. The Supply officer definitely says that they are not received. Then, where it has gone ? If we pay something, tomorrow the papers will be on the Table. But we are not going to pay. There fore, I request that efficiency must improve and corruption must altogether disappear. Then alone there will be some hope for the future.

Sri Y. MANJAIAH SHETTY (Baindur).—Mr. Speaker, Sir, in supporting the Demands under discussion, I wish to make certain observations. I wish to deal with Ports in the first instance. Few years back, the ex-Mysore Government felt the necessity of having a Port and tried to have Bhatkal Port, Which was in Bombay State.

(SRI Y MANJAIAH SHETTY)

I am referring to this, because even in those days Mysore State had felt the necessity of a Port. They failed in their attempts, because I think, the British Government, then ruling the country, did not agree to part with Bhatkal Port. Fortunately, with the reorganisation of States, Mysore State is fortunate in having about 22 minor Ports right from Mangalore to Karwar on a coastal belt of 200 miles. Efforts are being made by the Government to develop all these minor Ports. All these minor Ports have been included in the Third Five-Year Plan and substantial financial provision is also made in the Third Five-Year Plan for the development of these m'nor Ports. Now we are happy to note that Mangalore is going to be a major port and the Central Government has come forward to have it as a harbour. All efforts are made to improve the Mangalore Port. Apart from that, efforts are also being made to have Karwar also as Fair Weather Port. In between, there are other Ports like Coondapur, Honnavar and Malpe. Financial Provision, as I said earlier, has also been provided in the III Five-Year Plan for the development in these ports. Though the State Government wanted to improve the minor ports, I am sorry, that very little has been done in this regard. I do not wish to lay any blame on any official or the Minister in-charge of Ports. But, somehow or other, there was considerable delay in the improvement and development of these minor Ports. Next to Mangalore port in South Kanara District, Coondapur Port has a great future. Large quantities of Iron ore are exported from that Port and millions of tons of ore are likely to be exported from Kodachadri and Kotebare the development of this Port was included in the Third Five-Year Plan and provision of fifteen lakhs of rupees is provided for the development of this Port. I humbly ask the Minister in-charge of Ports, what is the amount that is so far spent for the improvement of Coondapur port ?

Mr. DEPUTY SPEAKER.—The Hon'ble Member may continue to morrow. The House will now rise and reassemble tomorrow at 12 NOON.

The House adjourned at Six of the Clock to meet again at Twelve of the Clock on Friday, the 12th March 1965.

W.D 4688—GPB—500—2-7-65.